23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ


# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 291 | ನವದೆಹಲಿ | ಬೆಲೆ ₹10 | ಏಪ್ರಿಲ್ 27 2026, ಸೋಮವಾರ



## ನಿತ್ಯ ಪಂಚಾಂಗ 27.04.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ-ವಸಂತ ಋತು, ಚಾಂದ್ರಮಾನ, ಚೈತ್ರ-ವೈಶಾಖ ಮಾಸ

ವೈಶಾಖ ಶುದ್ಧ, ಏಕಾದಶಿ, ಪುಬ್ಬ ನಕ್ಷತ್ರ, ಸರ್ವತ್ರ/ಮೋಹಿನೀ ಏಕಾದಶಿ, ಎಚ್.ಡಿ.ಕೋಟೆ ವರದರಾಜ/ರೋಣ ರಥ, ತಲಕಾಡು ಜಾತ್ರೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ಬಿಜೆಪಿ ಸೇರಿದ 7 ರಾಜ್ಯಸಭಾ ಸದಸ್ಯರಿಗೆ ಕೇಂದ್ರದ ಭದ್ರತೆ: ಪಂಜಾಬ್ ಸರ್ಕಾರದಿಂದ ರಕ್ಷಣೆ ವಾಪಸ್



ನವದೆಹಲಿ: ಕೆಲ ದಿನಗಳ ಹಿಂದೆಯಷ್ಟೇ ಆಮ್ ಆದ್ಮಿ ಪಕ್ಷ (ಎಎಪಿ) ತ್ಯಜಿಸಿ ಬಿಜೆಪಿಗೆ ಸೇರ್ಪಡೆಯಾಗಿರುವ ಮಾಜಿ ಕ್ರಿಕೆಟಿಗ ಹರ್ಭಜನ್ ಸಿಂಗ್ ಮತ್ತು ರಾಘವ್ ಛಡ್ಡಾ ಸೇರಿದಂತೆ 7 ರಾಜ್ಯಸಭಾ ಸದಸ್ಯರಿಗೆ ಕೇಂದ್ರ ಗೃಹ ಸಚಿವಾಲಯ ಕೇಂದ್ರ ಭದ್ರತಾ ಪಡೆಯ ರಕ್ಷಣೆ ನೀಡಲು ನಿರ್ಧರಿಸಿದೆ.

ಆಪ್ ನೇತೃತ್ವದ ಪಂಜಾಬ್ ಸರ್ಕಾರವು ತನ್ನ ಮಾಜಿ ಸಂಸದರಿಗೆ ನೀಡಿದ್ದ ಭದ್ರತೆಯನ್ನು ಹಿಂತೆಗೆದುಕೊಂಡ ಕೆಲವೇ ಗಂಟೆಗಳಲ್ಲಿ ಈ ಮಹತ್ವದ ಬೆಳವಣಿಗೆ ನಡೆದಿದೆ. ಸಿಂಗ್, ಛಡ್ಡಾ ಸೇರಿದಂತೆ ಇತರರಿಗೆ ಬೆದರಿಕೆ ಬಂದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ತಳೆದಿದೆ.

ಟರ್ಬನೇಟರ್' ಎಂದೇ ಖ್ಯಾತರಾಗಿರುವ ಹರಭಜನ್ ಸಿಂಗ್ ಅವರಿಗೆ ಇನ್ಮುಂದೆ ದೆಹಲಿ ಮತ್ತು ಪಂಜಾಬ್ ಎರಡೂ ಕಡೆ ಸಿಆರ್‌ಪಿಎಫ್ ಕಮಾಂಡೋಗಳು ಭದ್ರತೆ ನೀಡಲಿದ್ದಾರೆ ಎಂದು ಕೇಂದ್ರದ ಅಧಿಕಾರಿಗಳು ತಿಳಿಸಿದ್ದಾರೆ.

ಜಲಂಧರ್‌ನಲ್ಲಿರುವ ಹರ್ಭಜನ್ ಸಿಂಗ್ ನಿವಾಸದ ಮುಂದೆ ಆಪ್ ಬೆಂಬಲಿಗರು ಇತ್ತೀಚೆಗೆ ಪ್ರತಿಭಟನೆ ನಡೆಸಿ, ಅವರ ಮನೆಯ ಗೋಡೆಗಳ ಮೇಲೆ "ಪಂಜಾಬ್‌ನ ದ್ರೋಹಿ" ಎಂದು ಬರೆದಿದ್ದರು. ಈ ಸಮಯದಲ್ಲಿ ಅಲ್ಲಿಯೇ ಇದ್ದ ಪೊಲೀಸರು ಮಧ್ಯಪ್ರವೇಶಿಸದಿದ್ದುದು ಭದ್ರತಾ ವೈಫಲ್ಯದ ಬಗ್ಗೆ ಕಳವಳ ಮೂಡಿಸಿತ್ತು.

ರಾಜ್ಯ ಭದ್ರತೆ ಹಿಂತೆಗೆತ: ಪಂಜಾಬ್‌ನ ಸಿಎಂ ಭಗವಂತ್ ಮಾನ್ ನೇತೃತ್ವದ ಸರ್ಕಾರವು ಮಾಜಿ ಕ್ರಿಕೆಟರ್‌ಗೆ ನಿಯೋಜಿಸಲಾಗಿದ್ದ 9 ರಿಂದ 10 ಮಂದಿ ಭದ್ರತಾ ಸಿಬ್ಬಂದಿ ಮತ್ತು ಅಧಿಕೃತ ವಾಹನಗಳನ್ನು ವಾಪಸ್ ಪಡೆದಿತ್ತು.

ಇತರ ಸಂಸದರಿಗೂ ಭದ್ರತೆ: ಹರಭಜನ್ ಸಿಂಗ್ ಮಾತ್ರವಲ್ಲದೆ, ಇತ್ತೀಚೆಗೆ ಎಎಪಿ ತೊರೆದು ಬಿಜೆಪಿ ಸೇರಿರುವ ಇತರ ರಾಜ್ಯಸಭಾ ಸದಸ್ಯರಾದ ಸಂದೀಪ್ ಪಾಠಕ್, ಅಶೋಕ್ ಮಿತ್ತಲ್, ಸ್ವಾತಿ ಮಲಿವಾಲ್, ರಾಜೇಂದ್ರ ಗುಪ್ತಾ ಮತ್ತು ವಿಕ್ರಮಜಿತ್ ಸಾಹ್ನಿ ಅವರಿಗೂ ಕೇಂದ್ರ ಸರ್ಕಾರ ಸಿಆರ್‌ಪಿಎಫ್ ಭದ್ರತೆ ಒ



ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನ ಶಾರದಾನಗರ ಹಾಗೂ ಹೊನ್ನವಳ್ಳಿಯಲ್ಲಿ ಪ್ರಗತಿಯಲ್ಲಿರುವ ರೈಲ್ವೇ ಮೇಲ್ಸೇತುವೆ ಕಾಮಗಾರಿಯನ್ನು ಕೇಂದ್ರ ಸಚಿವ ವಿ.ಸೋಮಣ್ಣ ರೈಲ್ವೇ ಅಧಿಕಾರಿಗಳೊಡನೆ ಪರಿವೀಕ್ಷಿಸಿದರು.




ಬೆಂಗಳೂರಿನ ಯಲಹಂಕ ರೈಲ್ವೇ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳನ್ನು ರಾಜ್ಯ ರೈಲ್ವೆ ಸಚಿವ ವಿ.ಸೋಮಣ್ಣ ಪರಿಶೀಲನೆ ನಡೆಸಿದರು.

# ಇಂಡಿ ಕೂಟದಿಂದ ಉತ್ತರ-ದಕ್ಷಿಣ ವಿಭಜನೆ ಸೃಷ್ಟಿಸುವ ಯತ್ನ: ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪ

### ಮಹಿಳಾ ಮೀಸಲಾತಿ ಜಾರಿಗೆ ಅಡ್ಡಿಪಡಿಸಲು ಜನರಿಗೆ ತಪ್ಪು ಮಾಹಿತಿ



ಬೆಂಗಳೂರು, ಏ.26: ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಉತ್ತರ-ದಕ್ಷಿಣ ವಿಭಜನೆ ಸೃಷ್ಟಿಸಲು ಪ್ರಯತ್ನ ನಡೆಸುತ್ತಿದೆ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಿಸಿದರು.

ಫ್ರೀಡಂ ಪಾರ್ಕ್‌ನಲ್ಲಿ ಬಿಜೆಪಿ ಮಹಿಳಾ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ವಿಧೇಯಕದ ವಿಚಾರವನ್ನು ಉಲ್ಲೇಖಿಸಿ ಈ ಮಹತ್ವದ ಕಾನೂನು ಪ್ರಕ್ರಿಯೆಗೆ ಅಡ್ಡಿಪಡಿಸಲು ಪ್ರತಿಪಕ್ಷಗಳು ತಪ್ಪು ಮಾಹಿತಿಯನ್ನು ಹರಡುತ್ತಿದ್ದಾರೆಂದು ಕಿಡಿಕಾರಿದರು. ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ವಿಧೇಯಕವನ್ನು ತಡೆಯಲು ಕಾಂಗ್ರೆಸ್ ಮತ್ತು ಅದರ ಮೈತ್ರಿ ಪಕ್ಷಗಳು ಡಿಲಿಮಿಟೇಶನ್ (ಕ್ಷೇತ್ರ ಪುನರ್ವಿಂಗಡಣೆ) ವಿಚಾರವನ್ನು ರಾಜಕೀಯವಾಗಿ ಬಳಸಿಕೊಂಡಿವೆ ಎಂದು ಆರೋಪಿಸಿದರು. ದಕ್ಷಿಣ ಭಾರತಕ್ಕೆ ಅನ್ಯಾಯವಾಗುತ್ತದೆ ಎಂಬ ಭಯವನ್ನು ಉಂಟುಮಾಡಿ ಜನರನ್ನು ತಪ್ಪು ದಾರಿಗೆಳೆದು, ವಿಧೇಯಕದ ವಿರುದ್ಧ ವಾತಾವರಣ ಸೃಷ್ಟಿಸಿದ್ದಾರೆ ಎಂದು ಹೇಳಿದರು.

**ಡಿಲಿಮಿಟೇಶ್‌ನಿಂದ ದಕ್ಷಿಣ ರಾಜ್ಯಗಳಿಗೆ ಹಾನಿಯಿಲ್ಲ**

ಇದೇ ವೇಳೆ ಕ್ಷೇತ್ರ ಮರುವಿಂಗಡನೆ ಪ್ರಕ್ರಿಯೆಯ ಕುರಿತು ವಿವರಿಸಿದ ಅವರು, ಇದು ದಕ್ಷಿಣ ರಾಜ್ಯಗಳಿಗೆ ಹಾನಿಕಾರಕವಲ್ಲ, ಬದಲಾಗಿ ಲಾಭದಾಯಕವಾಗಿದೆ ಎಂದು ಹೇಳಿದರು.ಕರ್ನಾಟಕದಲ್ಲಿ ಈಗಿರುವ 28 ಲೋಕಸಭಾ ಕ್ಷೇತ್ರಗಳ ಜೊತೆಗೆ 14 ಸ್ಥಾನ ಹೆಚ್ಚಾಗಿ 42 ಆಗುವ ಸಾಧ್ಯತೆ ಇದೆ. ಕೇರಳದಲ್ಲಿ 20ರಿಂದ 30ಕ್ಕೆ, ತಮಿಳುನಾಡಿನಲ್ಲಿ 39ರಿಂದ 78ಕ್ಕೆ ಏರಿಕೆಯಾಗುವ ಅಂದಾಜು ಇದೆ. ಹೀಗಾಗಿ ದಕ್ಷಿಣ ಭಾರತದ ಪ್ರತಿನಿಧಿತ್ವ ಕಡಿಮೆಯಾಗುತ್ತದೆ ಎಂಬ ವಾದ ಅಸತ್ಯ ಎಂದು ಶೋಭಾ ಕರಂದ್ಲಾಜೆ ಹೇಳಿದರು.

ಇನ್ನು ಮಹಿಳಾ ಮೀಸಲಾತಿ ವಿಧೇಯಕವು ಮಹಿಳೆಯರಿಗೆ ರಾಜಕೀಯದಲ್ಲಿ 33 ಶೇಕಡಾ ಪ್ರತಿನಿಧಿತ್ವ ನೀಡುವ ಉದ್ದೇಶ ಹೊಂದಿದ್ದು, ಇದು ಐತಿಹಾಸಿಕ ಹೆಜ್ಜೆಯಾಗಿದೆ ಎಂದು ಹೇಳಿದರು.2023ರಲ್ಲಿ ಲೋಕಸಭೆಯಲ್ಲಿ ಈ ವಿಧೇಯಕ ಅಂಗೀಕರಿಸಲ್ಪಟ್ಟಿದ್ದರೂ, ಅದರ ಜಾರಿಗೆ ಸಂಬಂಧಿಸಿದ ಪ್ರಕ್ರಿಯೆಗಳು ಇನ್ನೂ ಮುಂದುವರಿದಿವೆ. ಲೋಕಸಭೆಯ ಸ್ಥಾನಗಳನ್ನು 543ರಿಂದ 850ಕ್ಕೆ ಹೆಚ್ಚಿಸುವ ಪ್ರಸ್ತಾವನೆಯೂ ಮೀಸಲಾತಿಯ ನ್ಯಾಯಯುತ ವಿತರಣೆಯ ಉದ್ದೇಶವನ್ನು ಹೊಂದಿದೆ. ನ್ಯಾಯಸಮ್ಮತ ಪ್ರತಿನಿಧಿತ್ವಕ್ಕಾಗಿ ಈ ಕ್ರಮ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಇದೇ ವೇಳೆ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಜನರನ್ನು ತಪ್ಪು ಮಾಹಿತಿಯಿಂದ ಗೊಂದಲಕ್ಕೆ ದೂಡುವ ಮೂಲಕ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿದ್ದಾರೆ. ಉತ್ತರ ಮತ್ತು ದಕ್ಷಿಣ ನಡುವಿನ ಭಿನ್ನತೆ ಹೆಚ್ಚಿಸುವುದು ದೇಶದ ಏಕತೆಗೆ ಹಾನಿಕಾರಕ ಎಂದು ಎಚ್ಚರಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪದ್ಮಶ್ರೀ ಪುರಸ್ಕೃತ ಸುಶೀಲಮ್ಮ ಅವರು ಮಹಿಳೆಯರಿಗೆ ಸಂಘಟಿತ ಹೋರಾಟಕ್ಕೆ ಕರೆ ನೀಡಿದರು.33 ಶೇ. ಮೀಸಲಾತಿ ಸಂಪೂರ್ಣ ಜಾರಿಗೆ ಬರಲು ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಮಹಿಳಾ ಸಬಲೀಕರಣಕ್ಕೆ ಈ ವಿಧೇಯಕ ಮಹತ್ವದ ಸಾಧನವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು.

# ಯಾರೇ ದೆಹಲಿಗೆ ಹೋದರೂ ರಾಜಕೀಯ ಲೇಪನ ಮಾಡುವುದು ಸರಿಯಲ್ಲ: ಸತೀಶ್ ಜಾರಕಿಹೊಳಿ



ಹುಬ್ಬಳ್ಳಿ, ಏ.26: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಲಾಖೆ ವಿಚಾರದ ಮೇಲೆ ದೆಹಲಿಗೆ ಹೋಗಿದ್ದಾರೆ. ಯಾರೇ ದೆಹಲಿಗೂ ಹೋದರೂ ಅದಕ್ಕೆ ರಾಜಕಾರಣ ಲೇಪನ ಮಾಡುವುದು ಸರಿಯಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಚಾರವು ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟದ್ದು.ಯಾರಿಗೆ ಸಚಿವ ಸ್ಥಾನ ನೀಡಬೇಕು, ಯಾವ ಸ್ಥಾನ ನೀಡಬೇಕು ಎನ್ನುವುದು ನಮ್ಮ ವ್ಯಾಪ್ತಿಯಲ್ಲಿಲ್ಲ.

ಹಿರಿಯ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಬೇಕೋ ಅಥವಾ ಇಂಥಹವರಿಗೆ ಅವಕಾಶ ನೀಡಬೇಕು ಎಂದು ಹೈಕಮಾಂಡ್ ನಿರ್ಧರಿಸಿದರೆ ಅದಕ್ಕೆ ನಾವೆಲ್ಲರೂ ಒಪ್ಪಿಕೊಳ್ಳಬೇಕು. ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ವಿಚಾರದ ಬಗ್ಗೆ ಎಲ್ಲಿಯೂ ಚರ್ಚೆಗಳಾಗಿಲ್ಲ. ಈ ಪ್ರಶ್ನೆಗಳಿಗೆಲ್ಲಾ ಹೈಕಮಾಂಡ್ ಹಿರಿಯರೇ ಉತ್ತರ ಕೊಡಬೇಕು ಎಂದರು.

ಒಳಮೀಸಲಾತಿ ವಿಚಾರದಲ್ಲಿ ನ್ಯಾಯಾಲಯದ ತಡೆಗೆ ಎಲ್ಲರೂ ತಲೆ ಬಾಗಲೇಬೇಕು. ಬಿಜೆಪಿಯವರು ಸುಖಾಸುಮ್ಮನೆ ನಮ್ಮ ಮೇಲೆ ಆರೋಪ ಮಾಡುತ್ತಾರೆ. ರಾಜಕಾರಣಕ್ಕಾಗಿ ವಾಸ್ತವ ಮರೆಮಾಚಿ ಹೇಳಿಕೆ ನೀಡುವುದು, ಆರೋಪ ಮಾಡುವುದು ಸರಿಯಲ್ಲ. ಬಿಜೆಪಿಯವರು ಪ್ರತಿಯೊಂದು ವಿಚಾರದಲ್ಲಿ ಜನರನ್ನು ತಪ್ಪು ದಾರಿಗೆ ಎಳೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಸತೀಶ್ ಜಾರಕಿಹೊಳಿ ಹೇಳಿದರು.


# ರಾಜಕೀಯ ಮೇಲಾಟದ ನಡುವೆ ಆಸ್ಪತ್ರೆಗಳ ನಿರ್ಲಕ್ಷ್ಯ

### ಸರ್ಕಾರದ ವಿರುದ್ಧ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪ



ಬೆಂಗಳೂರು, ಏ.26: ಆಂತರಿಕ ಕಚ್ಚಾಟ, ರಾಜಕೀಯ ಮೇಲಾಟ, ಬಣ ಬಡಿದಾಟ, ಇವುಗಳಲ್ಲೇ ಮುಳುಗಿರುವ ರಾಜ್ಯ ಸರ್ಕಾರವು ಆರೋಗ್ಯ ಇಲಾಖೆಯನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿ ಸರ್ಕಾರಿ ಆಸ್ಪತ್ರೆಗಳನ್ನು ಅಧೋಗತಿಗೆ ತಳ್ಳಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದ ಆರೋಗ್ಯ ಇಲಾಖೆ ಅನಾರೋಗ್ಯ ಪೀಡಿತವಾಗಿದೆ, ಸರ್ಕಾರಿ ಆಸ್ಪತ್ರೆಗಳು ಕೋಮಾ ಸ್ಥಿತಿಯಲ್ಲಿವೆ ಎಂದು ಅಧಿವೇಶನದಲ್ಲಿ ಪ್ರಸ್ತಾಪಿಸಿದಾಗ, ಎಲ್ಲವೂ ಸರಿಯಿದೆ ಎಂದು ತಿಪ್ಪೆ ಸಾರಿಸುವ ಮಾತಾಡಿದ್ದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಕಾರ್ಯವೈಖರಿಗೆ ಈಗ ಮಾಧ್ಯಮಗಳೇ ಕನ್ನಡಿ ಹಿಡಿದಿವೆ ಎಂದು ಟೀಕಿಸಿದ್ದಾರೆ. ಆಸ್ಪತ್ರೆಗಳಲ್ಲಿ ಔಷಧಗಳ ದಾಸ್ತಾನಿಲ್ಲ, ಖಾಲಿ ಇರುವ ವೈದ್ಯರು, ಶುಶ್ರೂಷಕರ ಹುದ್ದೆಗಳ ಭರ್ತಿ ಇಲ್ಲ, ಸ್ಕ್ಯಾನಿಂಗ್ ಸೇವೆ ಒದಗಿಸುವ ಕಂಪನಿಗಳ ಬಾಕಿ ಪಾವತಿ ಮಾಡದೇ ಸ್ಕ್ಯಾನಿಂಗ್ ಸೇವೆಯಿಲ್ಲ. ಹೀಗೆ ಸಾಲು ಸಾಲು ಸಮಸ್ಯೆಗಳಿಂದ ರಾಜ್ಯಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸಂಪೂರ್ಣ ಅಸ್ತವ್ಯಸ್ತವಾಗಿದೆ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ. ಈಗಲಾದರೂ ಎಚ್ಚೆತ್ತುಕೊಂಡು ಆರೋಗ್ಯ ಇಲಾಖೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ, ಜನ ಕಾಂಗ್ರೆಸ್ ಸರ್ಕಾರದ ವಿರುದ್ಧ ದಂಗೆ ಏಳುವ ದಿನ ಬಹಳ ದೂರವಿಲ್ಲ ಎಂದು ಅವರು ಹೇಳಿದ್ದಾರೆ.

# ಕೆಲವರಿಂದ ಸಚಿವ ಡಿ.ಸುಧಾಕರ್ ಆರೋಗ್ಯ ಸ್ಥಿತಿ ದುರ್ಬಳಕೆಗೆ ಯತ್ನ: ಎಚ್‌ಡಿಕೆ ವಾಗ್ದಾಳಿ



ಚಿತ್ರದುರ್ಗ, ಏ.26: ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಕೆಲವರು ಇಂತಹ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳುವುದರಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಚಿತ್ರದುರ್ಗದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು, ಸಚಿವ ಸುಧಾಕರ್ ಅವರು ಸಾವು ಬದುಕಿನ ನಡುವೆ ಹೋರಾಟ ನಡೆಸ್ತಿದ್ದಾರೆ. ಈ ವೇಳೆ ನಾನು ಜೆಡಿಎಸ್ ಸ್ಥಾನದ ಬಗ್ಗೆ ಚರ್ಚೆ ಮಾಡಲ್ಲ. ಹಿರಿಯೂರು ಸೇರಿ ಬೇರೆ ಕ್ಷೇತ್ರದ ಬಗ್ಗೆಯೂ ಮಾತಾಡಲ್ಲ. ಆದರೆ ಆಸ್ಪತ್ರೆಯ ಒಳಗೆ ಏನು ನಡೆಯುತ್ತಿದೆ ಎಂಬುದನ್ನು ನೋಡಬೇಕು. ಯಾವ ಕಾರಣಕ್ಕೆ ಕೆಲ ವಿಷಯ ಮುಚ್ಚಿಟ್ಟಿದ್ದಾರೆ ಎಂಬುದು ತಿಳಿಯಬೇಕು. ಆ ವ್ಯಕ್ತಿಯಿಂದ ಹೆಬ್ಬೆಟ್ಟು ಒತ್ತಿಸಿಕೊಳ್ಳಲು ಮುಚ್ಚಿಡಲಾಗಿದೆಯೇ ಎಂಬ ಅನುಮಾನ ವ್ಯಕ್ತಪಡಿಸಿದರು. ಇಂಥ ವಿಚಾರಗಳಲ್ಲಿ ಹೆಚ್ಚು ಚರ್ಚೆ ಮಾಡಲ್ಲ. ಆದರೆ, ಕೆಲವರು ಇಂತಹ ಸಂದರ್ಭಗಳನ್ನು ದುರ್ಬಳಕೆ ಮಾಡಿಕೊಳ್ಳುವಲ್ಲಿ ಎಕ್ಸ್‌ಪರ್ಟ್ ಆಗಿದ್ದಾರೆ ಎಂದರು.

ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಅಹಿಂದ ಸಮಾವೇಶ ಕುರಿತು ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಕೈ ನಾಯಕರು ಕುರ್ಚಿ ಉಳಿಸಿಕೊಳ್ಳಲು ಅಹಿಂದ ಸಮಾವೇಶ ನಡೆಸ್ತಿದ್ದಾರೆ. ಅಹಿಂದ ಸಮುದಾಯದ ಜನ ಏನು ಹೇಳ್ತಿದ್ದಾರೆ. ನಮ್ಮ ಭಿಕ್ಷೆಯಿಂದ ಕಾಂಗ್ರೆಸ್‌ಗೆ ಅಧಿಕಾರ ಎನ್ನುತ್ತಿದ್ದಾರೆ. ಈ ಪರಿಸ್ಥಿಯಲ್ಲಿ ಸಮಾವೇಶ ಮಾಡ್ತಿದ್ದಾರೆ. ಸಮಾವೇಶಕ್ಕೆ ದುಡ್ಡು ಖರ್ಚು ಮಾಡಿ ಜನ ಸೇರಿಸುತ್ತಾರೆ ಎಂದು ಆರೋಪಿಸಿದರು.

# ಒಳಮೀಸಲಾತಿಯಲ್ಲಿ ಎಸ್‌ಸಿಗಳಿಗೆ ಮೋಸ: ಶ್ರೀರಾಮುಲು ಆರೋಪ

### ಶೇ.56ರಷ್ಟಿದ್ದ ಮೀಸಲಾತಿ ಶೇ.50ಕ್ಕೆ ಇಳಿಸಿದ ಕಾಂಗ್ರೆಸ್



ಚಿತ್ರದುರ್ಗ, ಏ.26: ಒಳಮೀಸಲಾತಿ ವಿಚಾರದಲ್ಲಿ ಎಸ್‌ಸಿಗಳಿಗೆ ಮೋಸ ಮಾಡಲಾಗಿದೆ. ಜಿ.ಪರಮೇಶ್ವರ್, ಮಹದೇವಪ್ಪ ಬಾಯಿಗೆ ಬಟ್ಟೆ ಕಟ್ಟೆ ಕುಳಿತಿದ್ದಾರೋ, 56% ಇದ್ದ ಮೀಸಲಾತಿ 50ಕ್ಕೆ ಇಳಿಸುವ ಕೆಲಸವನ್ನು ಕಾಂಗ್ರೆಸ್‌ನವರು ಮಾಡಿದ್ದಾರೆ. ಚುನಾವಣೆಗೆ ಎಸ್‌ಸಿ, ಎಸ್‌ಟಿಗಳನ್ನು ಟ್ರಂಪ್ ಕಾರ್ಡ್ ಆಗಿ ಬಳಸಿ, ನಂತರ ಎಸ್‌ಸಿ, ಎಸ್‌ಟಿಗಳನ್ನು ಕಸದ ಬುಟ್ಟಿಗೆ ಎಸೆಯುತ್ತಾರೆ ಎಂದು ಮಾಜಿ ಸಚಿವ ಬಿ. ಶ್ರೀರಾಮುಲು ಆರೋಪಿಸಿದ್ದಾರೆ.

ಚಿತ್ರದುರ್ಗದಲ್ಲಿ ಮಾತನಾಡಿದ ಅವರು, ಉಪಚುನಾವಣೆ ನಂತರ ಕಾಂಗ್ರೆಸ್‌ನಲ್ಲಿ ಸಾಕಷ್ಟು ಗೊಂದಲವಿದೆ. ಸರಿಯಾಗಿ ಸರಕಾರ ನಡೆಯುತ್ತಿಲ್ಲ, ಸಿಎಂ, ಡಿಸಿಎಂ ಹೊಂದಾಣಿಕೆ ಇಲ್ಲ. ಸಿಎಂ ಯಾರು ಆಗಬೇಕೆಂಬ ಮಾತೇ ನಡೆಯುತ್ತಿದೆ. ಸಿಎಂ ಕುರ್ಚಿ ಎಳೆದುಕೊಳ್ಳಲು ಪೈಪೋಟಿ ನಡೆಯುತ್ತಿದೆ. ಈ ಗದ್ದಲದಲ್ಲೇ ಸರಕಾರ ಬಿದ್ದುಹೋಗುವ ಸಾಧ್ಯತೆಯಿದೆ. ಹಾಗೆ ಕಾಂಗ್ರೆಸ್ ಸರಕಾರ ಬಿದ್ದರೆ ಸರಕಾರ ಮಾಡಲು ಬಿಜೆಪಿ ಸಿದ್ಧವಿದೆ. ಚುನಾವಣೆ ನಡೆದಿದೆ ಬಿಜೆಪಿ 130ಕ್ಕೂ ಅಧಿಕ ಸೀಟ್ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಯಡಿಯೂರಪ್ಪನವರ 50 ವರ್ಷ ಸಾರ್ಥಕ ಸೇವೆ, ರಾಜ್ಯದಲ್ಲಿ 50 ವರ್ಷಗಳ ಕಾಲ ಬಿಜೆಪಿ ಪಕ್ಷ ಸಂಘಟನೆ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಅಭಿಮಾನಿಗಳಿಂದ ಬಿಎಸ್‌ವೈಗೆ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. 5 ಲಕ್ಷ ಅಭಿಮಾನಿಗಳಿಂದ ಅಭಿನಂದನಾ ಸನ್ಮಾನ ನಡೆಯಲಿದೆ. ರಾಷ್ಟ್ರೀಯ ನಾಯಕ ಅಮಿತ್ ಶಾ ಸೇರಿ ಹಲವರು ಭಾಗಿಯಾಗಲಿದ್ದಾರೆ. ಈ ಮೂಲಕ ಬಿಜೆಪಿ ಒಗ್ಗಟ್ಟು ಪ್ರದರ್ಶನ ನಡೆಸಲಿದೆ. ಈ ಕಾರ್ಯಕ್ರಮ 2028ರ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದೆ ಎಂದು ಬಿ ಶ್ರೀರಾಮುಲು ಹೇಳಿದರು.

# ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿ.ವಿ ಯ 2ನೇ ಘಟಿಕೋತ್ಸವ ಇಂದು




## 6 ಚಿನ್ನದ ಪದಕ, 17 ರ‍್ಯಾಂಕ್ ಪ್ರಮಾಣಪತ್ರ

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯದ ಎರಡನೇ ಘಟಿಕೋತ್ಸವದಲ್ಲಿ 2023-24 ಹಾಗೂ 2024-25 ಅವಧಿಯಲ್ಲಿ ಪದವಿ ಪಡೆದ 171 ವಿದ್ಯಾರ್ಥಿಗಳಿಗೆ ಪದವಿಗಳನ್ನು ಪ್ರದಾನ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ 6 ಚಿನ್ನದ ಪದಕಗಳು ಮತ್ತು 17 ರ‍್ಯಾಂಕ್ ಪ್ರಮಾಣಪತ್ರಗಳನ್ನು ಅರ್ಹ ವಿದ್ಯಾರ್ಥಿಗಳಿಗೆ ವಿತರಿಸಲಾಗುತ್ತದೆ ಎಂದು ವಿ.ವಿ ಕುಲಪತಿ ಪ್ರೊ.ವಿಶ್ವನಾಥ್ ತಿಳಿಸಿದರು.

ರಾಜ್ಯದ ಅರ್ಥಶಾಸ್ತ್ರಕ್ಕೆ ವಿಶೇಷವಾಗಿ ಸ್ಥಾಪಿತವಾಗಿರುವ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಉನ್ನತ ವ್ಯಾಸಂಗ ಮತ್ತು ಉದ್ಯೋಗಾವಕಾಶಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತಿದೆ. ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಮುನ್ನಡೆಸುವ ನೇಮಕಾತಿ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ, ಶಿಕ್ಷಕರ ಮಾರ್ಗದರ್ಶನದಲ್ಲಿ ವಿವಿಧ ಕಂಪನಿಗಳೊಂದಿಗೆ ಜಾಲತಾಣ ನಿರ್ಮಿಸಿ ಉದ್ಯೋಗಾವಕಾಶಗಳನ್ನು ಒದಗಿಸಲಾಗುತ್ತಿದೆ. ಬ್ಯಾಂಕಿಂಗ್, ಫೈನಾನ್ಸ್, ಇನ್ಶೂರೆನ್ಸ್, ಡೇಟಾ ಅನಾಲಿಟಿಕ್ಸ್ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಅವಕಾಶಗಳು ಲಭ್ಯವಿವೆ.

– ಪ್ರೊ. ವಿಶ್ವನಾಥ್, ಕುಲಪತಿ,
ಡಾ.ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿವಿ

**ಬೆಂಗಳೂರು, ಏ.26:** ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯವು ತನ್ನ ಎರಡನೇ ಘಟಿಕೋತ್ಸವವನ್ನು ಏ. 27 ರಂದು ಬೆಳಗ್ಗೆ 11:30ಕ್ಕೆ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿದೆ ಎಂದು ಕುಲಪತಿ ಪ್ರೊ. ವಿಶ್ವನಾಥ್ ತಿಳಿಸಿದರು.

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿವಿಯಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಘಟಿಕೋತ್ಸವಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅಧ್ಯಕ್ಷತೆ ವಹಿಸಲಿದ್ದು, ಉನ್ನತ ಶಿಕ್ಷಣ ಸಚಿವ ಡಾ . ಎಂ.ಸಿ.ಸುಧಾಕರ್, ಭಾರತದ ಯೋಜನಾ ಆಯೋಗದ ಮಾಜಿ ಸದಸ್ಯ ಪ್ರೊ. ಬಿ.ಎಲ್. ಮುಂಗೇಕರ, ವಿ.ವಿ

ಕುಲಸಚಿವೆ ಮಮತಾ ದೇವಿ ಜಿ.ಎಸ್, ಪರೀಕ್ಷಾ ನಿಯಂತ್ರಕ ಡಾ. ಮೊಹಮ್ಮದ್ ಶಬ್ಬೀರ್ ಕೆ, ಹಣಕಾಸು ಅಧಿಕಾರಿ ಪ್ರಶಾಂತ್ ಕುಮಾರ್ ಎಂ.ವಿ. ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದರು.

ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಮೂರು ಪ್ರಮುಖ ಕಾರ್ಯಕ್ರಮಗಳು ನಡೆಯುತ್ತಿದ್ದು, ಅವುಗಳಿಗೆ ಹೆಚ್ಚುವರಿಯಾಗಿ 2024-25ರಿಂದ ಆರು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಇದರಲ್ಲಿ ಮೂರು ವರ್ಷಗಳ ಬಿ.ಎಸ್ಸಿ ಡೇಟಾ ಅನಾಲಿಟಿಕ್ಸ್, ಎರಡು ವರ್ಷಗಳ ಎಂ.ಎಸ್ಸಿ ಡೇಟಾ ಅನಾಲಿಟಿಕ್ಸ್, ಐದು ವರ್ಷದ ಸಂಯೋಜಿತ ಎಂಎ ಅರ್ಥಶಾಸ್ತ್ರ, ಎರಡು ವರ್ಷದ ಎಮ್ಮೆ ಅರ್ಥಶಾಸ್ತ್ರ, ಎಂಎಸ್‌ಸಿ ಅಭಿವೃದ್ಧಿ ಅರ್ಥಶಾಸ್ತ್ರ ಹಾಗೂ ಎಂಎಸ್‌ಸಿ ಸಾರ್ವಜನಿಕ ನೀತಿ ಸೇರಿವೆ.ಹಿಂದೆ ಗಣಿತಶಾಸ್ತ್ರ ಕಡ್ಡಾಯವಾಗಿದ್ದ ಅರ್ಹತಾ ಮಾನದಂಡದಿಂದ ಹಲವಾರು ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ, ಹೊಸ ಕೋರ್ಸ್‌ಗಳಲ್ಲಿ ಕೇವಲ ಅರ್ಥಶಾಸ್ತ್ರ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶ ಕಲ್ಪಿಸಲಾಗಿದೆ. ಕಲಾ ವಿಭಾಗದ ವಿದ್ಯಾರ್ಥಿಗಳಿಗೂ ಈಗ ಅವಕಾಶ ನೀಡಲಾಗಿದೆ ಎಂದರು.

ವಿಶ್ವವಿದ್ಯಾಲಯವು ಅಂತರರಾಷ್ಟ್ರೀಯ ಮಟ್ಟದ ಪಠ್ಯಕ್ರಮವನ್ನು ಅನುಸರಿಸುತ್ತಿದ್ದು, ವಿದ್ಯಾರ್ಥಿಗಳಿಗೆ ಗಾಢವಾದ ಗಣಿತಾಧಾರಿತ ಅರ್ಥಶಾಸ್ತ್ರ ಶಿಕ್ಷಣ ನೀಡಲಾಗುತ್ತಿದೆ. ಇದರಿಂದಾಗಿ ಪಾಸ್ ಪ್ರಮಾಣ ಶೇ. 80-85ರಷ್ಟಿದ್ದರೂ, ಶಿಕ್ಷಣದ ಗುಣಮಟ್ಟವನ್ನು ಕಾಪಾಡಲು ಕಟ್ಟುನಿಟ್ಟಿನ ಮೌಲ್ಯಮಾಪನ ಪದ್ಧತಿಯನ್ನು ಅನುಸರಿಸಲಾಗುತ್ತಿದೆ.

ಪ್ರಸ್ತುತ ವಿಶ್ವವಿದ್ಯಾಲಯದಲ್ಲಿ 262 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಒಟ್ಟು ಸಾಮರ್ಥ್ಯ 300 ವಿದ್ಯಾರ್ಥಿಗಳಷ್ಟಿದೆ. ಹೊಸ ಕೋರ್ಸ್‌ಗಳ ಆರಂಭದಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುವ ನಿರೀಕ್ಷೆ ಇದೆ ಎಂದರು.

ಮೂಲಸೌಕರ್ಯ ದೃಷ್ಟಿಯಿಂದ 1250 ವಿದ್ಯಾರ್ಥಿಗಳಿಗೆ ಸಾಕಾಗುವ ತರಗತಿಗಳು, ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಸೌಲಭ್ಯಗಳಿವೆ. ಆದರೆ ಹಾಸ್ಟೆಲ್ ವ್ಯವಸ್ಥೆ ಸೀಮಿತವಾಗಿದ್ದು, ಸರ್ಕಾರದಿಂದ ಅನುದಾನ ಪಡೆಯಲು ಮನವಿ ಮಾಡಲಾಗಿದೆ. ವಿಶ್ವವಿದ್ಯಾಲಯವು ಸಂಪೂರ್ಣ ವಸತಿ ಆಧಾರಿತವಾಗಿದ್ದು, ವಿದ್ಯಾರ್ಥಿಗಳು ಕ್ಯಾಂಪಸ್‌ನಲ್ಲಿಯೇ ಉಳಿದುಕೊಂಡು ಅಧ್ಯಯನ ಮಾಡುವುದು ಕಡ್ಡಾಯವಾಗಿದೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ನಿರಂತರ ಮೌಲ್ಯಮಾಪನ ಪದ್ಧತಿಯನ್ನು ಅನುಸರಿಸಲಾಗುತ್ತಿದೆ ಎಂದರು.



ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಪಶ್ಚಿಮ ಬಂಗಾಳದ ಮಾತುವಾ ಠಾಕೂರ್‌ಬರಿ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸಿದರು.

# ಉದ್ಯೋಗ, ರೈತರ ಹಿತ, ಮಹಿಳಾ ಮೀಸಲಾತಿ ವಿಷಯದಲ್ಲಿ ಕೇಂದ್ರ ಸುಳ್ಳು ಭರವಸೆ: ಸಂತೋಷ್ ಲಾಡ್ ವಾಗ್ದಾಳಿ



**ಬಳ್ಳಾರಿ, ಏ.26:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ದೇಶವನ್ನು ಸಾಲದ ಸುಳಿಗೆ ತಳ್ಳಿದ್ದು, ಉದ್ಯೋಗ, ರೈತರ ಹಿತ ಹಾಗೂ ಮಹಿಳಾ ಮೀಸಲಾತಿ ಸೇರಿದಂತೆ ಹಲವು ವಿಷಯಗಳಲ್ಲಿ ಜನರಿಗೆ ಸುಳ್ಳು ಭರವಸೆ ನೀಡುತ್ತಿದೆ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತೀವ್ರ ವಾಗ್ದಾಳಿ ನಡೆಸಿದರು.

ಜಿಲ್ಲೆಯ ತಾಳೂರು ಗ್ರಾಮದಲ್ಲಿ ನಡೆದ 'ಸಂಡೂರು ಸಂಕಲ್ಪ ಸಮರ್ಪಣಾ ಸಮಾವೇಶ-2' ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ದೇಶದ ಮೇಲೆ ಅಪಾರ ಸಾಲ ಬಿದ್ದಿದ್ದು, ಯುವಕರಿಗೆ ಉದ್ಯೋಗ ನೀಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ ಎಂದು ಟೀಕಿಸಿದರು. ದೊಡ್ಡ ಉದ್ಯಮಿಗಳ ಸಾಲಮನ್ನಾ ಮಾಡಲಾಗುತ್ತಿದ್ದು, ರೈತರು ಮಾತ್ರ ಸಂಕಷ್ಟದಲ್ಲಿ ಸಿಲುಕಿದ್ದಾರೆ. ದೇಶದ ಆಸ್ತಿ ಕೆಲವೇ ಮಂದಿಯ ಕೈಗಳಲ್ಲಿ ಕೇಂದ್ರೀಕೃತವಾಗುತ್ತಿದೆ. ಕರ್ನಾಟಕ ಸರ್ಕಾರ ಜನಪರ ಯೋಜನೆಗಳ ಮೂಲಕ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ. ಇತರೆ ರಾಜ್ಯಗಳು ಹಿಂದುಳಿದಿವೆ ಎಂದು ಹೇಳಿದರು.

ಬಿಜೆಪಿ ಜಾತಿ ಆಧಾರಿತ ರಾಜಕೀಯ ನಡೆಸಿ ಸಮಾಜದಲ್ಲಿ ಭಿನ್ನತೆ ಉಂಟುಮಾಡುತ್ತಿದೆ. ದೇಶವನ್ನು ಒಡೆಯುವ ರಾಜಕೀಯ ನಡೆಯುತ್ತಿದೆ ಎಂದು ಆರೋಪಿಸಿದರು.ಮಹಿಳಾ ಮೀಸಲಾತಿ ಮಸೂದೆ ಕುರಿತು ಪ್ರಶ್ನಿಸಿದ ಅವರು, ಶೇ.33 ಮೀಸಲಾತಿಯನ್ನು ನೇರವಾಗಿ ಜಾರಿಗೆ ತರುವ ಬದಲು ಡಿಲಿಮಿಟೇಶನ್‌ಗೆ ಯಾಕೆ ಕೊಂಡಿ ಹಾಕಲಾಗಿದೆ ಎಂದು ಪ್ರಶ್ನಿಸಿದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20

Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಏಪ್ರಿಲ್ 27, 2026, ಸೋಮವಾರ

## ಒಳಪುಟಗಳಲ್ಲಿ

ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ತರಬೇತಿ ನೀಡಲು ಏಳು ಪ್ರಯೋಗಾಲಯ ಸ್ಥಾಪಿಸುವ ಪ್ರಸ್ತಾವನೆ - ಪು.4

# ಜನರ ಮಾಹಿತಿ ಗೌಪ್ಯ-ಡಿಜಿಟಲ್ ಭದ್ರತೆ: ಪ್ರಧಾನಿ ಮೋದಿ ಅಭಯ

## ಜನಗಣತಿಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿ: ಮನ್‌ಕೀ ಬಾತ್‌ನಲ್ಲಿ ಮನವಿ

**ನವದೆಹಲಿ, ಏ.26: ಸದ್ಯ ನಡೆಯುತ್ತಿರುವ ಜನಗಣತಿಯಲ್ಲಿ ದೇಶದ ಪ್ರತಿಯೊಬ್ಬ ನಾಗರಿಕರೂ ಭಾಗವಹಿಸಬೇಕು. ಅಧಿಕಾರಿಗಳಿಗೆ ನೀವು ಕೊಡುವ ಮಾಹಿತಿಯು ಗೌಪ್ಯ ಮತ್ತು ಸುರಕ್ಷಿತವಾಗಿರುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಅಭಯ ನೀಡಿದ್ದಾರೆ.**




ಜನಗಣತಿಗೆ ನೀಡುವ ಮಾಹಿತಿಯು ಸುರಕ್ಷಿತವೇ ಎಂಬ ಸಂದೇಹ ಜನರಲ್ಲಿ ಮೂಡಿರುವ ಹಿನ್ನೆಲೆಯಲ್ಲಿ, ಪ್ರಧಾನಿ ಮೋದಿ ಅವರು ತಮ್ಮ ಮಾಸಿಕ ರೇಡಿಯೋ ಭಾಷಣ 'ಮನ್ ಕೀ ಬಾತ್'ನಲ್ಲಿ ಭಾನುವಾರ ಸ್ಪಷ್ಟನೆ ನೀಡಿದ್ದಾರೆ.

ಜನಗಣತಿಯು ಕೇವಲ ಸರ್ಕಾರಿ ಕಾರ್ಯವಲ್ಲ. ಎಲ್ಲಾ ನಾಗರಿಕರ ಜವಾಬ್ದಾರಿ. ಪ್ರತಿಯೊಬ್ಬರ ಭಾಗವಹಿಸುವಿಕೆ ಅತ್ಯಗತ್ಯ. ನೀವು ಒದಗಿಸುವ ಎಲ್ಲಾ ಮಾಹಿತಿಯು ಸುರಕ್ಷಿತ ಮತ್ತು ಗೌಪ್ಯವಾಗಿರುತ್ತದೆ. ಅದಕ್ಕಾಗಿ ಬಲವಾದ ಡಿಜಿಟಲ್ ಭದ್ರತೆ ನೀಡಲಾಗಿದೆ. ಹೀಗಾಗಿ, ದೇಶದ ಎಲ್ಲಾ ನಾಗರಿಕರು ಪ್ರಕ್ರಿಯೆಯಲ್ಲಿ ಭಾಗವಹಿಸಿ 2027ರ ಜನಗಣತಿಯನ್ನು ಯಶಸ್ವಿಗೊಳಿಸುವಂತೆ" ಮನವಿ ಮಾಡಿದರು.

ದೇಶದಲ್ಲಿ ಪ್ರಸ್ತುತ ನಡೆಯುತ್ತಿರುವ ಜನಗಣತಿಯು ಒಂದು ಪ್ರಮುಖ ಅಭಿಯಾನವಾಗಿದೆ. ಪ್ರತಿಯೊಬ್ಬ ಭಾರತೀಯನು ಅದರ ಬಗ್ಗೆ ತಿಳಿದಿರಬೇಕು. ಈ ಅಭಿಯಾನವು ವಿಶ್ವದಲ್ಲೇ ಅತಿ ದೊಡ್ಡ ಕಾರ್ಯಕ್ರಮ. ಈ ಬಾರಿಯ ಜನಗಣತಿಯನ್ನು ಡಿಜಿಟಲೀಕರಣ ಮಾಡಲಾಗಿದೆ. ಎಲ್ಲಾ ಮಾಹಿತಿಯನ್ನು ನೇರವಾಗಿ ಡಿಜಿಟಲ್ ವಿಧಾನಗಳ ಮೂಲಕ ದಾಖಲಿಸಲಾಗುತ್ತಿದೆ" ಎಂದು ಹೇಳಿದರು.

ಮನೆಗಳಿಗೆ ಭೇಟಿ ನೀಡುವ ಜನಗಣತಿ ಸಿಬ್ಬಂದಿಗೆ ಮೊಬೈಲ್ ಅಪ್ಲಿಕೇಶನ್ ನೀಡಲಾಗಿದೆ. ಅವರು ನಿಮ್ಮ ಮಾಹಿತಿಯನ್ನು ಸ್ಥಳದಲ್ಲೇ ಡಿಜಿಟಲ್ ವ್ಯವಸ್ಥೆಯಲ್ಲಿ ನಮೂದಿಸುತ್ತಾರೆ.

ಅಲ್ಲದೇ, ನೀವೇ ಈ ವ್ಯವಸ್ಥೆಯನ್ನು ಬಳಸಿಕೊಂಡು ಖುದ್ದಾಗಿ ಮಾಹಿತಿ ದಾಖಲಿಸಬಹುದು. ಅಧಿಕಾರಿಗಳ ಭೇಟಿಗೆ 15 ದಿನಗಳ ಮೊದಲು ಸ್ವಯಂ-ಗಣತಿ ಮಾಡಿಕೊಳ್ಳಬಹುದು. ನಿಮ್ಮ ಅನುಕೂಲಕ್ಕೆ ತಕ್ಕಂತೆ ವಿವರಗಳನ್ನು ಭರ್ತಿ ಮಾಡಬಹುದು" ಎಂದು ತಿಳಿಸಿದರು."ನೀವೇ ಮಾಹಿತಿಯನ್ನು ಭರ್ತಿ ಮಾಡಿದ ನಂತರ, ಮೊಬೈಲ್ ಅಥವಾ ಇಮೇಲ್‌ಗೆ ವಿಶಿಷ್ಟ ಐಡಿಯೊಂದು ಬರುತ್ತದೆ.

ಅದನ್ನು ನಿಮ್ಮ ಮನೆಗೆ ಬರುವ ಅಧಿಕಾರಿಗೆ ತೋರಿಸಿ ನಿಮ್ಮ ವಿವರಗಳನ್ನು ದೃಢೀಕರಿಸಿದರೆ ಸಾಕು. ಇದರಿಂದ ಗಣತಿದಾರರ ಮತ್ತು ಜನರ ಸಮಯ ಉಳಿಕೆ ಜೊತೆಗೆ ಪ್ರಕ್ರಿಯೆ ಸುಗಮವಾಗಿರಲಿದೆ ಎಂದು ಪ್ರಧಾನಿ ಹೇಳಿದರು.

## ಸರ್ಕಾರದ ಬಳಿ ಹಣವಿಲ್ಲ, ಜಿಬಿಎ, ಪಂಚಾಯಿತಿ ಚುನಾವಣೆ ನಡೆಯಲ್ಲ: ಸರ್ಕಾರದ ವಿರುದ್ಧ ಎಚ್.ಡಿ.ಕೆ.ಆರೋಪ



ತುಮಕೂರು, ಏ.26: ರಾಜ್ಯ ಕಾಂಗ್ರೆಸ್ ಸರ್ಕಾರ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಹದಗೆಡಿಸಿದೆ ಎಂದು ಪುನರುಚ್ಚರಿಸಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಹಣವಿಲ್ಲದ ಕಾರಣಕ್ಕೆ ಗ್ರೇಟರ್ ಬೆಂಗಳೂರು ಚುನಾವಣೆ ಮಾಡುವುದಕ್ಕೂ ಈ ಸರ್ಕಾರದ ಬಳಿ ಹಣವಿಲ್ಲ ಎಂದು ನೇರ ಆರೋಪ ಮಾಡಿದ್ದಾರೆ.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸೊರವನಹಳ್ಳಿ ಮತ್ತು ಕುಣಿಗಲ್ ತಾಲೂಕಿನ ಮಾದಪ್ಪನಹಳ್ಳಿ ಗ್ರಾಮಗಳಲ್ಲಿ ನೂತನ ದೇವಾಲಯಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಅವರು ಸುದ್ದಿಗಾರರ ಜತೆ ಮಾತನಾಡಿ, ರಾಜ್ಯ ಚುನಾವಣಾ ಆಯೋಗವು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆಯನ್ನು ಜೂನ್ 30ರ ಬದಲು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಲು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ. ಜಾತಿಗಣತಿ ಮತ್ತು ಮತದಾರರ ಪಟ್ಟಿಯ ತಿದ್ದುಪಡಿ ಕಾರ್ಯಗಳಲ್ಲಿ ಸಿಬ್ಬಂದಿ ನಿರತರಾಗಿರುವುದು ಹಾಗೂ ಹಣಕಾಸಿನ ಕೊರತೆ ಇದಕ್ಕೆ ಕಾರಣವಾಗಿದ್ದು, ಆಯೋಗವು ರಾಜ್ಯ ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ ಎಂದು ನ್ಯಾಯಾಲಯಕ್ಕೆ ತಿಳಿಸಿದೆ. ಅಲ್ಲಿಗೆ ರಾಜ್ಯ ಸರ್ಕಾರ ಆರ್ಥಿಕವಾಗಿ ದುಸ್ಥಿತಿಯಲ್ಲಿದೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಉಚಿತ ಗ್ಯಾರಂಟಿಗಳ ಮೂಲಕ ಖಜಾನೆಯನ್ನು ಖಾಲಿ ಮಾಡಿದೆ. ಈಗಾಗಲೇ ಒಟ್ಟು 7,26,000 ಲಕ್ಷ ಕೋಟಿ ಮೀರಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವುದು ಸಾಧ್ಯ ಆಗುತ್ತದೆಯೇ ಎಂದು ಎಚ್‌ಡಿಕೆ ಪ್ರಶ್ನಿಸಿದರು.

**ಕುರ್ಚಿ ಕಾಳಗದಲ್ಲಿ ಮೈಮರೆತ ಕೈ ನಾಯಕರು**

ರಾಜ್ಯದ ಜನರು ಒಂದು ಕಡೆ ಕುಡಿಯುವ ನೀರಿನ ಸಮಸ್ಯೆಗೆ ತತ್ತರಿಸುತ್ತಿದ್ದರೆ, ಇನ್ನೊಂದು ಕಡೆ ಅಕಾಲಿಕ ಮಳೆಯಿಂದ ಭಾರೀ ಬೆಳೆ ನಷ್ಟಕ್ಕೆ ತುತ್ತಾಗಿದ್ದರೆ ರಾಜ್ಯ ಕಾಂಗ್ರೆಸ್ ಸರ್ಕಾರ ಸಿಎಂ ಕುರ್ಚಿ ಕಾಳಗದಲ್ಲಿ ಮೈಮರೆತಿದೆ ಎಂದು ಎಚ್.ಡಿ. ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದರು. ಬೆಂಕಿ ರೀತಿಯ ಬೇಸಿಗೆಯನ್ನು ನೋಡುತ್ತಿದ್ದೇವೆ. ಉಷ್ಣಗಾಳಿಗೆ ಜನರು ತತ್ತರಿಸುತ್ತಿದ್ದಾರೆ. ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ರೈತರು ಅಪಾರ ಪ್ರಮಾಣದಲ್ಲಿ ಬೆಳೆ ನಷ್ಟ ಅನುಭವಿಸುತ್ತಿದ್ದಾರೆ. ಸರ್ಕಾರ ಜನರ ನೆರವಿಗೆ ಧಾವಿಸುವುದು ಇರಲಿ, ಅವರ ಬಗ್ಗೆ ಕನಿಕರದ ಮಾತನ್ನು ಕೂಡ ಆಡುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು

## 56ಗಿವಾ ದಾಟಿದ ಭಾರತದ ಪವನ ಶಕ್ತಿ ಉತ್ಪಾದನೆ ಸಾಮರ್ಥ್ಯ: ಪ್ರಧಾನಿ ಶ್ಲಾಘನೆ

ನವದೆಹಲಿ, ಏ.26: ದೂರದೃಷ್ಟಿ ನಾಯಕತ್ವದಿಂದ ದೇಶದ ಇಂಧನ ವ್ಯವಸ್ಥೆಗೆ ಭದ್ರ ಬುನಾದಿ ಹಾಕಿಕೊಟ್ಟ ಪ್ರಧಾನಿ ನರೇಂದ್ರ ಮೋದಿ ಅವರು ಮನ್ ಕೀ ಬಾತ್ ಮೂಲಕ ಭಾರತದ ಸೌರಶಕ್ತಿ, ಪವನ ಶಕ್ತಿ ಮೇಲೆ ಪ್ರಖರ ಬೆಳಕು ಚೆಲ್ಲಿದ್ದಾರೆ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಬಣ್ಣಿಸಿದರು.

ಹುಬ್ಬಳ್ಳಿಯ 52ನೇ ವಾರ್ಡ್ ಬೂತ್ ನಂ.202ರಲ್ಲಿ ಜನಸಾಮಾನ್ಯರೊಡಗೂಡಿ ಪ್ರಧಾನಿ ಮೋದಿ ಅವರ 133ನೇ ಮನ್ ಕೀ ಬಾತ್ ವೀಕ್ಷಿಸಿ ಮಾತನಾಡಿ, ಭಾರತದ ಹೊಸ ಮತ್ತು ನವೀಕರಿಸಬಹುದಾದ ಇಂಧನ ವ್ಯವಸ್ಥೆ ಬಗ್ಗೆ ಪ್ರಧಾನಿ ಅತ್ಯಂತ ವಿಶ್ವಾಸಾರ್ಹ ಮಾತುಗಳನ್ನಾಡಿದ್ದು, ಇದು ಶುದ್ಧ ಇಂಧನ ಪರಿವರ್ತನೆ ಪಥದಲ್ಲಿ ಸಾಗಿದ ನಮ್ಮ ಪ್ರಯತ್ನಕ್ಕೆ ಮತ್ತಷ್ಟು ಸ್ಫೂರ್ತಿ ತುಂಬಿದೆ ಎಂದು ಹೇಳಿದರು.

ಪ್ರಧಾನಿಯವರ 'ಮನ್ ಕೀ ಬಾತ್ ಸಮಾಜಸೇವೆ ಮತ್ತು ರಾಷ್ಟ್ರ ನಿರ್ಮಾಣದ ಹಾದಿಯಲ್ಲಿ ನಮಗೆ ಹೊಸ ಚೈತನ್ಯ ತುಂಬಿದೆ. ದೇಶದ ಪ್ರಗತಿ, ಸಾಧಕರ ಯಶೋಗಾಥೆ ಮತ್ತು ನವ ಭಾರತದ ಸಂಕಲ್ಪಗಳನ್ನು ಹಂಚಿಕೊಳ್ಳುವ ಈ ವಿಶಿಷ್ಟ ಕಾರ್ಯಕ್ರಮ ಮಾದರಿ ಎಂದರು.

ಸಣ್ಣ ಸಣ್ಣ ಬದಲಾವಣೆಗಳ ಮೂಲಕವೇ ದೊಡ್ಡ ಕ್ರಾಂತಿಗೆ ನಾಂದಿ ಹಾಡಿದ್ದಾರೆ ಪ್ರಧಾನಿ ಮೋದಿ. ಸೌರ ವಿದ್ಯುತ್ ಮತ್ತು ಗಾಳಿ ವಿದ್ಯುತ್ ಉತ್ಪಾದನೆಗೆ ಉತ್ತೇಜನ ನೀಡುತ್ತ ಶುದ್ಧ ಇಂಧನ ವಲಯಕ್ಕೆ ಶಕ್ತಿ ತುಂಬಿದ್ದಾರೆ. ನವೀಕರಿಸಬಹುದಾದ ಇಂಧನ ಸಾಮರ್ಥ್ಯದಲ್ಲಿ ಭಾರತ ಹೊಸ ಮೈಲುಗಲ್ಲು ಸ್ಥಾಪಿಸುವುದನ್ನು ಮನ್ ಕೀ ಬಾತ್ ಮೂಲಕ ತೆರೆದಿಟ್ಟಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

**56ಗಿವಾ ದಾಟಿದ ಪವನ ಶಕ್ತಿ:**

ಭಾರತದ ಪವನ ಶಕ್ತಿ ಸಾಮರ್ಥ್ಯ ಇದೀಗ 56 ಗಿವಾ ದಾಟಿದೆ. ಕಳೆದ ವರ್ಷ 6 ಗಿವಾ ಸೇರಿಸಿದ್ದು, ಇದು ಇದುವರೆಗಿನ ಅತ್ಯಧಿಕ ಸಾಮರ್ಥ್ಯ ಸೇರ್ಪಡೆಯಾಗಿದೆ. ಭಾರತ ಪವನ ಶಕ್ತಿ ಪ್ರಯಾಣವನ್ನು ವೇಗಗೊಳಿಸುತ್ತಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು. ದೇಶದಲ್ಲಿ ಇಂಧನ ಸುಸ್ಥಿರತೆ, ಶುದ್ಧ ಇಂಧನ, ಪರಿಸರ ಸಂರಕ್ಷಣೆ ಮತ್ತು ರಾಷ್ಟ್ರದ ಉತ್ತಮ ಭವಿಷ್ಯಕ್ಕಾಗಿ ಸೌರ ಮತ್ತು ಪವನ ಶಕ್ತಿ ಅಳವಡಿಕೆ ಅತ್ಯಗತ್ಯವಾಗಿದೆ ಎನ್ನುವ ಮೂಲಕ ಪ್ರಧಾನಿ ಮೋದಿ ಅವರು, ವಿಕಸಿತ ಭಾರತಕ್ಕಾಗಿ ಶುದ್ಧ ಇಂಧನ ಸಾಮರ್ಥ್ಯದ ಸಾಮೂಹಿಕ ಪ್ರಯತ್ನಕ್ಕೆ ಕರೆ ನೀಡಿದ್ದಾರೆ ಎಂದರು.

**ಭಾರತದತ್ತ ಜಗತ್ತಿನ ದೃಷ್ಟಿ:** ಹೊಸ ಮತ್ತು ನವೀಕರಿಸಬಹುದಾದ ಇಂಧನ ಉತ್ಪಾದನೆ ಯುವಕರಿಗೆ ಹೊಸ ಅವಕಾಶಗಳು ಮತ್ತು ಉದ್ಯೋಗಗಳನ್ನು ಸೃಷ್ಟಿಸುತ್ತಿವೆ. ಭಾರತದ ವಿಕಾಸದಲ್ಲಿ ಪವನ ಶಕ್ತಿ ಹೊಸ ಭಾಷ್ಯ ಬರೆದಿದೆ. ವಿಂಡ್ ಎನರ್ಜಿಯಲ್ಲಿ ಜಗತ್ತಿನಲ್ಲಿ 4ನೇ ಸ್ಥಾನದಲ್ಲಿರುವ ಭಾರತವನ್ನು ಇಂದು ಜಗತ್ತೇ ಅನುಸರಣೆ ಮಾಡುತ್ತಿರುವ ಬಗ್ಗೆ ಉಲ್ಲೇಖಿಸಿ ಪ್ರಧಾನಿ ಮೋದಿ ಸಂತಸ ಹಂಚಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಸಂಸದರು ಹಾಗೂ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಶಾಸಕರಾದ ಮಹೇಶ್ ಟೆಂಗಿನಕಾಯಿ, ವಿಭಾಗ ಸಂಘಟನಾ ಕಾರ್ಯದರ್ಶಿಗಳಾದ ಜಯತೀರ್ಥ ಕಟ್ಟಿ, ಬಂಗಾರು ಹನುಮಂತು, ಭರತ ಬೊಮ್ಮಾಯಿ, ಮಹೇಂದ್ರ ಕೌತಾಳ, ಕೃಷ್ಣಾ ಗಂಡಗಾಳೇಕರ್, ಪ್ರಭು ನವಲಗುಂದಮಠ ಸೇರಿದಂತೆ ಬಿಜೆಪಿ ಕಾರ್ಯಕರ್ತರು ಭಾಗಿಯಾಗಿದ್ದರು.




ದೆಹಲಿ ಪೊಲೀಸರು ಮಾದಕ ದ್ರವ್ಯ ವಿರೋಧಿ ಜಾಗೃತಿ ಸಪ್ತಾಹದ ಸಂದರ್ಭದಲ್ಲಿ ಆಯೋಜಿಸಿದ್ದ, ನವದೆಹಲಿಯ ಕೆಂಪು ಕೋಟೆಯಲ್ಲಿ ಭಾನುವಾರ ನಡೆದ ಮಾದಕ ದ್ರವ್ಯ ವಿರೋಧಿ ಜಾಗೃತಿ ಫ್ಲಾಶ್ ಮಾಬ್‌ನಲ್ಲಿ ಮಕ್ಕಳು ಭಾಗವಹಿಸಿದ್ದಾರೆ




ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ವಿಜಯಪುರಂನಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಸಭಾಂಗಣದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಭಾಗವಹಿಸಿದ್ದರು.

### ಮಾಧ್ಯಮಗಳ ಎದುರು ರಾಜಕೀಯ ಮಾತನಾಡಲ್ಲ: ಸಮಯ ಬಂದಾಗ ತಾನಾಗಿಯೇ ತಿಳಿಯುತ್ತದೆ

## ಏನೇನು ತೀರ್ಮಾನ ಆಗಿದೆಯೋ ಅವು ಚಾಲ್ತಿಗೆ ಬರಲಿವೆ: ಡಿ.ಕೆ.ಶಿವಕುಮಾರ್



**ಬೆಂಗಳೂರು, ಏ.26:** ಯಾವಾಗ ಏನು ಆಗಬೇಕೋ ಅದು ಆಗುತ್ತದೆ. ಇನ್ನು ಮುಂದೆ ರಾಜಕೀಯ ವಿಚಾರವಾಗಿ ಮಾಧ್ಯಮಗಳ ಮುಂದೆ ಮಾತನಾಡುವುದಿಲ್ಲ. ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚ್ಯವಾಗಿ ತಿಳಿಸಿದರು.

ದೆಹಲಿಯಿಂದ ವಾಪಸಾದ ನಂತರ ಬೆಂಗಳೂರಿನ ನಿವಾಸದ ಬಳಿ ಭಾನುವಾರ ಮಾತನಾಡಿದ ಅವರು, ನಮ್ಮಲ್ಲಿ ಯಾವುದೇ ಸಮಸ್ಯೆ ಇಲ್ಲ. ಯಾವ ರಾಜಕೀಯವೂ ಇಲ್ಲ. ಏನೇನು ತೀರ್ಮಾನ ಆಗಿವೆಯೋ ಅವು ಚಾಲ್ತಿಗೆ ಬರಲಿವೆ. ನಮ್ಮ ಪಕ್ಷದಲ್ಲಿ ಯಾವ ಸಮಯದಲ್ಲಿ ಏನು ಮಾಡಬೇಕೋ ಅದನ್ನು ಪಕ್ಷ ಮಾಡುತ್ತದೆ. ನಮಗೆ ನಮ್ಮ ಪಕ್ಷದ ಮೇಲೆ ವಿಶ್ವಾಸ ಇದೆ. ಏನು ಮಾಡಬೇಕು ಎಂಬುದು ಅವರಿಗೆ ಗೊತ್ತಿದೆ ಎಂದು ತಿಳಿಸಿದರು.

ನಾಯಕತ್ವ ಬದಲಾವಣೆ ವಿಚಾರವಾಗಿ ಪ್ರತಿಕ್ರಿಯಿಸಿ, ನಿಮಗೆ ಈ ಬಗ್ಗೆ ಗೊಂದಲ ಇರಬಹುದು. ನಾನು ಈ ಬಗ್ಗೆ ಯಾವತ್ತೂ ಚರ್ಚೆ ಮಾಡಲ್ಲ. ಹೈಕಮಾಂಡ್ ಯಾವಾಗ ಯಾವ ಸೂಚನೆ ನೀಡುತ್ತದೆಯೋ ಅವಾಗ ಅದನ್ನು ಪಾಲಿಸುತ್ತೇವೆ ಎಂದು ನಾನು ಹಾಗೂ ಸಿಎಂ ಅವರು ಹೇಳಿದ್ದು, ಅದರಂತೆ ನಡೆಯುತ್ತೇವೆ ಎಂದು ಹೇಳಿದರು.

**ಮಾತಿನಂತೆ ನಡೆದಿದ್ದೇವೆ**

ಒಳಮೀಸಲಾತಿ ವಿಚಾರವಾಗಿ ಬಿಜೆಪಿ ಟೀಕೆ ಬಗ್ಗೆ ಕೇಳಿದಾಗ, "ಬಿಜೆಪಿಯವರ ಕೈಯಲ್ಲಿ ಏನೂ ಮಾಡಲು ಆಗಿಲ್ಲ. ನಾವೇನು ಮಾತು ಕೊಟ್ಟಿದ್ದೆವೋ ಆ ಮಾತಿನ ಪ್ರಕಾರ ನಡೆದಿದ್ದೇವೆ. ಹಿಂದೆ 17% ಇದ್ದಾಗಲೂ ಕೂಡ ಸರಿಯಾಗಿಯೇ ಮಾಡಿದ್ದೆವು. ಈಗಲೂ ಕೂಡ ಬಹಳ ಸರಳವಾಗಿ ಮಾಡಿದ್ದೇವೆ. ಬಲ ಹಾಗೂ ಎಡ ಪಂಗಡಗಳಲ್ಲಿ ಮೊದಲು ಯಾರಿಗೆ, ನಂತರ ಯಾರಿಗೆ ಎಂಬ ಪ್ರಶ್ನೆ ಇತ್ತು. ಅದಕ್ಕೆ ಬೇಕಾದ ಪರಿಹಾರ ದಾರಿ ಕಂಡು ಹಿಡಿಯಲಾಗಿದೆ. ಬಲವಿರಲಿ, ಎಡ ಇರಲಿ, ಲಂಬಾಣಿ ಇರಲಿ, ಭೋವಿ ಇರಲಿ ಎಲ್ಲರಿಗೂ ನ್ಯಾಯ ಒದಗಿಸುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡಿದೆ. 30– 40 ವರ್ಷಗಳಿಂದ ಇದ್ದಂತಹ ಸಮಸ್ಯೆಯನ್ನು ಪರಿಹರಿಸಿದ್ದೇವೆ. ಎಲ್ಲರಿಗೂ ನ್ಯಾಯ ಕೊಡುತ್ತಿದ್ದೇವೆ. ಎಲ್ಲರೂ ಒಟ್ಟಾಗಿ ಹೋಗಬೇಕು ಅಷ್ಟೇ" ಎಂದು ಡಿಕೆಶಿ ಹೇಳಿದರು.

ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ರಾಜಕೀಯಕ್ಕೆ ವಿದಾಯ ಹೇಳಬೇಕಲ್ಲವೇ. ಅವರ ಸಾಧನೆಗಳನ್ನು, ವಿದಾಯವನ್ನು ಅವರೇ ಹೇಳಬೇಕಲ್ಲವೇ. ಅದಕ್ಕೆ ಈ ಕಾರ್ಯಕ್ರಮ ಮಾಡುತ್ತಿದ್ದಾರೆ. ಅವರ ಪಕ್ಷಕ್ಕೆ ಏನಾದರೂ ಕೊಡುಗೆ ಕೊಡಬೇಕಲ್ವಾ, ಅದಕ್ಕಾಗಿ ಮಾಡುತ್ತಿದ್ದಾರೆ ಎಂದು ಹೇಳಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸದಿದ್ದರೆ ನ್ಯಾಯಾಂಗ ನಿಂದನೆ ಮೊಕದ್ದಮೆ ಹೂಡುತ್ತೇವೆ ಎಂಬ ಜೆಡಿಎಸ್‌ನ ಎ.ಪಿ.ರಂಗನಾಥ್ ಹೇಳಿಕೆ ಬಗ್ಗೆ ಕೇಳಿದಾಗ, ಮಾಡಲಿ, ಯಾರು ಬೇಡ ಅಂತಿದ್ದಾರೆ. ನಾವೇನು ಚುನಾವಣೆ ಮಾಡೋದಿಲ್ಲ ಅಂತ ಹೇಳಿದ್ದೇವಾ. ಕಾರ್ಪೊರೇಷನ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಸಿದ್ಧರಿದ್ದೇವೆ ಎಂದು ಸ್ಪಷ್ಟಪಡಿಸಿದರು.

## ಮಧ್ಯಾಹ್ನದ ಕೆಲಸಗಳಿಗೆ ವಿರಾಮ, ವಿದ್ಯಾರ್ಥಿಗಳಿಗೆ ಓಆರ್‌ಎಸ್

**ಬಿಸಿಗಾಳಿ ತಡೆಗೆ ದೆಹಲಿ ಸರ್ಕಾರದಿಂದ ಬಿಸಿಗಾಳಿ ಕ್ರಿಯಾಯೋಜನೆ 2026**

ನವದೆಹಲಿ, ಏ.26: ದೆಹಲಿಯಲ್ಲಿ ಹೆಚ್ಚುತ್ತಿರುವ ತಾಪಮಾನ ಮತ್ತು ಬಿಸಿಗಾಳಿಯನ್ನು ಎದುರಿಸಲು ಮುಖ್ಯಮಂತ್ರಿ ರೇಖಾ ಗುಪ್ತಾ ನೇತೃತ್ವದ ಸರ್ಕಾರವು 'ಬಿಸಿಗಾಳಿ ಕ್ರಿಯಾ ಯೋಜನೆ 2026' (Heat Wave Action Plan 2026) ಅನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮುಂದಾಗಿದೆ.


ಈ ಕ್ರಿಯಾಯೋಜನೆಯಂತೆ ಕೆಲಸದ ಅವಧಿಯಲ್ಲಿ ಬದಲಾವಣೆ ಮಾಡಿದ್ದು, ತೀವ್ರ ಬಿಸಿಲಿರುವ ಮಧ್ಯಾಹ್ನ 12ರಿಂದ 3 ಗಂಟೆಯವರೆಗೆ ಕಟ್ಟಡ ನಿರ್ಮಾಣ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಸರ್ಕಾರ ಚಿಂತನೆ ನಡೆಸಿದೆ. ಶಾಲಾ ಮಕ್ಕಳಿಗೆ ಬಿಸಿಲಿನ ತಾಪದಿಂದ ರಕ್ಷಣೆ ನೀಡಲು ಓಆರ್‌ಎಸ್ ಪಾಕೆಟ್ ವಿತರಿಸುವುದು, ಉಪಗ್ರಹ ದತ್ತಾಂಶದ ಮೂಲಕ ಅಯಾನಗರ, ನಜಾಫ್‌ಗಡ್, ವಜೀರ್ಪುರ ಮತ್ತು ಜಹಾಂಗೀರ್ ಪುರಿಯಂತಹ ಅತಿಹೆಚ್ಚು ತಾಪಮಾನ ದಾಖಲಾಗುವ ಹಾಟ್‌ಸ್ಪಾಟ್‌ಗಳನ್ನು ಗುರುತಿಸಲಾಗಿದೆ. ಇಲ್ಲಿ ಹೆಚ್ಚಿನ ನೀರಿನ ಟ್ಯಾಂಕರ್ ಮತ್ತು ವೈದ್ಯಕೀಯ ತಂಡಗಳನ್ನು ನಿಯೋಜಿಸ ಲಾಗುವುದು.

ಉದ್ಯಾನವನಗಳು ಮತ್ತು ಬಸ್ ಡಿಪೋಗಳಲ್ಲಿ ಪ್ರಾಣಿ–ಪಕ್ಷಿಗಳಿಗೆ ನೆರಳು ಮತ್ತು ನೀರಿನ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. ದೆಹಲಿಯ 339 ಆರೋಗ್ಯ ಕೇಂದ್ರಗಳು ಮತ್ತು 30ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಬಿಸಿಲಿನ ಬೇಗೆಯಿಂದ ಅಸ್ವಸ್ಥರಾದವರಿಗಾಗಿ ವಿಶೇಷ 'ಕೂಲ್ ರೂಮ್' (Cool Rooms) ಸಿದ್ಧಪಡಿಸಲಾಗಿದೆ.

ತುರ್ತು ಸಂದರ್ಭದಲ್ಲಿ ನೆರವು ಪಡೆಯಲು ಜನರು 1077, 1070 ಅಥವಾ 112 ಸಹಾಯವಾಣಿ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಕಾಶ್ಮೀರಿ ಗೇಟ್ ಐಎಸ್‌ಬಿಟಿ (ISBT) ನಲ್ಲಿ ಪ್ರಾಯೋಗಿಕವಾಗಿ 'ಕೂಲ್ ರೂಫ್' (Cool Roof) ಅಳವಡಿಸಲಾಗಿದ್ದು, ಇದನ್ನು ನಗರದ ಇತರ ಭಾಗಗಳಿಗೂ ವಿಸ್ತರಿಸುವ ಯೋಜನೆಯಿದೆ. ಈ ಬಾರಿ ವಿದ್ಯುತ್ ಬೇಡಿಕೆ 8,442 ಮೆಗಾವ್ಯಾಟ್ ಮೀರುವ ನಿರೀಕ್ಷೆಯಿದೆ. ಆದ್ದರಿಂದ ಆಸ್ಪತ್ರೆಗಳು ಮತ್ತು ನೀರಿನ ಸಂಸ್ಕರಣಾ ಘಟಕಗಳಿಗೆ ಅಡೆತಡೆಯಿಲ್ಲದ ವಿದ್ಯುತ್ ಪೂರೈಕೆ ಖಚಿತಪಡಿಸಿಕೊಳ್ಳಲು ಮುಖ್ಯಮಂತ್ರಿಗಳು ನಿರ್ದೇಶನ ನೀಡಿದ್ದಾರೆ.

# ಟ್ರಂಪ್ ಔತಣಕೂಟದಲ್ಲಿ ಗುಂಡಿನ ದಾಳಿ: ಎಲ್ಲರೂ ಸುರಕ್ಷಿತ

## ದಾಳಿ ನಡೆಸಿದ ವ್ಯಕ್ತಿ ಬಂಧನ, ಸಮಾರಂಭದಲ್ಲಿದ್ದ ಎಲ್ಲರೂ ಅಪಾಯದಿಂದ ಪಾರು




ವಾಷಿಂಗ್ಟನ್, ಏ.26: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ಮತ್ತು ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದ 'ವೈಟ್ ಹೌಸ್ ಕರೆಸ್ಪಾಂಡೆಂಟ್ಸ್ ಅಸೋಸಿಯೇಷನ್' ಔತಣಕೂಟದಲ್ಲಿ ಗುಂಡಿನ ದಾಳಿ ನಡೆದಿದ್ದು ಟ್ರಂಪ್ ಸೇರಿ ಎಲ್ಲ ಗಣ್ಯರೂ ಅಪಾಯದಿಂದ ಪಾರಾಗಿದ್ದಾರೆ.

ಶನಿವಾರ ರಾತ್ರಿ ಶನಿವಾರ ರಾತ್ರಿ 8:36ಕ್ಕೆ (ಭಾರತೀಯ ಕಾಲಮಾನ ಭಾನುವಾರ ಬೆಳಗ್ಗೆ 6:06) ವಾಷಿಂಗ್ಟನ್‌ನ ಹ್ಯಾಮಿಲ್ಟನ್ ಹೋಟೆಲ್‌ನಲ್ಲಿ ಈ ಘಟನೆ ನಡೆದಿದೆ. ಭದ್ರತಾ ತಪಾಸಣಾ ಕೇಂದ್ರದ ಬಳಿ ಶಸ್ತ್ರಸಜ್ಜಿತ ವ್ಯಕ್ತಿಯೊಬ್ಬ ನುಗ್ಗಲು ಯತ್ನಿಸಿದಾಗ ಭದ್ರತಾ ಸಿಬ್ಬಂದಿ ಅವನನ್ನು ತಡೆದಿದ್ದಾರೆ. ಈ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಸೀಕ್ರೆಟ್ ಸರ್ವಿಸ್ ಅಧಿಕಾರಿಯೊಬ್ಬರು ಗಾಯಗೊಂಡಿದ್ದು, ಅವರು ಧರಿಸಿದ್ದ ಬುಲೆಟ್ ಪ್ರೂಫ್ ಜಾಕೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ದಾಳಿಕೋರನನ್ನು ಬಂಧಿಸಲಾಗಿದ್ದು, ಆತ ಅದೇ ಹೋಟೆಲ್‌ನಲ್ಲಿ ತಂಗಿದ್ದ ಎಂದು ತಿಳಿದುಬಂದಿದೆ.

ಪ್ರಸ್ತುತ ಎಫ್‌ಬಿಐ ಮತ್ತು ಸ್ಥಳೀಯ ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದು, ದಾಳಿಯ ಹಿಂದಿನ ಉದ್ದೇಶ ಏನೆಂದು ತಿಳಿದುಬಂದಿಲ್ಲ. ಈ ಘಟನೆ ನಂತರ ಕೆಲವೇ ಗಂಟೆಗಳಲ್ಲೇ ಟ್ರಂಪ್ ಮತ್ತು ಇತರ ವೈಟ್ ಹೌಸ್ ಹಿರಿಯ ಅಧಿಕಾರಿಗಳನ್ನು ವೈಟ್ ಹೌಸ್ ವರದಿಗಾರರ ಔತಣಕೂಟ ಸ್ಥಳದಿಂದ ಸ್ಥಳಾಂತರಿಸಲಾಯಿತು.

**ಟ್ರಂಪ್ ಹೇಳಿಕೆ**

ಘಟನೆಯ ನಂತರ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯಿಸಿರುವ ಡೊನಾಲ್ಡ್ ಟ್ರಂಪ್, "ಸೀಕ್ರೆಟ್ ಸರ್ವಿಸ್ ಸಿಬ್ಬಂದಿ ಅತ್ಯಂತ ಧೈರ್ಯದಿಂದ ಕೆಲಸ ಮಾಡಿ ದಾಳಿಕೋರನನ್ನು ಬಂಧಿಸಿದ್ದಾರೆ. ನಾವೆಲ್ಲರೂ ಸುರಕ್ಷಿತವಾಗಿದ್ದೇವೆ. ಘಟನೆಯ ಹಿನ್ನೆಲೆಯಲ್ಲಿ ಔತಣಕೂಟವನ್ನು ಮುಂದೂಡಲಾಗಿದ್ದು, ಮುಂದಿನ 30 ದಿನಗಳಲ್ಲಿ ಮತ್ತೆ ಆಯೋಜಿಸಲಾಗುವುದು ಎಂದು ತಿಳಿಸಿದ್ದಾರೆ.

**ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಸ್ಥಾನವಿಲ್ಲ: ಮೋದಿ ಪ್ರತಿಕ್ರಿಯೆ**

ವಾಷಿಂಗ್ಟನ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಗವಹಿಸಿದ್ದ ವೈಟ್‌ಹೌಸ್ ಕಾರ್ಯಕ್ರಮದಲ್ಲಿ ನಡೆದ ಗುಂಡಿನ ದಾಳಿ ಘಟನೆಗೆ ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ. ಟ್ರಂಪ್ ಮತ್ತು ಅವರ ಕುಟುಂಬದವರು ಸುರಕ್ಷಿತವಾಗಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಹಿಂಸೆಗೆ ಸ್ಥಾನವಿಲ್ಲ ಮತ್ತು ಇಂತಹ ಘಟನೆಗಳನ್ನು ಕಟುವಾಗಿ ಖಂಡಿಸಬೇಕು. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಮೆಲಾನಿಯಾ ಟ್ರಂಪ್ ಹಾಗೂ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ಸಮಾರಂಭದಲ್ಲಿ ಉಪಸ್ಥಿತರಿದ್ದವರೆಲ್ಲ ಸುರಕ್ಷಿತವಾಗಿದ್ದಾರೆ ಎಂಬುದನ್ನು ತಿಳಿದು ಸಂತೋಷವಾಗುತ್ತಿದೆ ಎಂದಿದ್ದಾರೆ.

**ದಾಳಿಕೋರ ಯಾರು?**

ಗುಂಡಿನ ದಾಳಿ ನಡೆಸಿದ ವ್ಯಕ್ತಿಯನ್ನು ಕ್ಯಾಲಿಫೋರ್ನಿಯಾದ ಟೋರೆನ್ಸ್‌ನ ಕೋಲ್ ಟೋಮಾಸ್ ಆಲೆನ್ (31) ಎಂದು ಗುರುತಿಸಲಾಗಿದೆ. ತಕ್ಷಣಕ್ಕೆ ಯಾವುದೇ ಸಾವು ನೋವುಗಳಾಗಿರುವ ಬಗ್ಗೆ ವರದಿ ಲಭ್ಯವಾಗಿಲ್ಲ, ಆದರೆ ಒಬ್ಬ ಅಧಿಕಾರಿ ಗುಂಡಿನ ದಾಳಿ ನಡೆದಿರುವುದಾಗಿ ತಿಳಿಸಿದ್ದಾರೆ. ಇದರಿಂದ ಭದ್ರತಾ ಸಿಬ್ಬಂದಿ ತಕ್ಷಣ ಕ್ರಮ ಕೈಗೊಂಡರು. ಆರೋಪಿಯನ್ನು ಬಂಧನದಲ್ಲಿಟ್ಟಿರುವುದಾಗಿ ಎಫ್‌ಬಿಐ ದೃಢಪಡಿಸಿದ್ದು, ವಾಷಿಂಗ್ಟನ್ ಕಚೇರಿ ಈ ಪ್ರಕರಣದ ತನಿಖೆ ಮುಂದುವರಿದಿದೆ.

ಅಮೆರಿಕದ ಅಟಾರ್ನಿ ಜೀನಿನ್ ಪಿರೋ ಅವರ ಪ್ರಕಾರ, ಆರೋಪಿಯನ್ನು ಸೋಮವಾರ ಫೆಡರಲ್ ಜಿಲ್ಲಾ ನ್ಯಾಯಾಲಯದಲ್ಲಿ ಹಾಜರುಪಡಿಸುವ ನಿರೀಕ್ಷೆಯಿದೆ. ಘಟನೆ ಸಮಯದಲ್ಲಿ ಆರೋಪಿಯ ಬಳಿ ಹಲವಾರು ಶಸ್ತ್ರಾಸ್ತ್ರಗಳು ಇದ್ದವು, ಇದು ಭದ್ರತಾ ಲೋಪದ ಗಂಭೀರತೆಯನ್ನು ಸೂಚಿಸುತ್ತದೆ.

## 2027ಕ್ಕೆ ಗುಜರಾತ್-ಮುಂಬೈ ಮಧ್ಯೆ ಮೊದಲ ಸ್ವದೇಶಿ ಬುಲೆಟ್ ರೈಲು ಸಂಚಾರ ಆರಂಭ



**ನವದೆಹಲಿ, ಏ.26:** ಭಾರತವು ಮೊದಲ ಸ್ವದೇಶಿ ಬುಲೆಟ್ ರೈಲನ್ನು ಅಭಿವೃದ್ಧಿಪಡಿಸುತ್ತಿದ್ದು, ಇದು 2027ರ ವೇಳೆಗೆ ಚಾಲನೆಗೆ ಬರುವ ನಿರೀಕ್ಷೆಯಿದೆ. ಬುಲೆಟ್ ರೈಲು ಇದೇ ವರ್ಷದ ಆ. 15ರಂದು ಅಹಮದಾಬಾದ್ ಮತ್ತು ಮುಂಬೈ ನಡುವೆ ಚಲಿಸುತ್ತದೆ. ಜಾಗತಿಕ ಹೈಸ್ಪೀಡ್ ರೈಲುಜಾಲಕ್ಕೆ ಸೇರುವ ಭಾರತದ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್ ಇದಾಗಿದ್ದು, ಭಾರತೀಯ ರೈಲ್ವೆಯ ವಿಕಾಸದಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ.

ಜಪಾನಿನ ಶಿಂಕನ್ಸೆನ್ ತಂತ್ರಜ್ಞಾನದೊಂದಿಗೆ ನಿರ್ಮಿಸಲಾದ ಮುಂಬೈ–ಅಹಮದಾಬಾದ್ ಹೈಸ್ಪೀಡ್ ರೈಲು ಕಾರಿಡಾರ್ ಭಾರತದ ಮೊದಲ ಕಾರ್ಯಾಚರಣಾ ಬುಲೆಟ್ ರೈಲು ಯೋಜನೆಯಾಗಿದೆ. ಭವಿಷ್ಯದಲ್ಲಿ ಸ್ವದೇಶಿ ಆವೃತ್ತಿಯು ಸ್ವದೇಶಿ ನಾವೀನ್ಯತೆಯ ಕಡೆಗೆ ಆಧುನಿಕ ಕಾರ್ಯತಂತ್ರದ ಬದಲಾವಣೆಗಳನ್ನು ಈ ಪ್ರಾಜೆಕ್ಟ್ ಸೂಚಿಸುತ್ತದೆ.

**ಭಾರತದಲ್ಲೇ ತಯಾರಾಗ್ತಿದೆ ಸ್ವದೇಶಿ ಬುಲೆಟ್ ಟ್ರೈನ್**

2017ರಲ್ಲಿ ಶಂಕು ಸ್ಥಾಪನೆ ನೆರವೇರಿಸಿದ ಈ ರೈಲ್ವೆ ಯೋಜನೆಯು ಹತ್ತು ವರ್ಷಗಳ ನಂತರ ಅಂದರೆ, 2027ಕ್ಕೆ ಮುಗಿಯುವ ಸಾಧ್ಯತೆಯಿದೆ. ಬುಲೆಟ್ ರೈಲನ್ನು ಭಾರತೀಯ ರೈಲ್ವೆಯು BEML ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸುತ್ತಿದ್ದು, ಜಪಾನ್ ಸರ್ಕಾರದ ತಾಂತ್ರಿಕ ಮತ್ತು ಆರ್ಥಿಕ ನೆರವಿನೊಂದಿಗೆ ಈ ಬೃಹತ್ ಯೋಜನೆ ನಡೆಯುತ್ತಿದೆ. ಈಗಾಗಲೇ 412 ಕಿ.ಮೀ ಅಡಿಪಾಯದ ಕೆಲಸ, 405 ಕಿ.ಮೀ ಉದ್ದದ ಪಿಯರ್ ಮತ್ತು 330 ಕಿ.ಮೀ ಉದ್ದದ ಗರ್ಡರ್‌ಗಳ ಸ್ಥಾಪನೆ ಸೇರಿದಂತೆ ನಿರ್ಮಾಣ ಕಾರ್ಯದಲ್ಲಿ ಗಮನಾರ್ಹ ಪ್ರಗತಿ ಸಾಧಿಸಲಾಗಿದೆ. ಆಮದು ಮಾಡಿಕೊಳ್ಳುವುದು ಮತ್ತು ವಿದೇಶಿ ತಂತ್ರಜ್ಞಾನದ ಮೇಲಿನ ಅವಲಂಬನೆ ಕಡಿಮೆ ಮಾಡುವ ಉದ್ದೇಶದಿಂದ ಈ ರೈಲು ಭಾರತದಲ್ಲೇ ತಯಾರಾಗುತ್ತಿದೆ.

# ದೀದಿ ಆಳ್ವಿಕೆಯಲ್ಲಿ ಮಹಿಳೆಯರ ಸುರಕ್ಷತೆಗೆ ಧಕ್ಕೆ : ಪ್ರಧಾನಿ ಮೋದಿ ವಾಗ್ದಾಳಿ

**ಕೋಲ್ಕತ್ತಾ, ಏ.26:** ಎರಡನೇ ಹಂತದ ಚುನಾವಣೆಗೆ ಮುನ್ನ ಬಂಗಾಳದಲ್ಲಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಪ್ರಮುಖ ಕ್ಷೇತ್ರದ ವಿರುದ್ಧ ಇಂದು ವಾಗ್ದಾಳಿ ನಡೆಸಿದರು, ಪಕ್ಷವು "15 ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದಾಗಿನಿಂದ" ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳನ್ನು ಪಟ್ಟಿ ಮಾಡಿದರು. ರಾಜ್ಯದ ಆಡಳಿತ ಪಕ್ಷವು ತನ್ನದೇ ಆದ "ಮಾ ಮತಿ ಮಾನುಷ್" ಘೋಷಣೆಯನ್ನು ದ್ರೋಹ ಮಾಡಿದೆ ಎಂದು ಅವರು ಹೇಳಿದರು. "'ಮಾ' ಅಳುತ್ತಿದ್ದಾನೆ, 'ಮಾತಿ' ಒಳನುಸುಳು ಕೋರರೊಂದಿಗೆ ಇದ್ದಾನೆ, 'ಮಾನುಷ್' ಭಯಭೀತನಾಗಿದ್ದಾನೆ" ಎಂದು ಅವರು ಹೇಳಿದರು.

ತೃಣಮೂಲ ಪಕ್ಷವು ಬಂಗಾಳದಲ್ಲಿ ಮಹಿಳೆಯರಿಗೆ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ವಿಫಲವಾಗಿದೆ ಎಂದು ಅವರು ಹೇಳಿದರು, ಕೋಲ್ಕತ್ತಾದ ಆರ್‌ಜಿ ಕಾರ್ ಆಸ್ಪತ್ರೆಯಲ್ಲಿ ಯುವ ವೈದ್ಯೆಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಮತ್ತು ರಾಜ್ಯ ರಾಜಧಾನಿಯಿಂದ ಕೇವಲ 20 ಕಿಮೀ ದೂರದಲ್ಲಿರುವ ಕಾಮದುನಿಯಲ್ಲಿ 20 ವರ್ಷದ ಯುವತಿಯ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಸೇರಿದಂತೆ ಹಲವಾರು ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಪಟ್ಟಿ ಮಾಡಿದರು.

ಮಹಿಳೆಯರು ಬಂಗಾಳದ ಮುಖ್ಯಮಂತ್ರಿಯ ಕಟ್ಟಾ ಬೆಂಬಲಿಗರಾಗಿದ್ದಾರೆ, ಅವರು ವರ್ಷಗಳಿಂದ ಅವರಿಗಾಗಿ ಹಲವಾರು ಯೋಜನೆಗಳನ್ನು ಪರಿಚಯಿಸಿದ್ದಾರೆ, ಅವುಗಳಲ್ಲಿ ಲಕ್ಷ್ಮೀರ್ ಭಂಡಾರ್ (ಮಾಸಿಕ ನಗದು ವರ್ಗಾವಣೆ), ಕನ್ಯಾಶ್ರೀ (ಶಿಕ್ಷಣಕ್ಕೆ ಆರ್ಥಿಕ ನೆರವು), ರೂಪಶ್ರೀ (ಮದುವೆಗೆ ನೆರವು) ಮತ್ತು "ಮುಕ್ತಿರ್ ಅಲೋ ಯೋಜನೆ" ಅಡಿಯಲ್ಲಿ ವೃತ್ತಿಪರ ತರಬೇತಿ ಸೇರಿವೆ.

ಇದು ರಾಜ್ಯದ ಮಹಿಳೆಯರು ಶಿಕ್ಷಣವನ್ನು ಮುಂದುವರಿಸಲು ಮತ್ತು ಸ್ವಾತಂತ್ರ್ಯವನ್ನು ಸಾಧಿಸಲು ಅನುವು ಮಾಡಿಕೊಟ್ಟಿದೆ. ಅವರ ಬೆಂಬಲದೊಂದಿಗೆ, ರಾಜ್ಯದ ಮಹಿಳೆಯರು ಕೇವಲ ಮತದಾರರು ಮತ್ತು ಅವರ ಕಟ್ಟಾ ಬೆಂಬಲಿಗರಾಗಿ ಮಾತ್ರವಲ್ಲದೆ ನೀತಿ ನಿರ್ದೇಶನವನ್ನು ರೂಪಿಸುವ ಸಾಮಾಜಿಕ ಮತ್ತು ಆರ್ಥಿಕ ಶಕ್ತಿಗಳಾಗಿ ಹೊರಹೊಮ್ಮಿದ್ದಾರೆ.

2024 ರ ಲೋಕಸಭಾ ಚುನಾವಣೆಗೆ ಮೊದಲು ಸಂದೇಶಖಾಲಿಯಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಶೋಷಣೆ ಸುದ್ದಿಯಾದಾಗಿನಿಂದ ಬಿಜೆಪಿ ಗುರಿಯಾಗಿಸಿಕೊಂಡಿರುವ ನೆಲೆ ಇದು.

ಇಂದು, ಪ್ರಧಾನಿ ಮೋದಿ "ಬಂಗಾಳದ ಪ್ರತಿಯೊಬ್ಬ ಸಹೋದರಿ ಮತ್ತು ಮಗಳು ಈಗ ಕರುಣಾಳು ತೃಣಮೂಲ ಸರ್ಕಾರದ ವಿರುದ್ಧ ದಂಗೆ ಎದ್ದಿದ್ದಾರೆ ಮತ್ತು ಮೊದಲ ಹಂತದ ಮತದಾನದಲ್ಲಿ ನಾವು ಇದರ ಒಂದು ನೋಟವನ್ನು ನೋಡಿದ್ದೇವೆ" ಎಂದು ಹೇಳಿದರು.



ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ 2ನೇ ಹಂತದ ಮತದಾನದ ಹಿನ್ನೆಲೆಯಲ್ಲಿ ಭಾನುವಾರ ಅರಂಬಾಗ್‌ನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು.

"ಮಹಿಳಾ ಸಬಲೀಕರಣದಲ್ಲಿ ಮುಂಚೂಣಿಯಲ್ಲಿರುವ ಬಂಗಾಳವನ್ನು ತೃಣಮೂಲ ಪಕ್ಷವು ಕೆಳಮಟ್ಟಕ್ಕೆ ಇಳಿಸಿದೆ. ಪ್ರತಿದಿನ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಗಳ ವರದಿಗಳು ಬರುತ್ತಿವೆ. ಅವರ 15 ವರ್ಷಗಳ ಕಾನೂನುಬಾಹಿರ ಆಳ್ವಿಕೆಯಲ್ಲಿ, ಅನೇಕ ಪ್ರಮುಖ ಅತ್ಯಾಚಾರ ಮತ್ತು ಕೊಲೆ ಘಟನೆಗಳು ಸಂಭವಿಸಿವೆ – ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಅತ್ಯಾಚಾರ ಮತ್ತು ಕೊಲೆ, ಕಸ್ಬಾ ಕಾನೂನು ಕಾಲೇಜು ಅತ್ಯಾಚಾರ, ಪಾರ್ಕ್ ಸ್ಟ್ರೀಟ್ ಸಾಮೂಹಿಕ ಅತ್ಯಾಚಾರ, ಹನ್ಸ್‌ಖಾಲಿ ಅತ್ಯಾಚಾರ ಮತ್ತು ಕೊಲೆ, ಕಾಮದುನಿ ಸಾಮೂಹಿಕ ಅತ್ಯಾಚಾರ, ದುರ್ಗಾಪುರ ವೈದ್ಯಕೀಯ ಕಾಲೇಜು ಅತ್ಯಾಚಾರ ಪ್ರಕರಣ," ಅವರು ಹೇಳಿದರು.

"ಶಾಲೆಗಳು ಅಥವಾ ಕಾಲೇಜುಗಳಲ್ಲಿ ಅಪರಾಧಗಳು ನಡೆದಿರುವ ಅಥವಾ ಕರ್ತವ್ಯದಲ್ಲಿರುವಾಗ ಹೆಣ್ಣುಮಕ್ಕಳ ಮೇಲೆ ಕಿರುಕುಳ ನೀಡಲಾದ ಇಂತಹ ಅನೇಕ ಘಟನೆಗಳಿವೆ. ಮತ್ತು ಹೆಚ್ಚಿನ ಸಂದರ್ಭಗಳಲ್ಲಿ, ತೃಣಮೂಲ ನಾಯಕರು ಭಾಗಿಯಾಗಿದ್ದಾರೆ... ಈ ದಯೆಯಿಲ್ಲದ ಸರ್ಕಾರವು ಗೂಂಡಾಗಳನ್ನು ರಕ್ಷಿಸುತ್ತದೆ ಮತ್ತು ಬದಲಾಗಿ ಹೆಣ್ಣುಮಕ್ಕಳನ್ನು ದೂಷಿಸುತ್ತದೆ... ಮೇ 4 ರ ನಂತರ, ಪ್ರತಿಯೊಬ್ಬ ಗೂಂಡಾ, ಪ್ರತಿಯೊಬ್ಬ ದಬ್ಬಾಳಿಕೋರ ಮತ್ತು ತೃಣಮೂಲ ಕಾಂಗ್ರೆಸ್‌ನ ಪ್ರತಿಯೊಬ್ಬ ಭ್ರಷ್ಟ ವ್ಯಕ್ತಿಯ ಖಾತೆ ಇರುತ್ತದೆ" ಎಂದು ಅವರು ಹೇಳಿದರು.

ಬಂಗಾಳವು ಮೊದಲ ಹಂತದಲ್ಲಿ ಅಗಾಧವಾಗಿ ಮತ ಚಲಾಯಿಸಿದೆ, ಮತದಾನದ ಸಂಖ್ಯೆ ಶೇ.91 ದಾಟಿದೆ. ಬಿಜೆಪಿ ಮತ್ತು ತೃಣಮೂಲ ಎರಡೂ ಪಕ್ಷಗಳು ತಮಗೆ ಬೆಂಬಲ ಸೂಚಿಸಿವೆ ಎಂದು ಹೇಳಿಕೊಂಡಿವೆ. ಮುಂದಿನ ಹಂತದ ಮತದಾನ ಏ.29 ರಂದು ನಡೆಯಲಿದ್ದು, ಮತ ಎಣಿಕೆ ಮೇ 4 ರಂದು ನಡೆಯಲಿದೆ.

# ಭಾರತ ಒಕ್ಕೂಟ ಸೇರಿ 50 ವರ್ಷ ಪೂರೈಸಿದ ಸಿಕ್ಕಿಂ

- ಸಿಕ್ಕಿಂಗೆ ಪ್ರಧಾನಿ ಮೋದಿ ಭೇಟಿ, ಸ್ವರ್ಣ ಮಹೋತ್ಸವದಲ್ಲಿ ಭಾಗಿ
- 4,000 ಕೋಟಿ ರೂ.ಗಳ ಅಭಿವೃದ್ಧಿ ಯೋಜನೆಗಳ ಕೊಡುಗೆ

**ನವದೆಹಲಿ, ಏ.26:** ಸಿಕ್ಕಿಂ ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಿ 50 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ (ಸ್ವರ್ಣ ಮಹೋತ್ಸವ), ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 27 ಮತ್ತು 28ರಂದು ಎರಡು ದಿನ ಸಿಕ್ಕಿಂ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಸುಮಾರು 4,000 ಕೋಟಿ ರೂಪಾಯಿಗಳಿಗೂ ಅಧಿಕ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಏ.27ರಂದು ಮಧ್ಯಾಹ್ನ ಗ್ಯಾಂಗ್‌ಟಕ್‌ಗೆ ಪ್ರಧಾನಿ ಮೋದಿ ಆಗಮಿಸಲಿದ್ದಾರೆ. ಏ.28ರಂದು ಬೆಳಗ್ಗೆ ಆರ್ಕಿಡೇರಿಯಂಗೆ ಭೇಟಿ ನೀಡಿ ವಿಶ್ವದರ್ಜೆಯ ಆರ್ಕಿಡ್ ಅನುಭವ ಕೇಂದ್ರವಾದ 'ಸ್ವರ್ಣಜಯಂತಿ ಮೈತ್ರಿ ಮಂಜರಿ ಪಾರ್ಕ್' ಉದ್ಘಾಟಿಸಲಿದ್ದಾರೆ. ನಂತರ ಪಾಲ್ಜೋರ್ ಸ್ಟೇಡಿಯಂನಲ್ಲಿ ನಡೆಯಲಿರುವ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

### ಯಾವ್ಯಾವ ಯೋಜನೆಗಳು

- ಯಂಗ್ಯಾಂಗ್‌ನ ಸಿಕ್ಕಿಂ ವಿಶ್ವವಿದ್ಯಾಲಯದ ಆವರಣದಲ್ಲಿ 100 ಹಾಸಿಗೆಗಳ ಆಯುರ್ವೇದ ಆಸ್ಪತ್ರೆ ಮತ್ತು ನೇತಾಜಿ ಸುಭಾಷ್ ಚಂದ್ರ ಬೋಸ್ ಶ್ರೇಷ್ಠತಾ ವಿ.ವಿ. ಉದ್ಘಾಟನೆ.
- ತೀಸ್ತಾ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಎರಡು ಸ್ಟೀಲ್ ಆರ್ಚ್ ಸೇತುವೆಗಳ ಶಂಕುಸ್ಥಾಪನೆ ಮತ್ತು ವಿವಿಧ ರಸ್ತೆ ಮೇಲ್ದರ್ಜೆಗೇರಿಸುವ ಯೋಜನೆ.
- ಗ್ಯಾಂಗ್‌ಟಕ್ ರಿಡ್ಜ್ ಪ್ರದೇಶದ ಪುನರಾಭಿವೃದ್ಧಿ, ಸೋರೆಂಗ್‌ನಲ್ಲಿ ಪರಿಸರ ಪ್ರವಾಸೋದ್ಯಮ ಸೌಲಭ್ಯಗಳು ಮತ್ತು ಕೈಲಾಸ ಮಾನಸ ಸರೋವರ ಯಾತ್ರೆಗೆ ಸಂಬಂಧಿಸಿದ ಮೂಲಸೌಕರ್ಯಗಳ ವಿಸ್ತರಣೆ.
- ರೈತರ ಆದಾಯ ಹೆಚ್ಚಿಸಲು ಸಿಕ್ಕಿಂ ಐಫಿಕೊ ಸಂಸ್ಕರಣಾ ಘಟಕ ಮತ್ತು ಪಾಕ್ಯಾಂಗ್ ಜಿಲ್ಲೆಯಲ್ಲಿ ಒಳಾಂಗಣ ಕ್ರಿಕೆಟ್ ಸೌಲಭ್ಯದ ಉದ್ಘಾಟನೆ.
- 1975ರಲ್ಲಿ ಭಾರತದ 22ನೇ ರಾಜ್ಯವಾಗಿ ಸೇರಿದ ಸಿಕ್ಕಿಂನ ಸಮಗ್ರ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಬದ್ಧವಾಗಿದೆ ಎಂಬುದನ್ನು ಈ ಭೇಟಿ ಸಾಬೀತುಪಡಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪಶ್ಚಿಮ ಬಂಗಾಳದ ಬಂಗಾಂವ್‌ನಲ್ಲಿ ಭಾನುವಾರ ವಿಜಯ್ ಸಂಕಲ್ಪ ಸಭೆಯನ್ನುದ್ದೇಶಿಸಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು.

# ಈ ಬಾರಿ ಟಿಎಂಸಿ ಸರ್ಕಾರ ಅಧಿಕಾರಕ್ಕೆ ಬರಲ್ಲ

- ಬಿಜೆಪಿಗೇ ಗೆಲುವು: ಕೇಂದ್ರ ಸಚಿವ ಅಮಿತ್ ಶಾ ವಿಶ್ವಾಸ
- ಕಾನೂನು ಕ್ರಮದ ಮಾತನಾಡಿದ್ದ ಮಮತಾ ಬ್ಯಾನರ್ಜಿಗೆ ತಿರುಗೇಟು

**ಕೋಲ್ಕತ್ತಾ, ಏ.26:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಈ ಬಾರಿ ಮಮತಾ ಬ್ಯಾನರ್ಜಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಬದಲಾಗಿ ಬಿಜೆಪಿ ಗೆಲ್ಲುತ್ತದೆ ಎಂದು ಕೇಂದ್ರ ಗೃಹ ಸಚಿವ ಅಮಿತ್‌ಶಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೋಲ್ಕತ್ತಾದ ಟಾಲಿಗಂಜ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರೋಡ್‌ಶೋ ವೇಳೆ ಮಾತನಾಡಿದ ಅವರು, ಪ್ರತಿಯೊಂದು ಪಕ್ಷವೂ ಗೆಲ್ಲುವ ವಿಶ್ವಾಸದ ಮಾತುಗಳನ್ನಾಡುವುದು ಸಹಜ. ರಾಹುಲ್ ಗಾಂಧಿ ಕೂಡ ಅದನ್ನೇ ಮಾಡುತ್ತಿದ್ದಾರೆ. ಆದರೆ, ಈ ಬಾರಿ ಮಮತಾ ಬ್ಯಾನರ್ಜಿ ಆಯ್ಕೆಯಾಗುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಎಂದಿದ್ದಾರೆ.

ಹಿಂಸಾತ್ಮಕ ಹೇಳಿಕೆಗಳ ಬಗ್ಗೆ ತಮ್ಮ ವಿರುದ್ಧ ಕಾನೂನು ಪ್ರಕರಣ ಹೂಡುವುದಾಗಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೀಡಿದ ಹೇಳಿಕೆಯನ್ನು ಟೀಕಿಸಿದ ಅಮಿತ್‌ಶಾ, ಮಮತಾ ಬ್ಯಾನರ್ಜಿ ಮಾತನಾಡುತ್ತಲೇ ಇರುತ್ತಾರೆ ಹಾಗೂ ನ್ಯಾಯಾಲಯದಲ್ಲಿ ಸೋಲುತ್ತಲೇ ಇರುತ್ತಾರೆ. ಅವರು ಅದನ್ನೇ ಮುಂದುವರಿಸುತ್ತಾರೆ. ನಾವು ಸಾರ್ವಜನಿಕರ ನಡುವೆ ಇದ್ದೇವೆ ಮತ್ತು ಬಂಗಾಳದ ಜನರು ಏ.29ರಂದು ನಿರ್ಧರಿಸಬೇಕಾಗುತ್ತದೆ ಎಂದು ಹೇಳಿದರು.

ಗೂಂಡಾಗಳನ್ನು ಗೌರವಿಸಬೇಕು ಎಂದು ಮಮತಾ ಬ್ಯಾನರ್ಜಿ ಬಯಸುತ್ತಾರೆಯೇ? ಸಾರ್ವಜನಿಕರಿಗೆ ತೊಂದರೆ ನೀಡುವವರನ್ನು ಗೌರವಿಸುವುದು ಅವರ ಯೋಜನೆಯಾಗಿದೆ ಎಂದು ತಿರುಗೇಟು ನೀಡಿದರು.

### ಸ್ವೀಕಾರಾರ್ಹವಲ್ಲ

ಅಮಿತ್ ಶಾ ಅವರ ಹಿಂಸಾತ್ಮಕ ಹೇಳಿಕೆಗಳಿಗಾಗಿ ಅವರ ವಿರುದ್ಧ ಕಾನೂನು ಮೊಕದ್ದಮೆ ಹೂಡಲಿದ್ದೇವೆ. ಗೃಹ ಸಚಿವರಾಗಿ ಅವರು ಅಂತಹ ಹೇಳಿಕೆಗಳನ್ನು ನೀಡುವಂತಿಲ್ಲ ಎಂದು ಮಮತಾ ಬ್ಯಾನರ್ಜಿ ಹೇಳಿದ್ದರು.

ಚುನಾವಣೆಯ ನಂತರ ಜನರನ್ನು ತಲೆಕೆಳಗಾಗಿ ನೇತು ಹಾಕುತ್ತೀರಿ ಎಂಬ ಗೃಹ ಸಚಿವರ ಹೇಳಿಕೆ ಸ್ವೀಕಾರಾರ್ಹವಲ್ಲ. ಈ ಮನಸ್ಥಿತಿಯೊಂದಿಗೆ, ನೀವು ಎಂದಿಗೂ ಬಂಗಾಳವನ್ನು ಗೆಲ್ಲಲು ಸಾಧ್ಯವಿಲ್ಲ ಮಮತಾ ವಾದಿಸಿದ್ದರು. ಕಳೆದ ಶುಕ್ರವಾರದಂದು ಉತ್ತರಪಾರ ಮತ್ತು ಹಿಂಗಲ್‌ಗಂಜ್ ವಿಧಾನಸಭಾ ಕ್ಷೇತ್ರಗಳಲ್ಲಿ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಿದ ಶಾ, ಪಶ್ಚಿಮ ಬಂಗಾಳದಲ್ಲಿ ಎರಡನೇ ಹಂತದ ಮತದಾನ ನಡೆಯಲಿರುವ ಏಪ್ರಿಲ್ 29ರಂದು ಗೂಂಡಾಗಳು ಮನೆಗಳಿಂದ ಹೊರಬರದಂತೆ ಎಚ್ಚರಿಕೆ ನೀಡಿದ್ದರು.

# ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ತರಬೇತಿ ನೀಡಲು ಏಳು ಪ್ರಯೋಗಾಲಯ ಸ್ಥಾಪಿಸುವ ಪ್ರಸ್ತಾವನೆ

- ದೇಶದ ಏಳು ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರ ಪರಾಮರ್ಶೆ

**ನವದೆಹಲಿ, ಏ.26:** ವಿದ್ಯಾರ್ಥಿಗಳಿಗೆ ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಪ್ರಾಯೋಗಿಕ ತರಬೇತಿ ನೀಡುವ ಉದ್ದೇಶದಿಂದ ದೇಶದ ಏಳು ಪ್ರಮುಖ ಶೈಕ್ಷಣಿಕ ಸಂಸ್ಥೆಗಳಲ್ಲಿ ಬಾಹ್ಯಾಕಾಶ ಪ್ರಯೋಗಾಲಯಗಳನ್ನು (Space Labs) ಸ್ಥಾಪಿಸುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ಪರಾಮರ್ಶಿಸಿದೆ.

**ಬಾಹ್ಯಾಕಾಶ ವಲಯದ ಬೆಳವಣಿಗೆ**

ಕಳೆದ ಐದು ವರ್ಷಗಳಲ್ಲಿ ಭಾರತದ ಬಾಹ್ಯಾಕಾಶ ವಲಯದಲ್ಲಿ ಸುಮಾರು 600 ಮಿಲಿಯನ್ ಡಾಲರ್‌ಗೂ ಹೆಚ್ಚು ಖಾಸಗಿ ಹೂಡಿಕೆಯಾಗಿದೆ. ವೇಗವಾಗಿ ಬೆಳೆಯುತ್ತಿರುವ ಈ ಕ್ಷೇತ್ರಕ್ಕೆ ಅಗತ್ಯವಿರುವ ನುರಿತ ಮಾನವ ಸಂಪನ್ಮೂಲವನ್ನು ಸಿದ್ಧಪಡಿಸಲು ಈ ಪ್ರಯೋಗಾಲಯಗಳು ನೆರವಾಗಲಿವೆ ಎನ್ನುವುದು ಕೇಂದ್ರದ ಆಶಯವಾಗಿದೆ.

IN-SPACe ಅಧ್ಯಕ್ಷ ಪವನ್ ಗೋಯೆಂಕಾ ಅವರ ಪ್ರಕಾರ, ಈಗಾಗಲೇ 17 ವಿಶೇಷ ಕಾರ್ಯಕ್ರಮಗಳ ಮೂಲಕ ಸುಮಾರು 900 ಅಭ್ಯರ್ಥಿಗಳಿಗೆ ಸ್ಯಾಟಲೈಟ್ ತಯಾರಿಕೆ ಮತ್ತು ಸೈಬರ್ ಭದ್ರತೆಯಂತಹ ವಿಷಯಗಳಲ್ಲಿ ತರಬೇತಿ ನೀಡಲಾಗಿದೆ.

ಈಗ ಸ್ಥಾಪನೆಯಾಗಲಿರುವ ವಿಶ್ವವಿದ್ಯಾಲಯ ಮಟ್ಟದ ಪ್ರಯೋಗಾಲಯಗಳು ಈ ತರಬೇತಿ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲಿವೆ.

ಪ್ರಸ್ತುತ, ಈ ಪ್ರಯೋಗಾಲಯಗಳು ಯಾವ ಸಂಸ್ಥೆಗಳಲ್ಲಿ ಬರಲಿವೆ ಮತ್ತು ಯಾವಾಗ ಆರಂಭವಾಗಲಿವೆ ಎಂಬ ನಿಖರ ಮಾಹಿತಿಯನ್ನು ಶೀಘ್ರದಲ್ಲೇ ಪ್ರಕಟಿಸುವ ನಿರೀಕ್ಷೆಯಿದೆ.

ಸ್ಯಾಟಲೈಟ್ ಸಿಸ್ಟಮ್‌ಗಳು, ರಾಕೆಟ್ ವಿಜ್ಞಾನ ಮತ್ತು ಮಿಷನ್ ಡಿಸೈನ್‌ಗಳ ಬಗ್ಗೆ ವಿದ್ಯಾರ್ಥಿಗಳಿಗೆ ನೇರ ಅನುಭವ ಮತ್ತು ತರಬೇತಿ ನೀಡುವುದು ಯೋಜನೆಯ ಉದ್ದೇಶವಾಗಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಪ್ರಚಾರ ಮತ್ತು ಅಧಿಕಾರ ಕೇಂದ್ರ (IN-SPACe) ಕೇಂದ್ರ ಸರ್ಕಾರದ ಎದುರು ಈ ಪ್ರಸ್ತಾವನೆ ಮಂಡಿಸಿತ್ತು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಕೂಡ ಇತ್ತೀಚೆಗೆ ಈ ಯೋಜನೆಯ ಪ್ರಗತಿಯನ್ನು ಪರಿಶೀಲಿಸಿದ್ದರು.



ಪಶ್ಚಿಮ ಬಂಗಾಳ ಚುನಾವಣೆ ಹಿನ್ನೆಲೆಯಲ್ಲಿ ಭಾನುವಾರ ತೆಹಟ್ಟಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗಿಯಾಗಿದ್ದರು.

# ಟೇಕಾಫ್ ವೇಳೆ ಎಂಜಿನ್ ವೈಫಲ್ಯ, ಸ್ವಿಸ್ ವಿಮಾನದಲ್ಲಿ ಬೆಂಕಿ: 6 ಮಂದಿಗೆ ಗಾಯ

**ನವದೆಹಲಿ, ಏ.26:** ಟೇಕಾಫ್ ವೇಳೆ ಎಂಜಿನ್ ವೈಫಲ್ಯದಿಂದ ಸ್ವಿಸ್ ವಿಮಾನದಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ 6 ಮಂದಿ ಗಾಯಗೊಂಡಿರುವ ಘಟನೆ ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆದಿದೆ.

ದೆಹಲಿಯಿಂದ ಜ್ಯೂರಿಚ್‌ಗೆ ತೆರಳಬೇಕಿದ್ದ ಸ್ವಿಸ್ ವಿಮಾನಯಾನ ಸಂಸ್ಥೆಯ ಏರ್‌ಬಸ್ ವಿಮಾನ ಭಾನುವಾರ ಬೆಳಗ್ಗೆ ಟೇಕಾಫ್ ಆಗಲು ರನ್‌ವೇ ಮೇಲೆ ಚಲಿಸುತ್ತಿತ್ತು. ಈ ವೇಳೆ ವಿಮಾನದ ಒಂದು ಎಂಜಿನ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಬೆಂಕಿ ಹೊತ್ತಿಕೊಂಡಿದೆ. ಕೂಡಲೇ ಪೈಲಟ್ ವಿಮಾನವನ್ನು ನಿಲ್ಲಿಸಿ ತುರ್ತುದ್ವಾರ ತೆರೆದು ಸ್ಲೈಡ್‌ಗಳ ಮೂಲಕ ಪ್ರಯಾಣಿಕರನ್ನು ರನ್‌ವೇಯಲ್ಲಿ ಇಳಿಸಲಾಯಿತು. ವಿಮಾನದಿಂದ ಇಳಿಯುವಾಗ 6 ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿದೆ.

ತಕ್ಷಣವೇ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನದಲ್ಲಿದ್ದ 228 ಪ್ರಯಾಣಿಕರು ಹಾಗೂ ಸಿಬ್ಬಂದಿಗೆ ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಘಟನೆಗೆ ನಿಖರ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ.



ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಲಖನೌ ಪೊಲೀಸ್ ಪರೇಡ್ ಮೈದಾನದ ರಿಸರ್ವ್ ಪೊಲೀಸ್ ಲೈನ್ಸ್‌ನಲ್ಲಿ 2025ರ ಬ್ಯಾಚ್‌ನ 60,244 ಹೊಸದಾಗಿ ನೇಮಕಗೊಂಡ ನಾಗರಿಕ ಪೊಲೀಸ್ ಕಾನ್‌ಸ್ಟೆಬಲ್‌ಗಳ ಪಾಸಿಂಗ್ ಔಟ್ ಪರೇಡ್ ಸಮಾರಂಭದಲ್ಲಿ ಭಾಗವಹಿಸಿದ್ದರು.

# 2ನೇ ಹಂತದ ಮತದಾನಕ್ಕೂ ಮುನ್ನ ಟಿಎಂಸಿ ಕಾರ್ಯಕರ್ತನ ಮನೆಯಲ್ಲಿ ಕಚ್ಚಾಬಾಂಬ್ ಪತ್ತೆ

- ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗರ್‌ನಲ್ಲಿ ಪೊಲೀಸರ ಕಾರ್ಯಾಚರಣೆ

**ಕೋಲ್ಕತ್ತಾ, ಏ.26:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಎರಡನೇ ಹಂತದ ಮತದಾನಕ್ಕೆ ಕೆಲವು ದಿನಗಳು ಬಾಕಿ ಇರುವಂತೆ ರಾಜ್ಯದ ದಕ್ಷಿಣ 24 ಪರಗಣ ಜಿಲ್ಲೆಯ ಭಾಂಗರ್‌ನಲ್ಲಿ ಟಿಎಂಸಿ ಕಾರ್ಯಕರ್ತ ಎನ್ನಲಾದ ರಫಿಕುಲ್ ಇಸ್ಲಾಂ ಎಂಬಾತನ ಮನೆಯಲ್ಲಿ 100 ಕಚ್ಚಾಬಾಂಬ್‌ಗಳು ಪತ್ತೆಯಾಗಿವೆ. ಈ ಬಾಂಬ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಖಚಿತ ಮಾಹಿತಿ ಆಧಾರದ ಮೇಲೆ ರಫಿಕುಲ್ ಇಸ್ಲಾಂ ನಿವಾಸದ ಮೇಲೆ ಪೊಲೀಸರು ದಾಳಿ ನಡೆಸಿದ ಸಂದರ್ಭದಲ್ಲಿ ಈ ಸ್ಫೋಟಕಗಳು ಪತ್ತೆಯಾಗಿವೆ.

ಅಂತಹ ಯಾವುದೇ ಸ್ಫೋಟಕ ಕಂಡುಬಂದರೆ ಅಥವಾ ನಿಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಯಾರಾದರೂ ಬೆದರಿಕೆ ತಂತ್ರಗಳನ್ನು ಬಳಸಿದರೆ, ಸಂಬಂಧಪಟ್ಟ ಅಧಿಕಾರಿ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಕೋಲ್ಕತ್ತಾ ಪೊಲೀಸ್ ಆಯುಕ್ತರು, ಎಲ್ಲಾ ಡಿಸಿಪಿ, ಎಸ್ಪಿಗಳು ಮತ್ತು ಓಸಿ ಹಾಗೂ ಐಸಿ ದರ್ಜೆಯ ಅಧಿಕಾರಿಗಳಿಗೆ ಕಠಿಣ ಸಂದೇಶ ನೀಡಲಾಗಿದೆ ಎಂದು ಚುನಾವಣಾ ಆಯೋಗದ ಅಧಿಕಾರಿ ಹೇಳಿದ್ದಾರೆ.


ಮತದಾರರು ತಮ್ಮ ಮತದಾನವನ್ನು ಯಾವುದೇ ಭಯವಿಲ್ಲದೆ ಚಲಾಯಿಸುವಂತೆ ಖಚಿತಪಡಿಸಿಕೊಳ್ಳಲು ಸೂಕ್ಷ್ಮ ಪ್ರದೇಶಗಳಲ್ಲಿ ಕಣ್ಗಾವಲು ಮತ್ತು ಪ್ರದೇಶ ಪ್ರಾಬಲ್ಯವನ್ನು ತೀವ್ರಗೊಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

294 ಸದಸ್ಯ ಬಲದ ಪಶ್ಚಿಮ ಬಂಗಾಳ ವಿಧಾನಸಭೆಗೆ ಮೊದಲ ಹಂತದ ಚುನಾವಣೆ ಏಪ್ರಿಲ್ 23 ರಂದು ನಡೆದಿದ್ದು, ಎರಡನೇ ಹಂತ ಏಪ್ರಿಲ್ 29 ರಂದು ನಡೆಯಲಿದೆ. ಮೇ 4 ರಂದು ಫಲಿತಾಂಶ ಪ್ರಕಟವಾಗಲಿದೆ.

# ಭಾರತದ ಆತ್ಮವನ್ನು ಸೆರೆಹಿಡಿದ ಕಲೆಗಾರ ರಘು ರಾಯ್ ನಿಧನ

**ನವದೆಹಲಿ, ಏ.26:** ಖ್ಯಾತ ಛಾಯಾಗ್ರಾಹಕ ಮತ್ತು ಭಾರತದ ಶ್ರೇಷ್ಠ ದೃಶ್ಯ ಕಥೆಗಾರರಲ್ಲಿ ಒಬ್ಬರಾದ ರಘು ರಾಯ್ (83) ಅವರು ಭಾನುವಾರ ನಿಧನರಾಗಿದ್ದಾರೆ. ಇವರ ನಿಧನದೊಂದಿಗೆ ಫೋಟೋ ಜರ್ನಲಿಸಂನ ಒಂದು ಸುವರ್ಣ ಯುಗ ಅಂತ್ಯಗೊಂಡಂತಾಗಿದೆ.

1942ರಲ್ಲಿ ಜಂಗ್ (ಈಗಿನ ಪಾಕಿಸ್ತಾನ) ನಲ್ಲಿ ಜನಿಸಿದ ರಘು ರಾಯ್ ಅವರಿಗೆ ದೇಶ ವಿಭಜನೆಯ ನೋವು ಅವರ ಜೀವನ ಮತ್ತು ಕಲೆಯ ಮೇಲೆ ಆಳವಾದ ಪ್ರಭಾವ ಬೀರಿತ್ತು. 'ದಿ ಸ್ಟೇಟ್ಸ್‌ಮನ್ ಪತ್ರಿಕೆಯಲ್ಲಿ ವೃತ್ತಿ ಆರಂಭಿಸಿದ ರಘು ರಾಯ್ ಅವರನ್ನು ವಿಶ್ವಪ್ರಸಿದ್ಧ 'ಮ್ಯಾಗ್ನಮ್ ಫೋಟೋಸ್'ಗೆ ಹೆನ್ರಿ ಕಾರ್ಟಿಯರ್–ಬ್ರೆಸ್ಸನ್ ಅವರು ಸೇರಿಸಿಕೊಂಡರು. ಭೋಪಾಲ್ ಅನಿಲ ದುರಂತದ ಭೀಕರ ಚಿತ್ರಗಳು, ಇಂದಿರಾ ಗಾಂಧಿ, ಮದರ್ ತೆರೇಸಾ ಮತ್ತು ದಲೈಲಾಮಾ ಅವರ ಆಪ್ತ ಭಾವಚಿತ್ರಗಳು ಇಂದಿಗೂ



ದಾಖಲೆಗಳಾಗಿ ಉಳಿದಿವೆ. 1971ರ ಬಾಂಗ್ಲಾದೇಶ ವಿಮೋಚನಾ ಯುದ್ಧದ ವರದಿಗಾಗಿ 1972ರಲ್ಲಿ ಇವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು.

### ಗಣ್ಯರ ಸಂತಾಪ:

*ರಘು ಭಾಯ್ ಕೇವಲ ಭಾರತಕ್ಕೆ ಸೇರಿದವರಲ್ಲ, ಇಡೀ ವಿಶ್ವಕ್ಕೆ ಸೇರಿದವರು. 1971ರ ಯುದ್ಧದ ಸಮಯದಲ್ಲಿ ಗುಂಡಿನ ದಾಳಿಯ ನಡುವೆಯೂ ಅವರು ಫೋಟೋ ತೆಗೆಯುತ್ತಿದ್ದ ಸಾಹಸವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ ಎಂದು ಬಾಂಗ್ಲಾದೇಶದ ಹೈಕಮಿಷನರ್ ರಿಯಾಜ್ ಹಮೀದುಲ್ಲಾ ಸ್ಮರಿಸಿದ್ದಾರೆ.

*ಫೋಟೋಗ್ರಫಿ ಕ್ಷೇತ್ರವು ತನ್ನ ಅತ್ಯಂತ ಸ್ಫೂರ್ತಿದಾಯಕ ಗುರು ಮತ್ತು ಸಾಧಕನನ್ನು ಕಳೆದುಕೊಂಡಿದೆ. ಅವರು ಭಾರತದ ಆತ್ಮವನ್ನು ತಮ್ಮ ಲೆನ್ಸ್ ಮೂಲಕ ಸೆರೆಹಿಡಿದಿದ್ದರು ಎಂದು ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಕಂಬನಿ ಮಿಡಿದಿದ್ದಾರೆ.

* ವಿಶ್ವದ ಅತ್ಯುತ್ತಮ ದೃಶ್ಯ ಕಥೆಗಾರರಲ್ಲೊಬ್ಬರ ಲೆನ್ಸ್ ಇಂದು ಶಾಶ್ವತವಾಗಿ ಮುಚ್ಚಿದೆ. ಅವರು ಭಾರತದ ಚಿತ್ರವನ್ನು ತೆಗೆಯುತ್ತಿರಲಿಲ್ಲ, ಬದಲಾಗಿ ಅದರಲ್ಲೇ ಬದುಕುತ್ತಿದ್ದರು ಎಂದು ಶಶಿ ತರೂರ್ ಗುಣಗಾನ ಮಾಡಿದ್ದಾರೆ.

*ರಘು ರಾಯ್ ಅವರು 'ರಘು ರೈಸ್ ಇಂಡಿಯಾ', 'ದಿ ಸಿಖ್ಸ್' ಮತ್ತು 'ಡೆಲ್ಲಿ' ಸೇರಿದಂತೆ ಹಲವಾರು ಪ್ರಸಿದ್ಧ ಪುಸ್ತಕಗಳನ್ನು ರಚಿಸಿದ್ದಾರೆ. ಅವರ ನಿಧನಕ್ಕೆ ದೇಶ ವಿದೇಶಗಳಿಂದ ಗಣ್ಯರು ಸಂತಾಪ ಸೂಚಿಸುತ್ತಿದ್ದಾರೆ.

### ಆತ್ಮವನ್ನು ಚಿತ್ರಿಸಿದ ರಘು ರೈಗೆ ರಾಹುಲ್ ಶ್ರದ್ಧಾಂಜಲಿ

ಖ್ಯಾತ ಛಾಯಾಗ್ರಾಹಕ ರಘು ರಾಯ್ ನಿಧನಕ್ಕೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ತೀವ್ರ ಸಂತಾಪ ಸೂಚಿಸಿದ್ದಾರೆ. ರಘು ರಾಯ್ ಅವರನ್ನು "ಭಾರತದ ಆತ್ಮವನ್ನು ದಶಕಗಳ ಕಾಲ ಚಿತ್ರಿಸಿದ ಮಹಾನ್ ಕಲೆಗಾರ" ಎಂದು ಬಣ್ಣಿಸಿದ್ದಾರೆ. ಕಳೆದ ಆರು ದಶಕಗಳಿಂದ ಭಾರತದ ಜನರು, ಅವರ ಹೋರಾಟಗಳು, ಸಂಭ್ರಮಗಳು ಮತ್ತು ಐತಿಹಾಸಿಕ ಕ್ಷಣಗಳನ್ನು ದಾಖಲಿಸಿದೆ ಎಂದು ತಮ್ಮ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

# ವಿಜ್ಞಾನ ಅನುಭವ ಪಡೆದುಕೊಳ್ಳಬೇಕಾದ ಜೀವನ ವಿಧಾನ: ಇಸ್ರೋ ಮಾಜಿ ಅಧ್ಯಕ್ಷ ರಾಧಾಕೃಷ್ಣನ್

**ಬೆಂಗಳೂರು, ಏ.26:** ವಿಜ್ಞಾನವು ಸ್ಮರಣೆಯಲ್ಲಿ ರಿಸಿಕೊಳ್ಳಬೇಕಾದ ವಿಷಯವಲ್ಲ; ಇದು ಅನುಭವ ಪಡೆದುಕೊಳ್ಳಬೇಕಾದ ಜೀವನ ವಿಧಾನ ಎಂದು ಇಸ್ರೋ ಮಾಜಿ ಅಧ್ಯಕ್ಷ ಕೆ. ರಾಧಾಕೃಷ್ಣನ್ ಹೇಳಿದ್ದಾರೆ.


ಪರಮ್ ಫೌಂಡೇಷನ್ ನಗರದಲ್ಲಿ 30,000 ಚದರ ಅಡಿ ವಿಸ್ತೀರ್ಣದ ಅನುಭವ ಪೂರ್ವಕ ವಿಜ್ಞಾನ ಮತ್ತು ಆವಿಷ್ಕಾರ ಕೇಂದ್ರ ಪಾರ್ಸೆಕ್ ವೈಟ್‌ಫೀಲ್ಡ್ ಉದ್ಘಾಟಿಸಿ ಮಾತನಾಡಿದ ಅವರು, ಪಾರ್ಸೆಕ್ ವೈಟ್‌ಫೀಲ್ಡ್ ಉನ್ನತ ಮಟ್ಟದ ಸಂಶೋಧನಾ ಪ್ರಯೋಗಾಲಯಗಳಿಗೆ ಮೀಸಲಾದ ಪರಿಸರವನ್ನು ಒದಗಿಸುತ್ತದೆ. ಈ ಪರಿಕಲ್ಪನೆಗಳನ್ನು ಬೆಂಗಳೂರಿನ



ಪ್ರತಿ ಮಗುವಿಗೂ ಲಭ್ಯವಾಗುವಂತೆ ಮಾಡುವ ಮೂಲಕ ನಾವು ಭಾರತದ ಮುಂದಿನ ತಲೆಮಾರಿನ ಬಾಹ್ಯಾಕಾಶ ಪರಿಶೋಧಕರು ಮತ್ತು ಡೀಪ್‌ಟೆಕ್ ಅನ್ವೇಷಕರನ್ನು ಬೆಳೆಸಲು ಬೀಜ ಬಿತ್ತುತ್ತಿದ್ದೇವೆ ಎಂದರು.

ಇನ್ಫೋಸಿಸ್ ಸಹಸಂಸ್ಥಾಪಕ ಕ್ರಿಸ್ ಗೋಪಾಲಕೃಷ್ಣನ್ ಮಾತನಾಡಿ, ಬೆಂಗಳೂರಿನ ಬಹುದೊಡ್ಡ ಸಂಪತ್ತೆಂದರೆ ಅದರ ಪ್ರತಿಭೆ. ಆದರೆ ಆ ಪ್ರತಿಭೆಗೆ ನೈಜವಿಶ್ವದಲ್ಲಿ ಯಶಸ್ವಿಯಾಗುವ ಮುನ್ನ ಪ್ರಯೋಗ ನಡೆಸಲು ಮತ್ತು ವಿಫಲವಾಗಲು 'ಆಟದ ಮೈದಾನ' ಅಗತ್ಯವಿದೆ. ಈ 30,000 ಚದರ ಅಡಿ ಸೌಲಭ್ಯವು ಬರೀ ವಿಜ್ಞಾನ ಕೇಂದ್ರಕ್ಕಿಂತ ಹೆಚ್ಚಿನದಾಗಿದೆ. ನಮ್ಮ ಆವಿಷ್ಕಾರದ ಅರ್ಥವ್ಯವಸ್ಥೆಗೆ ಇದು ಪ್ರಮುಖ ಮೂಲಸೌಕರ್ಯವಾಗಿದೆ. ನಾವು ವಿಜ್ಞಾನ ತಿಳಿಯುವುದರಿಂದ ವಿಜ್ಞಾನ ಮಾಡುವುದರತ್ತ ಚಲಿಸುತ್ತಿದ್ದೇವೆ ಮತ್ತು ಅಲ್ಲಿಯೇ ನಮ್ಮ ತಂತ್ರಜ್ಞಾನ ಉದ್ಯಮದ ಭವಿಷ್ಯ ಅಡಗಿದೆ ಎಂದು ಹೇಳಿದರು.

ಬೆಂಗಳೂರಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನ ಕೇಂದ್ರಗಳಲ್ಲಿ ಒಂದರಲ್ಲಿರುವ ಪಾರ್ಸೆಕ್ ವೈಟ್‌ಫೀಲ್ಡ್ ಅರ್ಥ ಪೂರ್ಣ ಕಲಿಕೆಯ ಅವಕಾಶಗಳನ್ನು ನಿರೀಕ್ಷಿಸುವ ಯಾರಿಗೇ ಆಗಲಿ ಸಂಪನ್ಮೂಲವಾಗಿ ಕೆಲಸ ಮಾಡುತ್ತದೆ. ಕಾರ್ಯಾಗಾರಗಳು, ಶಿಕ್ಷಕ ತರಬೇತಿ ಉಪಕ್ರಮಗಳು ಮತ್ತು ಆವಿಷ್ಕಾರ–ಪ್ರೇರಿತ ಚಟುವಟಿಕೆಗಳ ಮೂಲಕ ಈ ಸೌಲಭ್ಯವು ನಗರದಾದ್ಯಂತ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ವೈಜ್ಞಾನಿಕ ಮನೋಭಾವ ಉತ್ತೇಜಿಸುತ್ತದೆ ಎಂದು ಹೇಳಿದರು.




ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವರ್ಲ್ಡ್ 10ಕೆ ಬೆಂಗಳೂರು 2026 ರಲ್ಲಿ ಸಂಸದ ಯದುವೀರ್ ಒಡೆಯರ್ ಭಾಗವಹಿಸಿದ್ದರು. ಈ 18 ನೇ ಆವೃತ್ತಿಯ ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ರೇಸ್ ವಿವಿಧ ವಿಭಾಗಗಳಲ್ಲಿ ದಾಖಲೆಯ ಓಟಗಳನ್ನು ಒಳಗೊಂಡಿತ್ತು.

# ದೇಶದ ನಗರಗಳ ಮೂಲಸೌಕರ್ಯ ಕುರಿತು ಹೊಸಚರ್ಚೆ ಹುಟ್ಟುಹಾಕಿದ ಉದ್ಯಮಿ ಮೋಹನ್‌ದಾಸ್‌ಪೈ

**ಬೆಂಗಳೂರು, ಏ.26:** ಉದ್ಯಮಿ ಮೋಹನ್‌ದಾಸ್ ಪೈ ಅವರು ಭಾರತದ ನಗರ ಮೂಲಸೌಕರ್ಯಗಳ ಕುರಿತು ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ. ಬೆಂಗಳೂರು ಮತ್ತು ಮುಂಬೈನಂತಹ ಮಹಾನಗರಗಳಲ್ಲಿನ ಅತ್ಯಾಧುನಿಕ ಖಾಸಗಿ ಕಟ್ಟಡಗಳು ಮತ್ತು ಅವ್ಯವಸ್ಥಿತ ಸಾರ್ವಜನಿಕ ರಸ್ತೆಗಳ ನಡುವಿನ ಅಜಗಜಾಂತರ ವ್ಯತ್ಯಾಸವನ್ನು ಕಂಡು ಅವರು ವ್ಯವಸ್ಥೆಯ ವಿರುದ್ಧ ಕಿಡಿಕಾರಿದ್ದಾರೆ.

ತಮ್ಮ ಟ್ವಿಟರ್ ಖಾತೆಯಲ್ಲಿ, ನಗರ ಆಡಳಿತದಲ್ಲಿನ ವೈಫಲ್ಯವನ್ನು ಎತ್ತಿತೋರಿಸಿರುವ ಅವರು, ಭಾರತವು ವಿಶ್ವದರ್ಜೆಯ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸುವ ಸಾಮರ್ಥ್ಯ ಹೊಂದಿದೆ. ಆದರೆ ಆ ಕಟ್ಟಡಗಳ ಸುತ್ತಮುತ್ತಲಿನ ರಸ್ತೆಗಳು ಮಾತ್ರ ಶೋಚನೀಯವಾಗಿವೆ. ಕಳಪೆ ರಸ್ತೆಗಳು, ಶಿಥಿಲಗೊಂಡ ಫುಟ್‌ಪಾತ್‌ಗಳ ವ್ಯವಸ್ಥೆಗೆ ಭ್ರಷ್ಟಾಚಾರವೇ ಪ್ರಮುಖ ಸಾಕ್ಷಿ ಎಂದು ಗುಡುಗಿದ್ದಾರೆ.

ಇದನ್ನು ನಮ್ಮ ನಗರಗಳ ದುರಂತ ಎಂದು ಕರೆದಿರುವ ಅವರು, "ಕಳಪೆ ಗುಣಮಟ್ಟದ ರಸ್ತೆಗಳು ಮತ್ತು ಫುಟ್‌ಪಾತ್‌ಗಳಿಂದ ಜನರು ಆಗೂ ವಾಹನ ಸವಾರರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ ಇಲ್ಲಿ ಎಷ್ಟರ ಮಟ್ಟಿಗೆ ಭ್ರಷ್ಟಾಚಾರ ನಡೆಯುತ್ತಿದ," ಎಂದು ಕಿಡಿಕಾರಿದ್ದಾರೆ.

ಮುಂಬೈನಲ್ಲಿ ಇತ್ತೀಚೆಗೆ ತಮಗಾದ ಅನುಭವವನ್ನು ಹಂಚಿಕೊಂಡಿರುವ ಅವರು, ಅಂಧೇರಿ ಭಾಗದ ಪರಿಸ್ಥಿತಿಯನ್ನು ಕಂಡು ದಿಗ್ಭ್ರಮೆಗೊಂಡಿರುವುದಾಗಿ ತಿಳಿಸಿದ್ದಾರೆ.

ಅಲ್ಲಿನ ಹಾಳಾದ ರಸ್ತೆಗಳು, ರಸ್ತೆಗಳಲ್ಲಿ ಚೆಲ್ಲಾಡಿರುವ ನಿರ್ಮಾಣ ಹಂತದ ಕಟ್ಟಡದ ಅವಶೇಷಗಳು, ಆಮೆಗತಿಯ ಕಾಮಗಾರಿ ಮತ್ತು ಹೊಸದಾಗಿ ನಿರ್ಮಿಸಲಾದ ಕಾಂಕ್ರೀಟ್ ರಸ್ತೆಗಳ ಕಳಪೆ ಗುಣಮಟ್ಟದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಈ ಕಳಪೆ ಗುಣಮಟ್ಟದ ರಸ್ತೆಗಳಿಂದ ದೈನಂದಿನ ಪ್ರಯಾಣಿಕರಿಗೆ ಭಾರಿ ತೊಂದರೆ ಆಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಕುರಿತಾದ ವೈರಲ್ ಪೋಸ್ಟ್ ಒಂದಕ್ಕೆ ಧ್ವನಿಗೂಡಿಸಿರುವ ಮೋಹನ್‌ದಾಸ್ ಪೈ, ಕಸದ ರಾಶಿ,



ಧೂಳು ಮತ್ತು ಗುಂಡಿಬಿದ್ದ ರಸ್ತೆಯಲ್ಲಿ ಹರಸಾಹಸ ಪಡುತ್ತಾ ಸಾಗಬೇಕು. ಅದೇ ಪ್ರಯಾಣಿಕ ಒಮ್ಮೆ 'ಗೇಟೆಡ್ ಟೆಕ್‌ಪಾರ್ಕ್' ಒಳಗೆ ಕಾಲಿಟ್ಟರೆ ಸಾಕು, ಅಲ್ಲಿ ವಿದೇಶಕ್ಕೆ ಬಂದಂತಹ ಅನುಭವವಾಗುತ್ತದೆ. ಆದರೆ, ಗೇಟ್‌ನಿಂದ ಹೊರಬರುತ್ತಿದ್ದಂತೆಯೇ ಸಾರ್ವಜನಿಕ ವ್ಯವಸ್ಥೆಯ ಹದಗೆಟ್ಟ ಮುಖದರ್ಶನವಾಗುತ್ತದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಭಾರತದ ಅತ್ಯಾಧುನಿಕ ವಾಣಿಜ್ಯ ಕೇಂದ್ರಗಳಿಗೆ ಆಸರೆಯಾಗಿರುವ ಈ ನಗರಗಳು, ಅತಿವೇಗವಾಗಿ ಬೆಳೆಯುತ್ತಿದ್ದರೂ ಸಹ ಇನ್ನೂ ಕನಿಷ್ಠ ಮಟ್ಟದ ಮೂಲಸೌಕರ್ಯಗಳಂತಹ ಸಮಸ್ಯೆ ಎದುರಿಸುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ ಎಂದು ಈ ಅಭಿಪ್ರಾಯಗಳು ಎತ್ತಿ ತೋರಿಸಿದಂತಿವೆ.

# ಎಸ್‌ಎಎಸ್ ಐಡಿ ಬಳಸಿ ಆನ್‌ಲೈನ್‌ನಲ್ಲೇ ಇ–ಖಾತಾ ಪಡೆಯಲು ವ್ಯವಸ್ಥೆ

**ಬೆಂಗಳೂರು, ಏ.26:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಪ್ರದೇಶದಲ್ಲಿ ಇ–ಖಾತಾವನ್ನು ಸ್ವಯಂಘೋಷಿತ ಆಸ್ತಿ ತೆರಿಗೆ (ಎಸ್‌ಎಎಸ್) ಐಡಿ ಬಳಸಿ ಆನ್‌ಲೈನ್ ನಲ್ಲಿ ಡೌನ್ಲೋಡ್ ಮಾಡಿಕೊಳ್ಳುವ ವ್ಯವಸ್ಥೆ ಜಾರಿಗೆ ತರಲಾಗಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾರ್ಗದರ್ಶನದಂತೆ ನಗರದ ಐದು ಪಾಲಿಕೆಗಳು ನಾಗರೀಕರ ಸೌಲಭ್ಯಕ್ಕಾಗಿ ಎಸ್‌ಎಎಸ್ ಪ್ರಾಪರ್ಟಿ ತೆರಿಗೆ ಐಡಿ ಬಳಸಿಕೊಂಡು ಇ–ಖಾತಾವನ್ನು ಆನ್‌ಲೈನ್‌ನಲ್ಲೇ ಡೌನ್‌ಲೋಡ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತಂದಿವೆ.

13,00,000 ಇ–ಖಾತಾಗಳನ್ನು ತಕ್ಷಣವೇ ನಾಗರಿಕರಿಗೆ ಲಭ್ಯವಾಗುವಂತೆ ಮಾಡುವುದು, ಅನಗತ್ಯ ವಿಳಂಬ ಮತ್ತು ಆಡಳಿತಾತ್ಮಕ ಅಡೆತಡೆ ನಿವಾರಿಸುವುದು ಇದರ ಮುಖ್ಯ ಉದ್ದೇಶವಾಗಿದೆ ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್



ತಿಳಿಸಿದ್ದಾರೆ. BBMPeAasthi. karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬೇಕು. ಮೊಬೈಲ್ ಸಂಖ್ಯೆ ಮತ್ತು ಒಟಿಪಿ ಬಳಸಿ ಲಾಗಿನ್ ಮಾಡಿ ನಿಮ್ಮ ಎಸ್‌ಐಎಸ್ ಅಪ್ಲಿಕೇಶನ್ ಪ್ರಾಪರ್ಟಿ ತೆರಿಗೆ ಐಡಿಯನ್ನು ನಮೂದಿಸಿದರೆ ಇ–ಖಾತಾ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. ಈ ಕ್ರಮದಿಂದ ಪಾಲಿಕೆಯ ಕಚೇರಿಗಳಿಗೆ ಭೇಟಿ ನೀಡುವುದು, ಆನ್‌ಲೈನ್‌ನಲ್ಲಿ ಹೆಸರು ನಮೂದಿಸಿ ಹುಡುಕಾಡುವುದು ತಪ್ಪಲಿದೆ. ಮಾಲೀಕರು ಇ–ಖಾತಾವನ್ನು ಬೇಗನೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

## ಸಿಲಿಂಡರ್ ಪೂರೈಕೆ ಉತ್ತಮಪಡಿಸಲಿ ಕೇಂದ್ರದಿಂದ ಹಲವು ಕ್ರಮ

# ಶೇ.99 ಎಲ್‌.ಪಿ.ಜಿ ವಿತರಣೆ, ಓಟಿಪಿ ಆಧಾರಿತ ವಿತರಣೆ ಶೇ. 94.5

**ಬೆಂಗಳೂರು,ಏ.26:** ದೇಶಾದ್ಯಂತ ಪೆಟ್ರೋಲಿಯಂ ಉತ್ಪನ್ನಗಳು ಹಾಗೂ ಅಡುಗೆ ಅನಿಲ ಸಿಲಿಂಡರ್ ಪೂರೈಕೆಯನ್ನು ಉತ್ತಮಪಡಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ.




ಗೃಹೋಪಯೋಗಿ ಎಲ್‌ಪಿಜಿ ಸಿಲಿಂಡರ್‌ಗಳ ಬುಕ್ಕಿಂಗ್ ಪ್ರಮಾಣ ಶೇಕಡ 99ರಷ್ಟು ತಲುಪಿದ್ದು, ಶೇಕಡ 94.5ರಷ್ಟು ಓಟಿಪಿ ಆಧಾರಿತ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆ ಯಾಗುತ್ತಿದೆ.

ಗೃಹೋಪಯೋಗಿ ಎಲ್‌ಪಿಜಿ ಸಿಲಿಂಡರ್‌ಗಳ ವಿತರಣೆಗೆ ಆದ್ಯತೆ ನೀಡಲಾಗಿದೆ. ಯಾವುದೇ ವಿತರಣಾ ಕೇಂದ್ರಗಳಲ್ಲಿ, ದಾಸ್ತಾನು ಸಂಪೂರ್ಣ ಖಾಲಿಯಾಗಿರುವ ಮಾಹಿತಿ ಇಲ್ಲ. ಪೆಟ್ರೋಲ್ ಮತ್ತು ಡೀಸೆಲ್ ಗಳ ದಾಸ್ತಾನು ಸಹ ಸಾಕಷ್ಟು ಪ್ರಮಾಣದಲ್ಲಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಸಚಿವಾಲಯ ಸ್ಪಷ್ಟಪಡಿಸಿದೆ.

ಕಳೆದ ತಿಂಗಳಿನಿಂದ 5 ಲಕ್ಷ 36 ಸಾವಿರಕ್ಕೂ ಹೆಚ್ಚು ಪಿಎನ್‌ಜಿ ಸಂಪರ್ಕಗಳನ್ನು ಸಕ್ರಿಯಗೊಳಿಸಲಾಗಿದೆ ಹಾಗೂ ಹೆಚ್ಚುವರಿಯಾಗಿ 2 ಲಕ್ಷ 61 ಸಾವಿರ ಪಿಎನ್‌ಜಿ ಸಂಪರ್ಕಗಳಿಗೆ ಮೂಲ ಸೌಲಭ್ಯಗಳನ್ನು ವ್ಯವಸ್ಥೆ ಮಾಡಲಾಗಿದೆ. ಇದರಿಂದಾಗಿ ದೇಶಾದ್ಯಂತ ಪಿಎನ್‌ಜಿ ಸಂಪರ್ಕಗಳ ಸಂಖ್ಯೆ 7 ಲಕ್ಷ 97 ಸಾವಿರಕ್ಕೆ ತಲುಪಿದೆ.

ಇದೇ ವೇಳೆ ಆರು ಲಕ್ಷ ಮಂದಿ ಹೊಸದಾಗಿ ಪಿಎನ್ ಜಿ ಸಂಪರ್ಕಗಳಿಗೆ ನೋಂದಾಯಿಸಿಕೊಂಡಿದ್ದಾರೆ. ಕೊಲ್ಲಿ ಮತ್ತು ಪಶ್ಚಿಮ ಏಷ್ಯಾಗಳಲ್ಲಿ ಉಂಟಾಗಿರುವ ಸಂಘರ್ಷ ಪರಿಸ್ಥಿತಿಯಿಂದಾಗಿ ಪೆಟ್ರೋಲಿಯಂ ಉತ್ಪನ್ನ ಹಾಗೂ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು.

ಆದರೂ ಸಹ ಸರ್ಕಾರದ ಸಕಾಲಿಕ ಕ್ರಮಗಳಿಂದಾಗಿ ಜನರಿಗೆ ಉಂಟಾಗಿದ್ದ ತೊಂದರೆಯನ್ನು ಕಡಿಮೆ ಮಾಡಲಾಗಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.

# ಸಮರ್ಪಕ ನೀರು ಪೂರೈಕೆಗೆ ಜಲಮಂಡಳಿಯಿಂದ ಸಿದ್ಧತೆ: ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್

**ಬೆಂಗಳೂರು, ಏ.26:** ನಗರದಾದ್ಯಂತ ಪ್ರಸ್ತುತ ಸಮರ್ಪಕವಾಗಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ಎಲ್ಲಾದರೂ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾದರೆ ತಕ್ಷಣವೇ ಸ್ಪಂದಿಸಲು ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ .

ಕಳೆದ ಬೇಸಿಗೆಯಲ್ಲಿ ನೀರಿನ ಕೊರತೆಯಿಂದ ತೊಂದರೆ ಅನುಭವಿಸಿದ್ದ ಕನಕಪುರ ರಸ್ತೆ ಭಾಗದ ಬನಗಿರಿನಗರ, ಭುವನೇಶ್ವರಿ ನಗರ ಸೇರಿದಂತೆ ಹಲವು ಪ್ರದೇಶಗಳಿಗೆ ಇಂದು ಖುದ್ದು ಭೇಟಿ ನೀಡಿದ ಅವರು, ಪ್ರಸ್ತುತ ನೀರಿನ ಸರಬರಾಜು ಪರಿಸ್ಥಿತಿಯ ಕುರಿತು ಸ್ಥಳೀಯ ನಿವಾಸಿಗಳೊಂದಿಗೆ ಮುಕ್ತವಾಗಿ ಚರ್ಚಿಸಿ ಮಾಹಿತಿ ಪಡೆದುಕೊಂಡರು.ಈ ಬಾರಿಯ ಬೇಸಿಗೆಯಲ್ಲಿ ನೀರಿನ ಪೂರೈಕೆ ಸುಧಾರಿಸಿರುವ ಬಗ್ಗೆ ಸ್ಥಳೀಯರು ಅಧ್ಯಕ್ಷರ ಬಳಿ ಸಂತಸ ಹಂಚಿಕೊಂಡರು.



ಬನಗಿರಿ ನಗರದ ನಿವಾಸಿ ಸುಬ್ಬಮ್ಮ ಎಂಬುವವರು ಮಾತನಾಡಿ, "ಕಳೆದ ಬೇಸಿಗೆಯಲ್ಲಿ ನೀರಿಗೆ ಸಾಕಷ್ಟು ತೊಂದರೆಯಾಗಿತ್ತು. ಆದರೆ ಈ ಬಾರಿ ಜಲಮಂಡಳಿಯಿಂದ ಮುಂಜಾಗ್ರತಾ ಕ್ರಮವಾಗಿ ಸಾಕಷ್ಟು ಮೂಲಸೌಕರ್ಯಗಳನ್ನು ಒದಗಿಸಿರುವುದರಿಂದ ನಮಗೆ ಯಾವುದೇ ಸಮಸ್ಯೆಯಾಗಿಲ್ಲ ಎಂದು ಹೇಳಿದರು.

ಮತ್ತೋರ್ವ ನಿವಾಸಿ ಮಲ್ಲಪ್ಪ ಅವರು ಪ್ರತಿಕ್ರಿಯಿಸಿ, "ಮಿನಿ ಟ್ಯಾಂಕ್‌ಗಳ ಅಳವಡಿಕೆ ಹಾಗೂ ಕಾವೇರಿ ನೀರಿನ ಸಂಪರ್ಕ ಕಲ್ಪಿಸಿರುವುದರಿಂದ ನಮಗೆ ಬಹಳ ಅನುಕೂಲವಾಗಿದೆ. ಜಲಮಂಡಳಿ ಅಧಿಕಾರಿಗಳು ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ. ಆದರೆ, ನಮ್ಮ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಇನ್ನೂ ಕಲ್ಪಿಸಿಲ್ಲ, ಈ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಅಧ್ಯಕ್ಷರಿಗೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಡಾ. ರಾಮ್ ಪ್ರಸಾತ್ ಮನೋಹರ್, ಉಪಮುಖ್ಯಮಂತ್ರಿ ಗಳಾದ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನದಂತೆ, ಜಲಮಂಡಳಿ ವ್ಯಾಪ್ತಿಯಲ್ಲಿ ನೀರು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನಗರದಾದ್ಯಂತ ನೀರಿನ ಸರಬರಾಜು ಪರಿಸ್ಥಿತಿಯ ಕುರಿತು ನಾನು ಪ್ರತಿದಿನ ಅಧಿಕಾರಿಗಳಿಂದ ವರದಿ ಪಡೆಯುತ್ತಿದ್ದು, ಲೋಪಗಳಿದ್ದಲ್ಲಿ ತಕ್ಷಣವೇ ಸರಿಪಡಿಸಲು ಸೂಚನೆ ನೀಡುತ್ತಿದ್ದೇನೆ. ಸಂಚಾರಿ ಕಾವೇರಿ ಟ್ಯಾಂಕರ್‌ಗಳು ಹಾಗೂ ಮಿನಿ ಟ್ಯಾಂಕ್‌ಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದೇವೆ ಎಂದರು.

# ಆದಿಚುಂಚನಗಿರಿ ಶ್ರೀಗಳ ವಿರುದ್ಧ ಅವಹೇಳನಕಾರಿ ಪೋಸ್ಟ್: ಓರ್ವನ ವಿರುದ್ಧ ಎಫ್‌ಐಆರ್

**ಬೆಂಗಳೂರು, ಏ.26:** ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧ ಅವಹೇಳನಕಾರಿ ಪದ ಬಳಕೆ ಹಾಗೂ ಪೋಸ್ಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಚೇತನ್‌ಗೌಡ ಎಂಬಾತನ ವಿರುದ್ಧ ಬೆಂಗಳೂರಿನ ವಿಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್‌ನಲ್ಲಿ ರಾಜೇಶ್ ಎಂಬಾತನ ಹೆಸರನ್ನೂ ಉಲ್ಲೇಖಿಸಲಾಗಿದೆ. ನಿರ್ಮಲಾನಂದನಾಥ ಸ್ವಾಮೀಜಿ ವಿರುದ್ಧ ಅಶ್ಲೀಲ ಪದ ಬಳಕೆ ಮಾಡಿ ತೇಜೋವಧೆ ಮಾಡಲಾಗಿದೆ ಎಂದು ದೂರು ನೀಡಲಾಗಿತ್ತು.

ವಿದೇಶ ಪ್ರವಾಸದ ಫೋಟೋ ಬಳಕೆ ಮಾಡಿ ಅವಹೇಳನಕಾರಿ



ಪದ ಬಳಕೆ ಮಾಡಿ ಚೇತನ್ ಗೌಡ ಎಂಬಾತ ಪೋಸ್ಟ್ ಮಾಡಿದ್ದ. ಇದಕ್ಕೆ ರಾಜೇಶ್ ಎಂಬಾತ ಶ್ರೀಗಳ ವಿರುದ್ಧ ಕೆಟ್ಟ ಕಮೆಂಟ್ ಮಾಡಿದ್ದನು. ಈ ಹಿನ್ನೆಲೆಯಲ್ಲಿ ಪ್ರಕರಣ ದಾಖಲಾಗಿದೆ. ಒಕ್ಕಲಿಗರ ಸ್ವಾಮೀಜಿ ಬಗ್ಗೆ ಹಗುರ ಹೇಳಿಕೆ ನೀಡಲಾಗಿದೆ. ಇದು ನಿಜಕ್ಕೂ ವಿಷಾದನೀಯ. ತಪ್ಪಿತಸ್ಥರ ಮೇಲೆ ಕ್ರಮ ಆಗಬೇಕು ಎಂಬ ಒತ್ತಾಯ ಕೂಡ ಸಮುದಾಯದ ವತಿಯಿಂದ ಕೇಳಿಬಂದಿತ್ತು.

# ಶಾಲೆಗಳಲ್ಲಿ ದಿನಪತ್ರಿಕೆ ಓದುವುದು ಕಡ್ಡಾಯ: ಸರ್ಕಾರಿ ಆದೇಶ ಜಾರಿ

**ಬೆಂಗಳೂರು, ಏ.26:** ರಾಜ್ಯದ ಎಲ್ಲ ಖಾಸಗಿ ಅನುದಾನಿತ ಹಾಗೂ ಸರ್ಕಾರಿ ಶಾಲೆಗಳಲ್ಲಿ ದಿನಪತ್ರಿಕೆಗಳನ್ನು ಓದುವುದನ್ನು ಕಡ್ಡಾಯಗೊಳಿಸಿ, ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಲಾಗಿದೆ.




ಪ್ರತಿದಿನ ಶಾಲೆಯ ಬೆಳಗಿನ ಪ್ರಾರ್ಥನೆ ಸಮಯದಲ್ಲಿ 10 ನಿಮಿಷ ಮಕ್ಕಳಿಂದ ವಾರ್ತಾ ಪತ್ರಿಕೆಗಳನ್ನು ಓದಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆ ಆದೇಶದಲ್ಲಿ ತಿಳಿಸಿದೆ.

ಡಿಜಿಟಲ್ ಯುಗದಲ್ಲಿ ಮಕ್ಕಳು ಸಾಮಾಜಿಕ ಜಾಲತಾಣಗಳಿಗೆ ಹೆಚ್ಚಿನ ಸಮಯ ನೀಡುತ್ತಿದ್ದು, ಅತಿಯಾದ ಮೊಬೈಲ್ ಬಳಕೆಯಿಂದ ಜ್ಞಾಪಕಶಕ್ತಿಯ ಕೊರತೆ, ಶ್ರವಣದೋಷ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ಆಸಕ್ತಿ ಕುಂಠಿತಗೊಳ್ಳುವ ಸಮಸ್ಯೆಗಳು ಉಂಟಾಗುತ್ತಿವೆ.

ಇದಕ್ಕೆ ಪರಿಹಾರವಾಗಿ, ಶಾಲೆಗಳಲ್ಲಿ ಮೊಬೈಲ್ ಬಳಕೆಯನ್ನು ನಿಷೇಧಿಸಿ, ಮಕ್ಕಳಲ್ಲಿ ಪುಸ್ತಕ ಹಾಗೂ ವಾರ್ತಾ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸುವಂತೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸರ್ಕಾರಕ್ಕೆ ಪತ್ರ ಬರೆದಿತ್ತು.

ಈ ಅಂಶಗಳನ್ನು ನಿಯಮಾನುಸಾರ ಪರಿಶೀಲನೆ ನಡೆಸಿರುವ ಶಾಲಾ ಶಿಕ್ಷಣ ಇಲಾಖೆ ಆಯುಕ್ತರು, ಇದೀಗ ಮಕ್ಕಳಿಂದ ವೃತ್ತ ಪತ್ರಿಕೆಗಳನ್ನು ಓದಿಸುವ ಬಗ್ಗೆ ಆದೇಶ ಹೊರಡಿಸಿದ್ದಾರೆ.

# ಏ.29ರಿಂದ ಬೆಂಗಳೂರು ಸೇರಿ ರಾಜ್ಯದಾದ್ಯಂತ ಮಳೆ

**ಬೆಂಗಳೂರು, ಏ.26:** ಕರಾವಳಿ, ದಕ್ಷಿಣ ಒಳನಾಡು ಹಾಗೂ ಉತ್ತರ ಒಳನಾಡಿನಲ್ಲಿ ಕೆಲವು ಕಡೆ ಭಾನುವಾರ ಗುಡುಗು ಮಿಂಚು ಸಹಿತವಾಗಿ ಮಳೆಯಾಗಿದೆ. ಏಪ್ರಿಲ್ 29ರಿಂದ ಬೆಂಗಳೂರು ಸೇರಿದಂತೆ ರಾಜ್ಯದಾದ್ಯಂತ ಮಳೆಯ ಪ್ರಮಾಣ ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು: ಸಂಜೆ ವೇಳೆಗೆ ಬಾಗಲಕೋಟೆ, ವಿಜಯಪುರ ಹಾಗೂ ಕೊಡಗಿಲ್ಲಿ ಗುಡುಗು ಮಿಂಚು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ ಸಿ.ಎಸ್.ಪಾಟೀಲ್ ವಿಜಯ ಕರ್ನಾಟಕದ ಜೊತೆ ಮಾತನಾಡಿದ್ದು, ಮುಂದಿನ ಒಂದು ವಾರ ಕರ್ನಾಟಕದ ಕರಾವಳಿ, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಅಲ್ಲಲ್ಲಿ ಹಗುರದಿಂದ ಕೂಡಿದ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ. ಸುಮಾರು 0.9 ಕಿಲೋಮೀಟರ್ ಎತ್ತರದಲ್ಲಿ ಟ್ರಫ್ ನಿರ್ಮಾಣವಾಗಿರುವುದರಿಂದ ಮಳೆಗೆ ಪೂರಕವಾದ ವಾತಾವರಣ ಸೃಷ್ಟಿಯಾಗಿದೆ.



ಏಪ್ರಿಲ್ 26 ರಿಂದ ಮೇ 2 ರವರೆಗೆ ಕರಾವಳಿ ಜಿಲ್ಲೆಗಳಲ್ಲಿ ಮಳೆಯ ಪ್ರಭಾವ ಹೆಚ್ಚಿರಲಿದೆ.ಏಪ್ರಿಲ್ 28, 29 ಮತ್ತು 30 ರಂದು ಉತ್ತರ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯ ಪ್ರಮಾಣ ಮತ್ತಷ್ಟು ಏರಿಕೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮಳೆಯ ಜೊತೆಗೆ ಪ್ರತಿ ಗಂಟೆಗೆ 30 ರಿಂದ 40 ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸುವ ಸಂಭವವಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ. ಕಳೆದ 24 ಗಂಟೆಯಲ್ಲಿ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿ 1 ಸೆ.ಮೀ ಮತ್ತು ಶಿವಮೊಗ್ಗ ಜಿಲ್ಲೆಯ ಜಾಗರದಲ್ಲಿ 4 ಸೆ.ಮೀ ನಷ್ಟು ಮಳೆ ದಾಖಲಾಗಿದೆ ಎಂದರು.

ರಾಜ್ಯದಲ್ಲಿ ತಾಪಮಾನ ಏರಿಕೆಯೂ ಮುಂದುವರಿದಿದ್ದು, ಕೊಪ್ಪಳದಲ್ಲಿ ಗರಿಷ್ಠ 41 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ. ಇನ್ನು ಬೆಂಗಳೂರಿನಲ್ಲಿ 36 ಡಿಗ್ರಿ ಮತ್ತು ಮಂಗಳೂರಿನಲ್ಲಿ 35 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡುಬಂದಿದೆ.

ರಾಜಧಾನಿ ಬೆಂಗಳೂರಿನ ಮಾಹಿತಿ ನೀಡಿರುವ ಸಿ. ಎಸ್. ಪಾಟೀಲ್ ಅವರು, ಏಪ್ರಿಲ್ 29 ರಿಂದ ಮೇ 2 ರವರೆಗೆ ನಗರದ ವಿವಿಧೆಡೆ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಮುಂದಿನ ಒಂದು ವಾರದವರೆಗೆ ಗರಿಷ್ಠ ತಾಪಮಾನ 36 ಡಿಗ್ರಿ ಮುಂದುವರಿಯಲಿದೆ.

# ಯಾವುದೇ ಮಾನವಸೋಂಕು ಪತ್ತೆಯಾಗಿಲ್ಲ: ಆರೋಗ್ಯ ಇಲಾಖೆ ಮಾಹಿತಿ

**ಬೆಂಗಳೂರು, ಏ.26:** ಹೆಸರಘಟ್ಟದ ಕೋಳಿ ಸಾಕಣೆ ತರಬೇತಿ ಕೇಂದ್ರದಲ್ಲಿ ಕಾಣಿಸಿಕೊಂಡ ಎಚ್‌5ಎನ್‌1 (ಹಕ್ಕಿ ಜ್ವರ) ಸೋಂಕಿನ ಹಿನ್ನೆಲೆಯಲ್ಲಿ ಕೈಗೊಳ್ಳಲಾದ ತೀವ್ರ ನಿಗಾವಳಿ ಮತ್ತು ನಿಯಂತ್ರಣ ಕಾರ್ಯಾಚರಣೆ ಇದೀಗ ಯಶಸ್ವಿಯಾಗಿ ಪೂರ್ಣಗೊಂಡಿದೆ. ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಈ ಕುರಿತು ಮಾಹಿತಿ ನೀಡಿದ್ದು, ಇದುವರೆಗೆ ಯಾವುದೇ ಮಾನವ ಸೋಂಕು ಪತ್ತೆಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ಕೇಂದ್ರದ ಕೋಳಿಯಲ್ಲಿ ಎಚ್ 5ಎನ್‌1 ಸೋಂಕು ಏ.14ರಂದು ದೃಢಪಟ್ಟಿತ್ತು. ಭೋಪಾಲ್‌ನ ರಾಷ್ಟ್ರೀಯ ಹೈ ಸೆಕ್ಯುರಿಟಿ ಪ್ರಾಣಿ ರೋಗಗಳ ಸಂಸ್ಥೆ ನಡೆಸಿದ ಪ್ರಯೋಗಾಲಯ ಪರೀಕ್ಷೆಗಳ ನಂತರ ಈ ಸೋಂಕು ದೃಢಪಟ್ಟಿತ್ತು. ಬಳಿಕ ರಾಜ್ಯ ಮತ್ತು ಜಿಲ್ಲಾ ಕ್ಷಿಪ್ರ ಕಾರ್ಯಪಡೆ ತಂಡ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡವು ಸ್ಥಳಕ್ಕೆ ಭೇಟಿ ನೀಡಿ, ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿತ್ತು. ಇದೀಗ ಇಲ್ಲಿಯವರೆಗೆ ಯಾವುದೇ ಮಾನವ ಸೋಂಕು ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ.

## ನಿಖರ ವೈದ್ಯಕೀಯ ಪದ್ಧತಿಯಲ್ಲಿ ಹೊಸ ಅಧ್ಯಾಯ ಆರಂಭ

# 'ಪ್ರಿವೆಂಟಿವ್ ಜೆನೊಮಿಕ್ಸ್ ಕ್ಲಿನಿಕ್' ಪ್ರಾರಂಭಿಸಿದ ಫೋರ್ಟಿಸ್ ಆಸ್ಪತ್ರೆ

**ಬೆಂಗಳೂರು, ಏ.26:** ಫೋರ್ಟಿಸ್ ಆಸ್ಪತ್ರೆ ಬೆಂಗಳೂರು, ರೋಗಿ–ಕೇಂದ್ರಿತ, ತಡೆಗಟ್ಟುವ ಮತ್ತು ಅತ್ಯಾಧುನಿಕ ನಿಖರ ಚಿಕಿತ್ಸೆಯನ್ನು ಒದಗಿಸುವ ಬದ್ಧತೆಯ ಭಾಗವಾಗಿ ಬೆಂಗಳೂರಿನ ಎಲ್ಲಾ ಆಸ್ಪತ್ರೆಗಳಲ್ಲಿ 'ಪ್ರಿವೆಂಟಿವ್ ಜೆನೊಮಿಕ್ಸ್ ಕ್ಲಿನಿಕ್' ಅನ್ನು ಪ್ರಾರಂಭಿಸಿದೆ.

ಬೆಂಗಳೂರಿನ ಐಐಎಸ್‌ಸಿ ಮಾಜಿ ನಿರ್ದೇಶಕ ಪ್ರೊ. ಪದ್ಮನಾಭನ್ ಬಲರಾಮ್ ಅವರು ಈ ಕ್ಲಿನಿಕ್ ಅನ್ನು ಉದ್ಘಾಟಿಸಿದರು.

ಈ ಪ್ರಿವೆಂಟಿವ್ ಜೆನೊಮಿಕ್ಸ್ ಕ್ಲಿನಿಕ್ ತಡೆಗಟ್ಟುವ ತಳಿವಿಜ್ಞಾನ ಚಿಕಿತ್ಸಾಲಯವಾಗಿದ್ದು, ಸುಧಾರಿತ ಆನುವಂಶಿಕ ಪರೀಕ್ಷೆ, ತಜ್ಞರ ಸಮಾಲೋಚನೆ ಮತ್ತು ವೈಯಕ್ತಿಕ ಚಿಕಿತ್ಸಾ ಯೋಜನೆಗಳನ್ನು ನೀಡುವ ಗುರಿಯನ್ನು ಹೊಂದಿದೆ. ಇದು ವ್ಯಕ್ತಿಗಳು ತಮ್ಮ ಆನುವಂಶಿಕ




ಗುಣಲಕ್ಷಣಗಳ ಆಧಾರದ ಮೇಲೆ ಆರೋಗ್ಯ ರಕ್ಷಣೆಯ ಕುರಿತು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತದೆ. ತಳಿವಿಜ್ಞಾನದ ಬಳಕೆಯ ಮೂಲಕ, ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಅನುವಂಶಿಕವಾಗಿ ಬರುವ ಸಮಸ್ಯೆಗಳನ್ನು ಮೊದಲೇ ಪತ್ತೆಹಚ್ಚಲು, ಸಂಕೀರ್ಣ ಕಾಯಿಲೆಗಳ ನಿಖರ ರೋಗನಿರ್ಣಯ ಮಾಡಲು ಮತ್ತು ಹೆಚ್ಚು ನಿಖರ ಹಾಗೂ ಪರಿಣಾಮಕಾರಿ ಯಾದ ಚಿಕಿತ್ಸಾ ವಿಧಾನಗಳನ್ನು ರೂಪಿಸಲು ಶ್ರಮಿಸಲಿದ್ದಾರೆ.

ಸಮಾರಂಭದಲ್ಲಿ ಮಾತನಾಡಿದ ಬೆಂಗಳೂರಿನ ಐಐಎಸ್‌ಸಿ ಮಾಜಿ ನಿರ್ದೇಶಕ ಪ್ರೊ. ಪದ್ಮನಾಭನ್ ಬಲರಾಮ್, 'ಈ ಪ್ರಮುಖ ಯೋಜನೆ ಹಮ್ಮಿಕೊಂಡಿರುವುದಕ್ಕೆ ನಾನು ಫೋರ್ಟಿಸ್ ಆಸ್ಪತ್ರೆಯನ್ನು ಅಭಿನಂದಿಸುತ್ತೇನೆ. ರೋಗದ ಕಾರ್ಯವಿಧಾನಗಳು ಮತ್ತು ವೈಯಕ್ತಿಕ ಅಪಾಯದ ವಿವರಗಳ ಬಗ್ಗೆ ಆಳವಾದ ಒಳನೋಟಗಳನ್ನು ನೀಡುವ ಮೂಲಕ ತಳಿವಿಜ್ಞಾನವು ಭವಿಷ್ಯದ ಆರೋಗ್ಯ ರಕ್ಷಣೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸುಧಾರಿತ ವಿಜ್ಞಾನವನ್ನು ವೈದ್ಯಕೀಯ ಚಿಕಿತ್ಸಾ ಪದ್ಧತಿಯೊಂದಿಗೆ ಬೆಸೆಯಲು ಇಂತಹ ಯೋಜನೆಗಳು ಅತ್ಯಗತ್ಯವಾಗಿದ್ದು, ಆರೋಗ್ಯ ಸೇವೆಯನ್ನು ಹೆಚ್ಚು ತಡೆಗಟ್ಟುವ ಮತ್ತು ವೈಯಕ್ತಿಕಗೊಳಿಸಿದ ವಿಧಾನದತ್ತ ಕೊಂಡೊಯ್ಯಲು ಸಹಾಯ ಮಾಡುತ್ತವೆ? ಎಂದು ಹೇಳಿದರು.

# ನನ್ನ ಮಾತಿನಿಂದ ಹಿಂದೆ ಸರಿಯಲ್ಲ: ನಿನ್ನೆ ಕ್ಷಮೆ ಕೇಳಿ, ಉಲ್ಟಾ ಹೊಡೆದ ನಟ ಚೇತನ್ ಅಹಿಂಸಾ

**ಬೆಂಗಳೂರು, ಏ.26:** ಡಾಕ್ಟರ್ ರಾಜಕುಮಾರ್ ಸಮಾಧಿ ಸ್ಥಳದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ನಂತರ ಕ್ಷಮೆ ಕೇಳಿದ್ದ ನಟ ಚೇತನ್ ಅಹಿಂಸಾ ಇಂದು ಉಲ್ಟಾ ಹೊಡೆದಿದ್ದಾರೆ.

ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಅವರು, ನಿನ್ನೆ ನನ್ನ ಬಗ್ಗೆ ಸಾರಾ ಗೋವಿಂದು ಬಳಸಿದ ಪದಗಳು ಸರಿಯಲ್ಲ. ಇಲ್ಲಿ ಸೇರಿರುವ ನಾವೆಲ್ಲರೂ ಡಾಕ್ಟರ್ ರಾಜಕುಮಾರ್ ಅಭಿಮಾನಿಗಳೇ.

ಸಾರಾ ಗೋವಿಂದು ಮಹಿಳಾ ನಿಂದನೆ ಮಾಡಿದ್ದಾರೆ. ಗೂಂಡಾಗಿರಿ ಮಾಡಲೆಂದೇ ಆ ವ್ಯಕ್ತಿಗಳು



ಬಂದಿದ್ದರು ಎಂದು ವಾಗ್ದಾಳಿ ನಡೆಸಿದ್ದರು.

ಡಾ.ರಾಜಕುಮಾರ್ ಅವರನ್ನು ಟಾರ್ಗೆಟ್ ಮಾಡಿ ಮಾತನಾಡಿಲ್ಲ. ವರನಟ ರಾಜಕುಮಾರ್ ಅವರಿಂದಲೇ ಹೋರಾಟ ಮಾಡುವುದನ್ನು ಕಲಿತಿದ್ದೇನೆ. ಪ್ರತಿಯೊಬ್ಬರು ಅವರವರ ಅಭಿಪ್ರಾಯವನ್ನು ವ್ಯಕ್ತಪಡಿಸಲಿ. ನಿನ್ನೆ ನನ್ನ ಮನೆಯ ಬಳಿ ಬಂದು ಹೆದರಿಸಿದ್ದಾರೆ, ಧಮ್ಕಿ ಹಾಕಿದ್ದಾರೆ. ಸೌಜನ್ಯದಿಂದ ಮಾತನಾಡಿದರೆ ಒಪ್ಪುತ್ತೇನೆ ಆದರೆ ಧಮ್ಕಿ ಹಾಕಿದ್ರೆ ಒಪ್ಪಲ್ಲ.

ಕಾನೂನನ್ನು ಕೈಗೆ ತೆಗೆದುಕೊಳ್ಳಬೇಕು ಅನ್ನುವುದನ್ನು ಒಪ್ಪುವುದಿಲ್ಲ. ಮುಂದಿನ ದಿನಗಳಲ್ಲಿ ನಾನೂ ಕಾನೂನು ಹೋರಾಟ ಮಾಡುತ್ತೇವೆ. ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಅಂದಿದ್ದಾರೆ.



ಬೆಂಗಳೂರಿನಲ್ಲಿ ಭಾನುವಾರ ನಡೆದ ಟಿಸಿಎಸ್ ವರ್ಲ್ಡ್ 10ಕೆ ಓಟದಲ್ಲಿ 35,000 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

# ಎಸ್‌ಎಸ್‌ಎಲ್‌ಸಿ ಜಿಲ್ಲೆಗೆ ಸೇಡಂ ಮೊದಲ ಸ್ಥಾನ ಸಂತಸ ತಂದಿದೆ: ಸಚಿವ ಡಾ.ಶರಣಪ್ರಕಾಶ ಪಾಟೀಲ್

**ಕಲಬುರಗಿ, ಏ. 26:** ಶಹಾಬಾಜಪುರ ರಸ್ತೆಯ ಸೇತುವೆ ನಿರ್ಮಾಣದಿಂದ ಹತ್ತಾರು ನೂರಾರು ರೈತರ ಹೊಲಗಳಿಗೆ ಹೋಗಲು ಅನುಕೂಲವಾಗಲಿದೆ. ಆದ್ದರಿಂದ ಕಾಗಿಣಾ ನದಿಗೆ ಈ ಸೇತುವೆ ನಿರ್ಮಿಸಲಾಗುತ್ತಿದೆ ಎಂದು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಹೇಳಿದರು.



ಜಿಲ್ಲೆಯ ಸೇಡಂ ತಾಲೂಕಿನ ಗಂಗಾರಾವಲಪಲ್ಲಿ–ಶಹಾಬಾಜಪುರ ರಸ್ತೆಯ ಸೇತುವೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ ಮಾತನಾಡಿ, ಗ್ರಾಮಗಳ ಅಭಿವೃದ್ಧಿಯು ದೇಶದ ಪ್ರಗತಿಗೆ ಮೂಲಾಧಾರವಾಗಿದ್ದು, ಹಳ್ಳಿಗಳಲ್ಲಿ ಗುಣಮಟ್ಟದ ರಸ್ತೆ, ಚರಂಡಿ, ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಎಲ್ಲ ರೀತಿಯ ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ನಮ್ಮ ಸರಕಾರ ಮಾಡುತ್ತಿದೆ ಎಂದ ಅವರು, ಗುಣಮಟ್ಟದ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ, ಗುತ್ತಿಗೇದಾರರಿಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ಈ ವರ್ಷದ ಎಸ್ಸೆಸ್ಸೆಲ್ಸಿಯ ವಾರ್ಷಿಕ ಫಲಿತಾಂಶದಲ್ಲಿ ಜಿಲ್ಲೆಗೆ ತಮ್ಮ ಸ್ವಕ್ಷೇತ್ರ ಸೇಡಂ ಮೊದಲ ಸ್ಥಾನ ಪಡೆದುಕೊಂಡಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳು ನಮ್ಮ ಭಾಗಕ್ಕಿರುವ 371 (ಜೆ) ವಿಧಿಯ ಲಾಭ ಪಡೆದುಕೊಳ್ಳಬೇಕು. 371 (ಜೆ)ಯಲ್ಲಿ ನಮಗೆ ಮೀಸಲಾತಿ ಸಿಗಲಿದೆ. ಕಳೆದ 10 ವರ್ಷಗಳಲ್ಲಿ 371 ಜೆ ಲಾಭ ಪಡೆದು ಸುಮಾರು 80 ಸಾವಿರ ಜನ ಉದ್ಯೋಗ ಪಡೆದುಕೊಂಡಿದ್ದಾರೆ. ಈ ಮೊದಲು ನಮಗೆ ಕೇವಲ 150 ಮೆಡಿಕಲ್ ಸೀಟ್ ಸಿಗುತ್ತಿತ್ತು. ಆದರೆ 371 (ಜೆ) ನಿಂದಾಗಿ ಪ್ರತಿ ವರ್ಷ 950 ಸೀಟುಗಳು ನಮ್ಮ ಭಾಗದ ಮಕ್ಕಳಿಗೆ ಸಿಗುತ್ತಿವೆ. ಇದರಿಂದಾಗಿ ಕಳೆದ 10 ವರ್ಷಗಳಲ್ಲಿ ಸುಮಾರು 10 ಸಾವಿರ ವೈದ್ಯರು, 30 ಸಾವಿರ ಇಂಜಿನಿಯರ್ಸ್‌ಗಳಾಗಲು ಸಾಧ್ಯವಾಗಿದೆ. ಆದ್ದರಿಂದ ಈ 371 (ಜೆ) ವಿಧಿಯ ಲಾಭ ಎಲ್ಲ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಬಡವರ ಮಕ್ಕಳು ಕೂಡ ಡಾಕ್ಟರ್, ಇಂಜಿನಿಯರ್ ಆಗಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ ಎಂದರು.

## ಟಿಬಿ ಡ್ಯಾಂನ 33 ಹೊಸ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣ

## ವೆಲ್ಡಿಂಗ್, ಪೇಂಟಿಂಗ್ ಸೇರಿ ಅಂತಿಮ ಹಂತದ ಕೆಲಸ ಬಾಕಿ 15 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ನಿರೀಕ್ಷೆ

**ವಿಜಯನಗರ, ಏ.26:** ರೈತರ ಜೀವನಾಡಿಯಾದ ತುಂಗಭದ್ರಾ ಅಣೆಕಟ್ಟೆಯಲ್ಲಿ 33 ನೂತನ ಕ್ರಸ್ಟ್‌ಗೇಟ್‌ಗಳ ಅಳವಡಿಕೆ ಕಾರ್ಯ ಶನಿವಾರ ಪೂರ್ಣಗೊಂಡಿದೆ. ಇದರಿಂದ ಮುಂಬರುವ ಮುಂಗಾರು ಅವಧಿಯಲ್ಲಿ ಉತ್ತಮ ಮಳೆಯಾದರೆ ಜಲಾಶಯ ಭರ್ತಿಯಾಗಿ ಸುಮಾರು 15 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸಿಗುವ ನಿರೀಕ್ಷೆ ವ್ಯಕ್ತವಾಗಿದೆ.



ಈ ಕುರಿತು ತುಂಗಭದ್ರಾ ಮಂಡಳಿಯ ಕಾರ್ಯದರ್ಶಿ ಒ. ಆರ್. ಕೆ. ರೆಡ್ಡಿ ಮಾಹಿತಿ ನೀಡಿದ್ದು, ಪ್ರಮುಖ ಅಳವಡಿಕೆ ಕೆಲಸಗಳು ಪೂರ್ಣಗೊಂಡಿದ್ದು, ವೆಲ್ಡಿಂಗ್ ಹಾಗೂ ಪೇಂಟಿಂಗ್‌ನಂತಹ ಅಂತಿಮ ಹಂತದ ಕೆಲಸಗಳು ಮಾತ್ರ ಬಾಕಿ ಉಳಿದಿವೆ. ಮೇ ಎರಡನೇ ವಾರದಲ್ಲಿ ಚೈನ್‌ಲಿಂಕ್ ಅಳವಡಿಕೆ ನಡೆಯಲಿದ್ದು, ಮೇ ಅಂತ್ಯದೊಳಗೆ ಜಲಾಶಯವನ್ನು ಸಂಪೂರ್ಣ ಪ್ರಮಾಣದಲ್ಲಿ ನೀರು ಸಂಗ್ರಹಿಸಲು ಸಿದ್ಧಗೊಳಿಸಲಾಗುವುದು ಎಂದು ಹೇಳಿದರು.

2024ರ ಆಗಸ್ಟ್ 10 ರಂದು ಜಲಾಶಯದ 19ನೇ ಕ್ರಸ್ಟ್‌ಗೇಟ್ ಕೊಚ್ಚಿಕೊಂಡು ಹೋಗಿ ಅಪಾರ ಪ್ರಮಾಣದ ನೀರು ನದಿಗೆ ಹರಿದುಹೋಗಿದ್ದ ಹಿನ್ನೆಲೆ, ಎಲ್ಲಾ 33 ಗೇಟ್‌ಗಳನ್ನು ನವೀಕರಿಸುವ ಮಹತ್ವದ ಯೋಜನೆ ಕೈಗೊಳ್ಳಲಾಗಿತ್ತು. 2025 ಡಿ.24 ರಿಂದ ಆರಂಭವಾದ ಈ ಕಾರ್ಯವನ್ನು ತಜ್ಞರು, ಅಧಿಕಾರಿಗಳು ಹಾಗೂ ಕಾರ್ಮಿಕರು ಸವಾಲುಗಳ ನಡುವೆ ನಿರಂತರ 121 ದಿನಗಳ ಕಾಲ ಶ್ರಮಿಸಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ ಎಂದರು.

ಇದೀಗ ಎಲ್ಲಾ 33 ಕ್ರೆಸ್ಟ್‌ಗೇಟ್‌ಗಳ ಅಳವಡಿಕೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಟಿ.ಬಿ ಬೋರ್ಡ್ ಅಧಿಕಾರಿಗಳು ನಿಟ್ಟುಸಿರು ಬಿಟ್ಟಿದ್ದಾರೆ. ಕಾರ್ಯದರ್ಶಿ ಓ.ಆರ್.ಕೆ. ರೆಡ್ಡಿ, ನೀರಾವರಿ ಇಲಾಖೆಯ ಎಸ್‌ಇ ನಾರಾಯಣ ನಾಯ್ಕ ಹಾಗೂ ಇಇ ಚಂದ್ರಶೇಖರ್ ಸೇರಿದಂತೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಕಾರ್ಯವನ್ನು ಪರಿಶೀಲಿಸಿ ಸಂತಸ ವ್ಯಕ್ತಪಡಿಸಿದರು.

2024ರ ಆಗಸ್ಟ್‌ನಲ್ಲಿ ಜಲಾಶಯ ಗರಿಷ್ಠ ಮಟ್ಟವಾದ 1,633 ಅಡಿಗೆ ತಲುಪಿದ ಸಂದರ್ಭದಲ್ಲಿ ಗೇಟ್ ದುರಂತ ಸಂಭವಿಸಿತ್ತು. ತಕ್ಷಣವೇ ತಾತ್ಕಾಲಿಕ ಸ್ಟಾಪ್‌ಲಾಗ್ ಗೇಟ್ ಅಳವಡಿಸಿ ನೀರಿನ ನಷ್ಟವನ್ನು ನಿಯಂತ್ರಿಸಲಾಗಿತ್ತು. ಇದೀಗ ಶಾಶ್ವತ ಪರಿಹಾರವಾಗಿ ಎಲ್ಲಾ ಗೇಟ್‌ಗಳನ್ನು ನವೀಕರಿಸಿರುವುದು ರೈತರಲ್ಲಿ ಹೊಸ ಭರವಸೆ ಮೂಡಿಸಿದೆ.

## ಮೋಳಕೇರಾ ಅನುಮಾನಾಸ್ಪದ ಸ್ಫೋಟ: ಎಂಟು ಜನರಿಗೆ ಗಂಭೀರ ಗಾಯ, ಆಸ್ಪತ್ರೆಗೆ ದಾಖಲು



**ಬೀದರ್, ಏ.26:** ಜಿಲ್ಲೆಯ ಮೊಳಕೇರಾ ಗ್ರಾಮದ ಬಯಲಿನಲ್ಲಿ ಶನಿವಾರ ನಿಗೂಢ ಸ್ಫೋಟ ಸಂಬವಿಸಿದ್ದು, ಘಟನಾ ಸ್ಥಳದಲ್ಲಿದ್ದ ಎಂಟು ಜನರಿಗೆ ಗಂಭೀರ ಗಾಯವಾಗಿದೆ ಎನ್ನಲಾಗಿದೆ. ಕಳೆದ ಆರು ತಿಂಗಳಲ್ಲಿ ಇದೇ ಗ್ರಾಮದಲ್ಲಿ ನಡೆದ ಎರಡನೇ ಸ್ಫೋಟ ಪ್ರಕರಣ ಇದಾಗಿದೆ.

ಗ್ರಾಮದ ಮೋಳಗಿ ಮಾರಯ್ಯ ದೇವಸ್ಥಾನದ ಬಳಿ ಶನಿವಾರ ಸ್ಫೋಟ ಪ್ರಕರಣ ನಡೆದಿದೆ. ಸದ್ಯ ಎಂಟು ಜನರು ಗಾಯಾಳುಗಳಲ್ಲಿ ಇಬ್ಬರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹೈದ್ರಾಬಾದ್‌ಗೆ ಕಳುಹಿಸಲಾಗಿದೆ. ಘಟನೆ ನಂತರ ಗ್ರಾಮಸ್ಥರಲ್ಲಿ ಆತಂಕ ಮನೆಮಾಡಿದೆ.

**ಎಂಟು ಜನರಿಗೆ ಗಾಯ :** ಅನ್ವರ್ ಸಾಬ್ (18) ಮತ್ತು ಜಬ್ಬಾರ್ ಸಾಬ್ (65) ಸ್ಫೋಟದಲ್ಲಿ ಗಂಭೀರ ಗಾಯಗೊಂಡವರು ಇವರನ್ನು ತಕ್ಷಣವೇ ಹೈದ್ರಾಬಾದ್‌ನ ಆಸ್ಪತ್ರೆಗೆ ರವಾನಿಸಲಾಗಿದೆ. ಉಳಿದಂತೆ ಪರಿಜಾರ್ (8), ಅಜೀಜ್ (5), ಮತ್ತು ಬುಶ್ರಾ (4) ಎಂಬ ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ಥಳೀಯ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಜಿಲ್ಲಾಡಳಿತ ಮಾಹಿತಿ ಹಂಚಿಕೊಂಡಿದೆ.

**ಪೊಲೀಸರಿಂದ ಪರಿಶೀಲನೆ :** ಘಟನೆ ಬಗ್ಗೆ ಮಾಹಿತಿ ಹೊರ ಬೀಳುತ್ತಲೇ ಪೊಲೀಸರು ಸ್ಥಳಕ್ಕೆ ದೌಡಾಯಿಸಿ ಪರಿಶೀಲನೆ ನಡೆಸಿದರು. ಅಲ್ಲದೆ ಸ್ಫೋಗೊಂಡ ವಸ್ತು ಯಾವುದು ಎಂದು ಪತ್ತೆ ಹಚ್ಚಲು ಘಟನಾ ಸ್ಥಳದಲ್ಲಿದ್ದ ವಸ್ತುವಿನ ಮಾದರಿಗಳನ್ನು ಸಂಗ್ರಹಿಸಲು ಶೀಘ್ರದಲ್ಲೇ ಸೋಕೋ ತಂಡವನ್ನು ಕರೆಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಹೇಳಿದ್ದಾರೆ.

# ಶಹಬಾಜ್ ಪಠಾಣ್ ಹತ್ಯೆ ಪ್ರಕರಣ ನಾಲ್ವರಿಗೆ ಜೀವಾವಧಿ ಶಿಕ್ಷೆ

**ಬೆಳಗಾವಿ, ಏ.26:** 2020ರಲ್ಲಿ ಬೆಳಗಾವಿ ನಗರದಲ್ಲಿ ನಡೆದಿದ್ದ ಶಹಬಾಜ್ ಪಠಾಣ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿರುವ ಬೆಳಗಾವಿಯ ಎರಡನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಲಕ್ಷ್ಮಣ ದಡ್ಡಿ, ಸವೀನ ದಡ್ಡಿ, ಬಸವರಾಜ ದಡ್ಡಿ ಮತ್ತು ಬಸವಣ್ಣಿ ನಾಯಕ ಜೀವಾವಧಿ ಶಿಕ್ಷೆಗೆ ಗುರಿಯಾದ ಅಪರಾಧಿಗಳು.

ವಿಚಾರಣೆ ವೇಳೆ ನಾಲ್ವರು ಆರೋಪಿಗಳು ಇನ್ನೂ ಇಬ್ಬರ ಮೇಲೆ ಕೊಲೆ ಯತ್ನ ನಡೆಸಿರುವುದು ಬೆಳಕಿಗೆ ಬಂದಿದೆ. 2020ರಂದು ಶಹಬಾಜ್ ಪಠಾಣ್ ತನ್ನ ಸ್ನೇಹಿತನ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಭಾಗವಹಿಸಿ, ಬೈಕ್‌ನಲ್ಲಿ ಮನೆಗೆ ಹಿಂದಿರುಗುತ್ತಿದ್ದಾಗ ಶಿವಬಸವ ನಗರ ಪ್ರದೇಶದಲ್ಲಿ ಆರೋಪಿಗಳು ಬಿಳಿಬಣ್ಣದ ಟಾಟಾ ಸುಮೋ ವಾಹನದ ಮೂಲಕ ಶಹಬಾಜ್ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾರೆ. ಬಳಿಕ ಆತನ ಮೇಲೆ ಹಲ್ಲೆ ನಡೆಸಲು ಯತ್ನಿಸಿದ್ದರು. ಈ ವೇಳೆ ಅವರಿಂದ ತಪ್ಪಿಸಿಕೊಂಡು ಓಡಿದ ಶಹಬಾಜ್ ಸಮೀಪದಲ್ಲಿದ್ದ ನಿವೃತ್ತ ಡಿವೈಎಸ್‌ಪಿ ಅವರ ಮನೆಗೆ ಆಶ್ರಯಕ್ಕಾಗಿ ಹೋಗಿದ್ದಾನೆ. ಆದರೂ ಬೆಂಬಿಡದ ಆರೋಪಿಗಳು ಅಲ್ಲಿಗೂ ಬೆನ್ನಟ್ಟಿಕೊಂಡು ಹೋಗಿ, ಮಾರಕಾಸ್ತ್ರಗಳಿಂದ ಶಹಬಾಜ್ ಮೇಲೆ ಹಲ್ಲೆ ನಡೆಸಿದ್ದಾರೆ. ಗಂಭೀರವಾಗಿ ಹಲ್ಲೆಗೀಳಗಾದ ಶಹಬಾಜ್ ಸ್ಥಳದಲ್ಲೇ ಸಾವನ್ನಪ್ಪಿದ್ದ. ಪ್ರಕರಣದ ತನಿಖೆ ವೇಳೆ ಪೊಲೀಸರು ಒಟ್ಟು 30 ಮಂದಿ ಸಾಕ್ಷಿದಾರರ ಹೇಳಿಕೆಗಳು ಮತ್ತು 128ಕ್ಕೂ ಅಧಿಕ ದಾಖಲೆ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒಪ್ಪಿಸಿದ್ದರು.

ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಗಣಿಸಿದ ನ್ಯಾಯಾಲಯ ಆರೋಪಿಗಳ ವಿರುದ್ಧದ ಆರೋಪಗಳು ಸಾಬೀತಾಗಿದ್ದು ಅಪರಾಧಿಗಳೆಂದು ತೀರ್ಪು ನೀಡಿತ್ತು. ಇದೀಗ ನಾಲ್ವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಹಾಗೂ ಒಟ್ಟು 9.60 ಲಕ್ಷ ದಂಡ ವಿಧಿಸಿದೆ. ಅದರಲ್ಲಿ 8 ಲಕ್ಷವನ್ನು ಮೃತ ಶಹಬಾಜ್ ಪಠಾಣ್ ಅವರ ಕುಟುಂಬಕ್ಕೆ ಪರಿಹಾರವಾಗಿ ನೀಡುವಂತೆ ಹಾಗೂ 1.60 ಲಕ್ಷವನ್ನು ದೂರುದಾರರಿಗೆ ನೀಡುವಂತೆ ನ್ಯಾಯಾಲಯ ಆದೇಶಿಸಿದೆ.

# ಕಾರ್ಮಿಕರ ಕನಿಷ್ಠ ವೇತನ ಮಸೂದೆ ಇನ್ನೊಂದು ವಾರದಲ್ಲಿ: ಸಂತೋಷ್ ಲಾಡ್



**ಬಳ್ಳಾರಿ, ಏ.26:** ಕಾರ್ಮಿಕ ಸಚಿವ ಸಂತೋಷ ಲಾಡ್ ನೇತೃತ್ವದಲ್ಲಿ ಸಂಡೂರು ತಾಲೂಕಿನ ತಾಳೂರು ಗ್ರಾಮದಲ್ಲಿ ಸಮರ್ಪಣಾ ಸಮಾವೇಶ ನಡೆಯಿತು.

ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ವಿತರಣೆ ಹಾಗೂ ಹಕ್ಕು ಪತ್ರ ವಿತರಣೆ,ರಸ್ತೆ, ಚರಂಡಿ, ಶಿಕ್ಷಣ, ಆರೋಗ್ಯ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗೆ ಸಚಿವ ಲಾಡ್ ಚಾಲನೆ. ಸಂತೋಷ ಲಾಡ್‌ಗೆ ಸಂಸದ ತುಕಾರಾಂ, ಶಾಸಕಿ ಅನ್ನಪೂರ್ಣ ಸಾಥ್ ನೀಡಿದ್ದರು.

ನೂರಾರು ಕೋಟಿ ರೂ ವೆಚ್ಚದ. ಅನುದಾನದಲ್ಲಿ ಮಾಡಿರೋ ಕಾಮಗಾರಿಗಳ ಬಗ್ಗೆ ವಿಡಿಯೋ ಪ್ರದರ್ಶನದ ಮೂಲಕ ಮಾಡಿ ಜನತೆಗೆ ತಿಳಿಸಿದರು.

ಸಮಾವೇಶದಲ್ಲಿ ಸಚಿವ ಸಂತೋಷ ಲಾಡ್ ಮಾತನಾಡಿ, ಅಮೆರಿಕಾ ಅಧ್ಯಕ್ಷ ಟ್ರಂಪ್ ನಮ್ಮ ದೇಶಕ್ಕೆ ಕೀಳಾಗಿ ಮಾತನಾಡಿದ್ದಾರೆ. ಬುದ್ಧರ ನಾಡು, ಅಂಬೇಡ್ಕರ್ ದೇಶ, ಗಾಂಧಿಯವರ ದೇಶಕ್ಕೆ ನರಕದ ದೇಶ ಎಂದು ಹೇಳಿದ್ದಾರೆ.

150 ಕೋಟಿ ಭಾರತೀಯರಿಗೆ ಅಗೌರವ ರೀತಿಯಲ್ಲಿ ಮಾತನಾಡಿದ್ದಾರೆ ಈ ವೇದಿಕೆ ಮೂಲಕ ಟ್ರಂಪ್ ಹೇಳಿಕೆ ಖಂಡನೆ ಮಾಡ್ತೇನೆ. ಭಾರತ ಮಾತಾಕೀ ಜೈ ಎನ್ನುವ ಬಿಜೆಪಿಯವರು ಮತ್ತು ಕೇಂದ್ರ ಸರ್ಕಾರದ ನಾಯಕರ ಟ್ರಂಪ್ ವಿರುದ್ಧ ಮಾತನಾಡ್ತಿಲ್ಲ. ಬಿಜೆಪಿಯವರಷ್ಟೇ ಅಲ್ಲ, ಭಾರತೀಯರು ಇದನ್ನು ಖಂಡಿಸಬೇಕು ಎಂದರು.

**ಇಲಾಖೆಯ ಅಭಿವೃದ್ಧಿ:** ಗೀಗ್ ಕಾರ್ಮಿಕರಿಗೆ ಸಹಕಾರ ಮಾಡುವ ನಿಟ್ಟಿನಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಿ ಕಾರ್ಮಿಕ ಇಲಾಖೆಯ ಸ್ಮಾರ್ಟ್ ಕಾರ್ಡ್ ನೀಡಿದ್ದೇವೆ.

ಸಿನಿಮಾದ ಕಾರ್ಮಿಕರಿಗೆ ಸಿನಿ ಬಿಲ್, ಮನೆ ಕೆಲಸದವರಿಗೆ ಡೊಮೋಸ್ಟಿಕ್ ಕಾರ್ಮಿಕರ ಬಿಲ್ ಸೇರಿದಂತೆ ವಿವಿಧ ವಿಭಾಗದ ಕಾರ್ಮಿಕರ ಸಹಕಾರ ನಿಟ್ಟಿನಲ್ಲಿ ಕೆಲಸ ಮಾಡ್ತಿದ್ದೇವೆ.ಕಾರ್ಮಿಕರ ಕನಿಷ್ಠ ವೇತನ ಬಿಲ್ ತಂದೇ ತರುತ್ತೇವೆ. ಇನ್ನೊಂದು ವಾರದಲ್ಲಿ ಚರ್ಚೆ ಮಾಡಿ ಫೈನಲ್ ಮಾಡ್ತೇವೆಂದರು.

ಮೋದಿ ವಿರುದ್ಧ ವಾಗ್ದಾಳಿ:ದೇಶವನ್ನು ಸಾಲದ ಸುಳಿಗೆ ಸಿಲುಕಿಸಿದ್ದಾರೆ ಮೋದಿ ಅವರು. ಭಾರತದ ಮೇಲೆ 225 ಲಕ್ಷ ಕೋಟಿ ಸಾಲ ಇದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಕೊಡ್ತೇವೆ ಎಂದರು. ಉದ್ಯಮಿಗಳ ಸಾಲ ಮನ್ನ ಮಾಡಿದ್ದಾರೆ. ಆದ್ರೇ ರೈತರು ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ.

## ಆಂದೋಲಾ ಶ್ರೀ ವಿರುದ್ಧ ಖರ್ಗೆ ಮಾನಹಾನಿ ಪ್ರಕರಣ ವಜಾ

**ಕಲಬುರಗಿ, ಏ. 26:** ತಮ್ಮ ವಿರುದ್ಧ ಮಾನಹಾನಿ ಪ್ರಕರಣವನ್ನು ದಾಖಲಿಸಿದ್ದ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್, ಐಟಿಬಿಟಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ನ್ಯಾ ಯಾಲಯಕ್ಕೆ ಹಾಜರಾಗದೇ ಇದ್ದುದರಿಂದ ಪ್ರಕರಣವನ್ನು ವಜಾಗೊಳಿಸಲಾಗಿದೆ ಎಂದು ಶಿವಸೇನಾ ಪಕ್ಷದ ರಾಜ್ಯಾಧ್ಯಕ್ಷರೂ ಆದ ಆಂದೋಲಾ ಕರುಣೇಶ್ವರ ಮಠದ ಪೀಠಾಧಿಪತಿ ಸಿದ್ದಲಿಂಗ ಸ್ವಾಮೀಜಿ ಆಂದೋಲಾ ಅವರು ಹೇಳಿದರು.

ಸುದ್ದಿಗಾರರೊಂದಿಗೆ, ಸಚಿವರ ವಿರುದ್ಧದ ಅಕ್ರಮ ಹಾಗೂ ದೌರ್ಜನ್ಯಗಳ ಕುರಿತು ಧ್ವನಿ ಎತ್ತಿದ್ದಕ್ಕಾಗಿ ಶ್ರೀಗಳ ಮೇಲೆ ಈ ಕಾನೂನು ಕ್ರಮ ಜರುಗಿಸಲಾಗಿತ್ತು. ಆದರೆ, ಈ ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ದೂರುದಾರರಾದ ಸಚಿವರು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಹೇಳಿಕೆಯನ್ನು ದಾಖಲಿಸಿರಲಿಲ್ಲ ಎಂದರು.

## ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ತಡೆದ ಕಾಂಗ್ರೆಸ್ ಮಿತ್ರಪಕ್ಷಗಳ ವಿರುದ್ಧ ಮಹಿಳೆಯರ ಆಕ್ರೋಶ




**ಬಳ್ಳಾರಿ, ಏ.26:** ನಾರಿ ಶಕ್ತಿ ಫೋರಂ ನಿಂದ. ನಾರಿ ಶಕ್ತಿ ವಂದನಾ ಅಧಿನಿಯಮ (ಮಹಿಳಾ ಮೀಸಲಾತಿ ಮಸೂದೆ) ಜಾರಿಯಾಗದಂತೆ ತಡೆದ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳ ವಿರುದ್ಧ ಮಹಿಳೆಯರು ನಗರದಲ್ಲಿ ಜನಾಕ್ರೋಶ ಜಾಥಾ ನಡೆಸಿದರು.

ಶೇ.33ರಷ್ಟು ಮಹಿಳಾ ಮೀಸಲಾತಿ ಬೇಕೇಬೇಕು, ನಾರಿಶಕ್ತಿ ದೇಶದ ಶಕ್ತಿ ಸೇರಿದಂತೆ ಹಲವು ಘೋಷಣೆಗಳ ಫಲಕ ಹಿಡಿದ ಮಹುಳೆಯರು, ಅದರಲ್ಲೂ ಅಲ್ಪ ಸಂಖ್ಯಾತರು, ತೃತೀಯ ಲಿಂಗಿಗಳು, ಸಮಾಜದ ವಿವಿಧ ಕ್ಷೇತ್ರಗಳಲ್ಲಿನ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.


ನಗರದ ದುರ್ಗಮ್ಮ ದೇವಸ್ಥಾನದಿಂದ ಆರಂಭಗೊಂಡ ಜಾಥಾ ಗಡಗಿ ಚೆನ್ನಪ್ಪ ಸರ್ಕಲ್ ಗೆ ಆಗಮಿಸಿ ಮಾನವ ಸರಪಳಿ ನಿರ್ಮಿಸಿ ನಾರಿಯರು ತಮ್ಮ ಶಕ್ತಿ ಪ್ರದರ್ಶನ ಮಾಡಿದರು. ಈ ವೇಳೆ ಮಾತನಾಡಿದ ವೈದ್ಯೆ ಡಾ.ಅರುಣಾ ಕಾಮಿನೇನಿ. ಪ್ರಧಾನಿ ನರೇಂದ್ರ ಮೋದಿ ಅವರು ಈ ದೇಶದ ಮಹಿಳೆಯರಿಗೆ ರಾಜಕೀಯವಾಗಿ ಹೆಚ್ಚಿನ ಶಕ್ತಿ ತರಲು ನಡೆಸುದ ಪ್ರಯತ್ನಕ್ಕೆ ವಿರೋಧ ಪಕ್ಷಗಳು ವಿರೋದ ಮಾಡಿರುವುದನ್ನು ನಾವು ಖಂಡಿಸುತ್ತೇವೆ ಎಂದರು.

ಮತ್ತೋರ್ವ ವೈದ್ಯೆ ಡಾ. ರೇಣುಕಾ ಮಂಜುನಾಥ ಮಾತನಾಡಿ, ದೇಶದ ರಾಷ್ಟ್ರಪತಿ, ಹಣಕಾಸು ಸಚಿವೆ, ಅಷ್ಟೇ ಏಕೆ ಆಪರೇಷನ್ ಸಿಂದೂರವನ್ನು ಮುನ್ನಡೆಸಿದವರು. ಮಹಿಳಾ ಶಕ್ತಿಯೇ ಹೀಗಿರುವಾಗ ಪ್ರತಿಪಕ್ಷಗಳು ನಾರಿಶಕ್ತಿ ರಾಜಕೀಯವಾಗಿ ಮೀಸಲಾತಿ ಪಡೆಯುವುದನ್ನು ವಿರೋಧಿಸುವುದು ಸರಿಯಲ್ಲ ನಮ್ಮ ಹೋರಾಟ ನಿರಂತರ ಎಂದರು.

# ಪಂಚಮಸಾಲಿ ಗುರುಪೀಠ ಟ್ರಸ್ಟ್‌ನ ಮೂವರು ಟ್ರಸ್ಟಿಗಳ ಉಚ್ಚಾಟಣೆ

ದಾವಣಗೆರೆ, ಏ.26: ಹರಿಹರ ವೀರಶೈವ ಪಂಚಮಸಾಲಿ ಗುರುಪೀಠದ ಸಂಘರ್ಷ ಮುಂದುವರೆದಿದ್ದು, ಪಂಚಮಸಾಲಿ ಗುರುಪೀಠದ ಮೂವರು ಟ್ರಸ್ಟಿಗಳನ್ನು ಉಚ್ಚಾಟನೆ ಮಾಡಲಾಗಿದೆ ಎಂದು ಪಂಚಮಸಾಲಿ ರಾಜ್ಯ ಸಂಘದ ಅಧ್ಯಕ್ಷ ಸೋಮನಗೌಡ ಮಾಲಿ ಪಾಟೀಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಟ್ರಸ್ಟ್ ನ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ, ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಮತ್ತು ಕಾರ್ಯದರ್ಶಿ ಜ್ಯೋತಿ ಪ್ರಕಾಶ್ ಅವರನ್ನು ಟ್ರಸ್ಟ್‌ನಿಂದ ಉಚ್ಚಾಟನೆ ಮಾಡಲಾಗಿದೆ ಎಂದು ತಿಳಿಸಿದರು.

ಲೆಕ್ಕಪತ್ರ ನೀಡುವಂತೆ ಸಾರ್ವಜನಿಕ ಮತ್ತು ಸಂಘದ ವತಿಯಿಂದ ನಿರಂತರವಾಗಿ ಕೇಳಲಾಗಿದ್ದರೂ ಸಹ, ಅವರು ಸ್ಪಂದಿಸದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ. ಏಪ್ರಿಲ್ 13ರಿಂದ ಈ ಮೂವರು ಟ್ರಸ್ಟಿಗಳಿಗೆ ಯಾವುದೇ ಹಣಕಾಸು ವ್ಯವಹಾರ ಅಥವಾ




ನಿರ್ಧಾರ ಕೈಗೊಳ್ಳುವ ಅಧಿಕಾರ ಇರುವುದಿಲ್ಲ ಎಂದು ಹೇಳಿದ್ದಾರೆ.ಪಂಚಮಸಾಲಿ ಸಂಘ ಸುಮಾರು 13,600 ಸದಸ್ಯರನ್ನು ಹೊಂದಿದೆ. ಟ್ರಸ್ಟ್‌ನಲ್ಲಿನ ಅವ್ಯವಹಾರ ತಡೆಯುವ ಮತ್ತು ಸಮಾಜದ ಒಳಿತಿಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಜೂನ್ ತಿಂಗಳಲ್ಲಿ ಲೆಕ್ಕ ಕೊಡಿ ಅಭಿಯಾನ ಸಮಿತಿ ಅಧ್ಯಕ್ಷರೊಂದಿಗೆ ರಾಜ್ಯ ಪ್ರವಾಸ ಕೈಗೊಂಡು 2008ರಿಂದ ಮಠಕ್ಕೆ ದಾನ ನೀಡಿದವರ ಕುರಿತು ಮಾಹಿತಿ ಸಂಗ್ರಹಿಸಿ, ಜೂನ್‌ನಲ್ಲಿ ಪೂರ್ಣ ಮಾಹಿತಿ ಬಹಿರಂಗಪಡಿಸಲಾಗುವುದು ಎಂದು ಹೇಳಿದ್ದಾರೆ.

## ಓದು–ಜ್ಞಾನ ಹಂಚಿಕೆಗೆ ಗ್ರಂಥಾಲಯಗಳು ಸಹಕಾರಿ: ಡಾ. ಎಸ್.ಎಲ್ ಕಾಡದೇವರಮಠ

**ಕಲಬುರಗಿ, ಏ.26:** ಪ್ರಸ್ತುತ ಗ್ರಂಥಾಲಯಗಳು ತಂತ್ರಜ್ಞಾನದ ನೆರವಿನಿಂದ ಡಿಜಿಟಲ್ ಸಂಪನ್ಮೂಲ ಕೇಂದ್ರಗಳಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಗುರಿ ಸಾಧನೆ ಮತ್ತು ಬೌದ್ಧಿಕ ಜ್ಞಾನಾರ್ಜನೆಗೆ ಮುಕ್ತ ಅವಕಾಶ ನೀಡುತ್ತವೆ. ಓದುವ ಹವ್ಯಾಸ, ಜ್ಞಾನ ಹಂಚಿಕೆಗೆ ಸಹಾಯಕವಾಗಿವೆ ಎಂದು ಎಂದು ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಅಧ್ಯಕ್ಷ ಡಾ. ಎಸ್.ಎಲ್. ಕಾಡದೇವರಮಠ ಎಂದರು.



ಕಲಬುರಗಿ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಭಾಂಗಣದಲ್ಲಿ ಆಯೋಜಿಸಿದ ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಜಿಲ್ಲಾ ಘಟಕದ ಉದ್ಘಾಟನೆ, ಕಲ್ಯಾಣ ಕರ್ನಾಟಕ ಗ್ರಂಥಪಾಲಕರ ಸಂಘಕ್ಕೆ ಆಯ್ಕೆಯಾಗಿರುವ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ಪ್ರಮಾಣವಚನ ಬೋಧನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿಶ್ವವಿದ್ಯಾಲಯ, ಕಾಲೇಜು ಶೈಕ್ಷಣಿಕ ಬೆಳವಣಿಗೆಗೆ ಗ್ರಂಥಾಲಯಗಳು ಮಹತ್ವದ ಪಾತ್ರವಹಿಸುತ್ತಿವೆ.

ಗ್ರಂಥಾಲಯ ಮತ್ತು ಗ್ರಂಥಪಾಲಕರ ಹುದ್ದೆ ಅಗತ್ಯತೆಯನ್ನು ಸರ್ಕಾರ ಮನಗಾಣ ಬೇಕಿದೆ. ಪ್ರಸ್ತುತ ಸುಮಾರು 2000 ಪದವಿ ಪೂರ್ವ ಕಾಲೇಜುಗಳ ಪೈಕಿ ಕೇವಲ 90 ಕಾಲೇಜುಗಳಲ್ಲಿ ಮಾತ್ರ ಗ್ರಂಥಪಾಲಕ ರಿದ್ದಾರೆ. 2010 ರಿಂದಲೂ ಪದವಿ ಕಾಲೇಜುಗಳಲ್ಲಿರುವ ಗ್ರಂಥ ಪಾಲಕರ ಹುದ್ದೆಗಳನ್ನು ಸರ್ಕಾರ ಇದುವರೆಗೂ ಭರ್ತಿ ಮಾಡಿಲ್ಲ. ರಾಜ್ಯದ ಶಾಲಾ ಕಾಲೇಜು, ವಿಶ್ವ ವಿದ್ಯಾಲಯ ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಸರ್ಕಾರಕ್ಕೆ ಗ್ರಂಥಪಾಲಕರ ಸಂಘದಿಂದ ಈಗಾಗಲೇ ಮನವಿ ಸಲ್ಲಿಸಲಾಗಿದೆ ಎಂದರು.

ವಿಶ್ವವಿದ್ಯಾಲಯದ ಗ್ರಂಥಪಾಲಕ ಡಾ. ಸುರೇಶ್ ಜಂಗೆ ಮಾತನಾಡಿ, ಗ್ರಂಥಾಲಯ ವೃತ್ತಿಪರರು ಗ್ರಂಥಾಲಯ ಕ್ಷೇತ್ರದ ನಾವೀನ್ಯತೆ ಮತ್ತು ತಂತ್ರಜ್ಞಾನ ಕೌಶಲ್ಯವನ್ನು ರೂಢಿಸಿಕೊಂಡು ವಿದ್ಯಾರ್ಥಿಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕು. ಹೊಸ ಹೊಸ ವಿಷಯ, ಸಂಶೋಧನಾ ಕ್ಷೇತ್ರದ ಪ್ರಕಟಿತ ನಿಯತಕಾಲಿಕೆ, ಆನ್‌ಲೈನ್ ಸೇವೆ ಮೂಲಕ ಓದುಗರ ಮತ್ತು ವಿದ್ಯಾರ್ಥಿ ಗಳನ್ನು ಅಧ್ಯಯನದ ಕಡೆಗೆ ಒಲವು ಮೂಡಿಸಬೇಕೆಂದು ಗ್ರಂಥಾಲಯದ ಮಹತ್ವವನ್ನು ವಿವರಿಸಿದರು.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ. ಬಿ. ಪಾಟೀಲ್ ಮಾತನಾಡಿ ಗ್ರಂಥಾಲಯ ಮತ್ತು ಗ್ರಂಥಪಾಲಕರ ವೈಯಕ್ತಿಕ ಜವಾಬ್ದಾರಿಗಳು, ಗುರಿ ಮತ್ತು ಸಾಧನೆ, ಕಾರ್ಯನಿರತ ಗ್ರಂಥಪಾಲಕರ ಕೌಶಲ್ಯಾಭಿವೃದ್ಧಿಗಾಗಿ ಜಿಲ್ಲಾ ಹಾಗೂ ತಾಲ್ಲೂಕುಮಟ್ಟದ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳನ್ನು ಆಯೋ ಜಿಸಬೇಕೆಂದು ಸಲಹೆ ನೀಡಿ ಅಗತ್ಯ ಬೆಂಬಲ ನೀಡುವುದಾಗಿ ಭರವಸೆ ನೀಡಿದರು ಮತ್ತು ಡಾ. ಪರಮಾನಂದ ಹಾಗದಗಿ ಗ್ರಂಥಪಾಲಕರ ಸಂಘ ಬೆಳೆದುಬಂದ ದಾರಿ ಮತ್ತು ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸಿದರು.

# ಕಲಬುರಗಿ ಜಿಲ್ಲೆಯಲ್ಲಿ ಹೆಚ್ಚಾಯ್ತು ಹದಿಹರೆಯದವರ ಗರ್ಭಧಾರಣೆ: ವರ್ಷದಲ್ಲಿ 61 ಪ್ರಕರಣ ದಾಖಲು

**ಕಲಬುರಗಿ, ಏ. 26:** ಇತ್ತೀಚೆಗೆ ರಾಜ್ಯದಲ್ಲಿ ಹದಿಹರೆಯದ ಗರ್ಭಧಾರಣೆ ಪ್ರಕರಣಗಳು ಹೆಚ್ಚಾಗಿರುವುದು ಆತಂಕ ಮೂಡಿಸಿದೆ. ಏಪ್ರಿಲ್ 2025 ರಿಂದ ಮಾರ್ಚ್ 2026 ರವರೆಗೆ ಒಂದು ವರ್ಷದಲ್ಲಿ ಬರೋಬ್ಬರಿ 61 ಕೇಸ್‌ಗಳು ಕಲಬುರಗಿ ಜಿಲ್ಲೆಯದ್ದೇ ಆಗಿರವೆ ಎಂದು ಏಪ್ರಿಲ್ 13ರ ಆರ್‌ಸಿಎಚ್ ಪೋರ್ಟಲ್ ದತ್ತಾಂಶದಿಂದ ತಿಳಿದುಬಂದಿದೆ.

ಯಾವ ತಾಲೂಕಿನಲ್ಲಿ ಎಷ್ಟು ಪ್ರಕರಣ? : ಜಿಲ್ಲೆಯ ಆಳಂದ ತಾಲೂಕಿನಲ್ಲಿ ಅತಿ ಹೆಚ್ಚು ಬಾಲಕಿಯರಲ್ಲಿ ಹದಿಹರೆಯದ ಗರ್ಭಧಾರಣೆ ವರದಿಯಾಗಿದ್ದು, 14 ಪ್ರಕರಣಗಳು ಬೆಳಕಿಗೆ ಬಂದಿವೆ. ಅಫಜಲಪುರ ಹಾಗೂ ಚಿತ್ತಾಪುರ ತಾಲೂಕುಗಳಲ್ಲಿ ತಲಾ 11 ಪ್ರಕರಣಗಳು ದಾಖಲಾಗಿದ್ದರೆ, ಸೇಡಂನಲ್ಲಿ 8, ಕಲಬುರಗಿ ಗ್ರಾಮೀಣ ಭಾಗದಲ್ಲಿ 7, ಜೇವರ್ಗಿಯಲ್ಲಿ 6 ಹಾಗೂ ಚಿಂಚೋಳಿ ಮತ್ತು ಕಲಬುರಗಿ ನಗರ ಪ್ರದೇಶಗಳಲ್ಲಿ ತಲಾ 2 ಪ್ರಕರಣಗಳು ದಾಖಲಾಗಿವೆ ಎಂದು ದತ್ತಾಂಶ ದೃಢಪಡಿಸಿದೆ.

ವಯಸ್ಸಿನ ಆಧಾರದಲ್ಲಿ ನೋಡಿದರೆ, ಆಳಂದ ತಾಲೂಕಿನಲ್ಲಿ ಕೇವಲ 14 ವರ್ಷದ ಬಾಲಕಿಯೊಬ್ಬಳು ಗರ್ಭಿಣಿಯಾಗಿದ್ದರೆ, ಉಳಿದೆಡೆ ಒಟ್ಟಾರೆಯಾಗಿ 15 ವರ್ಷ ವಯಸ್ಸಿನ ಇಬ್ಬರು, 16 ವರ್ಷ ವಯಸ್ಸಿನಲ್ಲಿ 6 ಮಂದಿ ಗರ್ಭಿಣಿಯರಾಗಿದ್ದಾರೆ. ಬಹುಪಾಲು ಅಂದರೆ 52 ಬಾಲಕಿಯರು 17ನೇ ವಯಸ್ಸಿನಲ್ಲಿ ಗರ್ಭಿಣಿಯಾಗಿದ್ದಾರೆ ಎಂದು ಅಂಕಿ–ಅಂಶ ಹೇಳುತ್ತದೆ.

**ದುಷ್ಪರಿಣಾಮಗಳೇನು:** 10 ರಿಂದ 19 ವರ್ಷದೊಳಗಿನವರ ಗರ್ಭಧಾರಣೆಯನ್ನು ಟೀನೇಜ್ ಪ್ರೆಗ್ನೆನ್ಸಿ ಎಂದು ಪರಿಗಣಿಸಲಾಗುತ್ತದೆ. ಇವು ಆರೋಗ್ಯದ ದೃಷ್ಟಿಯಿಂದ ಗಂಭೀರ ಸಮಸ್ಯೆಗಳನ್ನು ತಂದೊಡ್ಡುತ್ತವೆ. ಅವಧಿಪೂರ್ವ ಶಿಶು ಜನನ, ಹುಟ್ಟಿದ ಮಗು ಕಡಿಮೆ ತೂಕವಿರುವುದು ಮತ್ತು ಹೆಚ್ಚಿನ ಶಿಶುಗಳ ಮರಣ ಪ್ರಮಾಣ ಸೇರಿದಂತೆ ಹದಿಹರೆಯದ



ಗರ್ಭಧಾರಣೆಯು ಹೆಚ್ಚಿನ ತಾಯಂದಿರ/ನವಜಾತ ಶಿಶುಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ. ಇದರಿಂದಾಗಿ ಬಾಲಕಿಯರ ವಿದ್ಯಾಭ್ಯಾಸ ಕುಂಠಿತವಾಗುವುದಲ್ಲದೆ ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳು ಮತ್ತು ತೀವ್ರ ಆರೋಗ್ಯ ತೊಡಕುಗಳಿಗೆ ಕಾರಣವಾಗುತ್ತದೆ. ಹದಿಹರೆಯದ ತಾಯಂದಿರು ರಕ್ತಹೀನತೆ, ಪ್ರಿಕ್ಲಾಂಪ್ಸಿಯಾ (ಗರ್ಭಾವಸ್ಥೆಯ 20 ವಾರಗಳ ನಂತರ ಅಥವಾ ಹೆರಿಗೆಯ ನಂತರ ಕಂಡುಬರುವ ಅಧಿಕ ರಕ್ತದೊತ್ತಡದ ಗಂಭೀರ ಸಮಸ್ಯೆ) ಮತ್ತು ಅಕಾಲಿಕ ಜನನಗಳ ಅಪಾಯಗಳನ್ನು ಸಹ ಎದುರಿಸುತ್ತಾರೆ.

ಈ ಒಂದು ವರ್ಷದ ಅವಧಿಯಲ್ಲಿ 14ರಿಂದ 17 ವರ್ಷದೊಳಗಿನ 61 ಪ್ರಕರಣಗಳು ದಾಖಲಾಗಿರುವುದು, ಜಿಲ್ಲೆಯಲ್ಲಿ ಬಾಲ್ಯವಿವಾಹಗಳ ಪ್ರಮಾಣವೂ ಹೆಚ್ಚಿರಬಹುದು ಎಂಬ ಅನುಮಾನ ಹುಟ್ಟಿಸಿದೆ. ಹೀಗಾಗಿ ಅಂಗನವಾಡಿ ಕಾರ್ಯಕರ್ತರು ಹಾಗೂ ಶಾಲಾ ಶಿಕ್ಷಕರು, ವಿಶೇಷವಾಗಿ ಹೈಸ್ಕೂಲ್ ಶಿಕ್ಷಕರು ಜಾಗೃತಿಯಿಂದ ಕಾರ್ಯ ನಿರ್ವಹಿಸಿ ಬಾಲ್ಯವಿವಾಹಗಳನ್ನು ತಡೆಯಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯ ಕೇಳಿಬಂದಿದೆ.

# ಅಕ್ರಮ ಸಾಗಣೆ ತಡೆದು 23ಕ್ಕೂ ಅಧಿಕ ಜಾನುವಾರು ರಕ್ಷಿಸಿದ ಶರಣು ಸಲಗರ



**ಬಸವಕಲ್ಯಾಣ (ಬೀದರ್), ಏ.26:** ಜಿಲ್ಲೆಯಲ್ಲಿ ಅಕ್ರಮ ಜಾನುವಾರು ಸಾಗಾಟ ದಂಧೆ ಮತ್ತೆ ಎಗ್ಗಿಲ್ಲದೆ ಸಾಗುತ್ತಿದ್ದು, ಸ್ವತಃ ಶಾಸಕರೊಬ್ಬರು ರಸ್ತೆಗಿಳಿದು ದಂಧೆಕೋರರಿಗೆ ಬಿಸಿ ಮುಟ್ಟಿಸಿದ ಘಟನೆ ಭಾನುವಾರ ನಡೆದಿದೆ.

ಬಸವಕಲ್ಯಾಣ ಕ್ಷೇತ್ರದ ಬಿಜೆಪಿ ಶಾಸಕ ಶರಣು ಸಲಗರ ಅವರು ಮೂರು ಗೂಡ್ಸ್ ವಾಹನಗಳ ಮೇಲೆ ದಿಢೀರ್ ದಾಳಿ ನಡೆಸಿ, ಅಮಾನವೀಯವಾಗಿ ಕಸಾಯಿಖಾನೆಗೆ ಸಾಗಿಸಲಾಗುತ್ತಿದ್ದ 23ಕ್ಕೂ ಅಧಿಕ ಜಾನುವಾರುಗಳನ್ನು ರಕ್ಷಿಸಿದ್ದಾರೆ. ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮಂಠಾಳ ಗ್ರಾಮದ ಚಿಟ್ಟಾ ಕ್ರಾಸ್ ಬಳಿ ಇಂದು ಬೆಳಿಗ್ಗೆ ಈ ಘಟನೆ ನಡೆದಿದೆ.

**ಚಾಲಕನಿಗೆ ತರಾಟೆ:** ಮೂರು ವಾಹನಗಳಲ್ಲಿ ಜಾನುವಾರುಗಳನ್ನು ಅಕ್ರಮವಾಗಿ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಶಾಸಕ ಶರಣು ಸಲಗರ್ ಅವರು ಸ್ಥಳಕ್ಕೆ ಭೇಟಿ ನೀಡಿ ವಾಹನಗಳನ್ನು ತಡೆದರು. ಈ ವೇಳೆ ವಾಹನಗಳನ್ನು ಪರಿಶೀಲಿಸಿದಾಗ ಅಲ್ಲಿನ ದೃಶ್ಯ ಅತ್ಯಂತ ಮನಕಲಕುವಂತಿತ್ತು. ಆಕಳುಗಳು, ಕರುಗಳು, ಎತ್ತುಗಳು ಹಾಗೂ ಎಮ್ಮೆಕರುಗಳನ್ನು ಯಾವುದೇ ಕನಿಷ್ಠ ನಿಯಮಗಳನ್ನು ಪಾಲಿಸದೆ, ಉಸಿರುಗಟ್ಟುವಂತೆ ವಾಹನಗಳಲ್ಲಿ ತುರುಕಲಾಗಿತ್ತು. ಕೇವಲ ಒಂದು ವಾಹನದಲ್ಲಿ ಮಿತಿಮೀರಿದ ಅಂದರೆ ಆರು ದೊಡ್ಡ ಜಾನುವಾರುಗಳನ್ನು ತುಂಬಿದ್ದರಿಂದ, ಗಾಳಿ ಸಿಗದೆ ಎತ್ತುವೊಂದು ವಾಹನದಲ್ಲೇ ಮೃತಪಟಟಿತ್ತು. ಇದನ್ನು ಕಂಡ ಶಾಸಕರು ಆಕ್ರೋಶ ವ್ಯಕ್ತಪಡಿಸಿದರು. ಜಾನುವಾರುಗಳ ಮೇಲಿನ ಕ್ರೌರ್ಯ ಕಂಡ ಶಾಸಕ ಸಲಗರ ಚಾಲಕರ ಮೇಲೆ ಕೆಂಡಾಮಂಡಲ ರಾದರು. "ಹೊಟ್ಟೆ ತುಂಬಿಸಿಕೊಳ್ಳಲು ಬೇರೆ ಕೆಲಸ ಮಾಡಿ, ಈ ರೀತಿ ಮೂಕ ಪ್ರಾಣಿಗಳನ್ನು ಕೊಲ್ಲುವುದು ಎಷ್ಟು ಸರಿ. ನಿಮ್ಮ ಹೆಂಡತಿ, ಮಕ್ಕಳನ್ನು ಇದೇ ರೀತಿ ಅಮಾನವೀಯವಾಗಿ ವಾಹನದಲ್ಲಿ ತುಂಬಿ ಸಾಗಿಸ್ತೀರಾ. ಪ್ರಾಣಿಗಳ ಮೇಲೆ ಯಾಕಿಷ್ಟು ಕ್ರೌರ್ಯ ಎಂದು ಚಾಲಕರನ್ನು ತರಾಟೆಗೆ ತೆಗೆದುಕೊಂಡರು. ರಾಜ್ಯ ಸರ್ಕಾರದ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದಲೇ ಇಂತಹ ಅಕ್ರಮ ದಂಧೆಕೋರರಿಗೆ ಲೈಸೆನ್ಸ್ ಸಿಕ್ಕಂತಾಗಿದೆ. ಅಧಿಕಾರಿಗಳು ಇತ್ತ ಗಮನ ಹರಿಸುತ್ತಿಲ್ಲ ಎಂದು ದೂರಿದರು.

ವಿಷಯ ತಿಳಿಯುತ್ತಿದ್ದಂತೆಯೇ ಮಂಠಾಳ ಪೊಲೀಸ್ ಠಾಣೆಯ ಪಿಎಸ್ಐ ಸುವರ್ಣ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಶಾಸಕ ಶರಣು ಸಲಗರ್ ಅವರು ಅಕ್ರಮ ದಂಧೆಕೋರರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಅಧಿಕೃತ ದೂರು ದಾಖಲಿಸಿದ್ದಾರೆ. ರಕ್ಷಿಸಲಾದ 23 ಜಾನುವಾರುಗಳನ್ನು ತಕ್ಷಣವೇ ಹತ್ತಿರದ ಗೋಶಾಲೆಗೆ ರವಾನಿಸಲು ಕ್ರಮ ಕೈಗೊಳ್ಳಲಾಗಿದೆ. ಪೊಲೀಸರು ವಾಹನಗಳನ್ನು ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿಸಿದ್ದಾರೆ.ಬೀದರ್ ಜಿಲ್ಲೆಯ ಗಡಿ ಭಾಗಗಳಲ್ಲಿ ಇಂತಹ ಅಕ್ರಮ ಸಾಗಾಟ ನಿರಂತರವಾಗಿ ನಡೆಯುತ್ತಿದ್ದು, ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ಅಮೃತ ಭಾರತ ಯೋಜನೆಯಡಿ ನವೀಕೃತ ರೈಲ್ವೆ ನಿಲ್ದಾಣ ಉದ್ಘಾಟನೆಗೆ ಸಜ್ಜು




**ಬೀದರ್, ಏ. 26:** ಕೇಂದ್ರದ ಅಮೃತ ಭಾರತ ನಿಲ್ದಾಣ ಯೋಜನೆಯಡಿ 24.35 ಕೋಟಿ ರೂ., ವೆಚ್ಚದಲ್ಲಿ ಬೀದರ್ ರೈಲ್ವೆ ನಿಲ್ದಾಣಕ್ಕೆ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ. ಸದ್ಯಕ್ಕೆ ಬಹುತೇಕ ಕಾಮಗಾರಿ ಪೂರ್ಣಗೊಂಡಿದ್ದು, ಈ ಮಾಶಾಂತ್ಯದೊಳಗೆ ಪೂರ್ಣಗೊಂಡು ಜನ ಸೇವೆಗೆ ಸಜ್ಜಾಗಲಿದೆ.

ಲಿಫ್ಟ್‌ಗಳು, ನಿರ್ಗಮನ ಸಭಾಂಗಣ, ಪಾರ್ಕಿಂಗ್ ಏರಿಯಾ, ಫುಟ್ ಓವರ್ ಬ್ರಿಡ್ಜ್, ಕವರ್ ಓವರ್ ಪ್ಲಾಟ್‌ಫಾರ್ಮ್, ಪ್ಲಾಟ್ ಫಾರ್ಮ್ ಸರ್ಫೇಸಿಂಗ್, ಎಸ್ಕಲೇಟರ್, ವೇಟಿಂಗ್ ಹಾಲ್, ಶೌಚಾಲಯ ನಿರ್ಮಾಣ, ಪ್ಲಾಟ್ ಫಾರ್ಮ್‌ಗಳ ಅಭಿವೃದ್ಧಿ ಸೇರಿ ನಾನಾ ಕಾಮಗಾರಿಗಳಲ್ಲಿ ಕೆಲವು ಪೂರ್ಣಗೊಂಡಿವೆ. ಇನ್ನೂ ಕೆಲವು ಕಾಮಗಾರಿ ಭರದಿಂದ ಸಾಗಿವೆ.

ನಿರ್ಗಮನ ಸಭಾಂಗಣದ (ಡಿಪಾರ್ಚರ್) ಕಾಮಗಾರಿಯು ಶೇ.90ರಷ್ಟು ಮುಗಿದಿದ್ದು, ಮಾ.31ಕ್ಕೆ ಸಂಪೂರ್ಣ ಕೆಲಸ ಮುಗಿಯಲಿದೆ ಎಂದು ಸಿಕಂದರಾಬಾದ್ ರೈಲ್ವೆಯ ಬೀದರ್‌ನ ಸಹಾಯಕ ಎಂಜಿನಿಯರ್ ಹೇಳುತ್ತಾರೆ. ಹಳೆಯ ಕಟ್ಟಡದ ಕಾಮಗಾರಿ ಮುಗಿದಿದೆ. ದ್ವಿಚಕ್ರ ಹಾಗೂ ವಾಹನಗಳ ಸರ್ಕ್ಯುಲೇಟಿಂಗ್ ಏರಿಯಾ ಕಾಮಗಾರಿ ಇನ್ನೂ ಚಾಲ್ತಿಯಲ್ಲಿದೆ.

ಎರಡೂ ಕಡೆಯ ಪಾರ್ಕಿಂಗ್ ಏರಿಯಾ ಕೆಲಸ ಮುಗಿದಿದೆ. ಸೇತುವೆ ಮೇಲಿಂದ ನಡೆದುಕೊಂಡು ಹೋಗುವ ಕಾಮಗಾರಿ (ಫೂಟ್‌ಓವರ್ ಬ್ರಿಡ್ಜ್) ಯಲ್ಲಿ ಎರಡೂ ಕಡೆಯ ಗ್ಯಾಂಗ್‌ವೇ ಕೆಲಸ ಮುಗಿದಿದೆ. ಗ್ರಾನೈಟ್ ಹಾಸುವ ಕೆಲಸವೂ ಆಗಿದೆ. ಯಾರ್ಂಪ್‌ನ ತಯಾರಿಕೆ ಪೂರ್ಣಗೊಂಡಿದ್ದು, ಹ್ಯಾಂಡ್ ರೈಲು ನಿರ್ಮಾಣ ಕೆಲಸವೂ ಸಂಪೂರ್ಣ ಮುಗಿದಿದೆ. ಎಸ್ಕಲೇಟರ್ ಅಳವಡಿಕೆ ಕಾರ್ಯವೂ ಈಗಾಗಲೇ ಆಗಿದ್ದು, ಪ್ಲಾಟ್ ಫಾರ್ಮ್ ಮತ್ತು 2 ಎರಡೂ ಕಡೆಗಳಲ್ಲಿ ಲಿಫ್ಟ್ ಅಳವಡಿಕೆ ಕಾರ್ಯವೂ ಮುಗಿದಿದೆ.

ಎರಡೂ ಪ್ಲಾಟ್ ಫಾರ್ಮ್‌ಗಳಲ್ಲಿ ಕವರ್ ಓವರ್ ಪ್ಲಾಟ್‌ಫಾರ್ಮ್ (ಸಿಒಪಿ) ಕೆಲಸ ಮುಗಿದಿದ್ದು, ಪ್ಲಾಟ್ ಫಾರ್ಮ್ ಸರ್ಫೇಸಿಂಗ್ ಕೆಲಸವು ಸಹ ಎರಡೂ ಪ್ಲಾಟ್ ಫಾರ್ಮ್‌ಗಳಲ್ಲಿ ಆಗಿದೆ. ಇದರಲ್ಲಿ ಗ್ರಾನೈಟ್ ಅಳವಡಿಕೆ, ವ್ಯಾಕ್ಯೂಮ್ ಡ್ಯೂಟರೇಟೆಡ್ ಫ್ಲೋಲಾರ್ (ವಿಡಿಎಫ್) ಕಾಂಕ್ರಿ?ಟ್ ಕೆಲಸ ಹಾಗೂ ಪಿಸಿಸಿ ಕಾಮಗಾರಿಗಳು ಸೇರಿವೆ. 1 ಮತ್ತು 2ನೇ ಪ್ಲಾಟ್‌ಫಾರ್ಮ್ ಗಳಲ್ಲಿ ಲಿಫ್ಟ್ ಕೆಲಸ ನಡೆಯುತ್ತಿದ್ದು, ಪ್ಲಾಟ್ ಫಾರ್ಮ್ 1 ರಲ್ಲಿ ಲಿಫ್ಟ್ ಅಳವಡಿಕೆ ಕಾರ್ಯ ಪೂರ್ಣ ಮುಗಿದಿದೆ. ಎರಡೂ ಪ್ಲಾಟ್ ಫಾರ್ಮ್ ಗಳಲ್ಲಿ ಎಸ್ಕಲೇಟರ್ ಅಳವಡಿಕೆ, ಪರೀಕ್ಷೆ ಕಾರ್ಯ ಮುಗಿದಿದ್ದು, ಬಳಕೆಗೆ ಸಿದ್ಧವಾಗಿವೆ. ಪ್ರಯಾಣಿಕರು ಕಾಯುವ ಸಭಾಂಗಣ (ವೇಟಿಂಗ್ ಹಾಲ್) ಕಾಮಗಾರಿ ಮುಗಿದಿದ್ದು, ಸುಣ್ಣ ಬಣ್ಣ ಬಳಿದು ಸಜ್ಜುಗೊಳಿಸಲಾಗಿದೆ. ಎರಡು ಶೌಚಾಲಯಗಳ ಪೈಕಿ ಒಂದು ಶೌಚಾಲಯದ ಕಾಮಗಾರಿ ಮುಗಿದಿದ್ದು, ಮತ್ತೊಂದು ಶೌಚಾಲಯದ ಕೆಲಸ ಅಂತಿಮ ಹಂತದಲ್ಲಿದೆ. 2 ಹಾಗೂ 3ನೇ ಪ್ಲಾಟ್ ಫಾರ್ಮ್‌ಗಳ ಉದ್ದವನ್ನು 72 ಮೀಟರ್‌ಗಳಿಗೆ ಹೆಚ್ಚಿಸುವ ಕೆಲಸ ಮುಗಿದಿದ್ದು, ಫ್ಲೋರಿಂಗ್ ಕಾಂಕ್ರಿ?ಟ್ ಕೆಲಸ ಮಾತ್ರ ಬಾಕಿ ಉಳಿದಿದೆ.

ಬೀದರ್‌ನ ಅತ್ಯಾಧುನಿಕ ಸೌಲಭ್ಯಗಳುಳ್ಳ ರೈಲ್ವೆ ನಿಲ್ದಾಣದ ಕಾಮಗಾರಿ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಂಡು, ಏಪ್ರಿಲ್‌ನಲ್ಲಿ ಉದ್ಘಾಟನೆಗೆ ಸಿದ್ಧವಾಗಲಿದೆ ಎಂದು ಫೆ.16ರಂದು ಬೀದರ್‌ನ ಜಿಪಂನಲ್ಲಿ ನಡೆದ ದಿಶಾ ಸಮಿತಿ ಸಭೆಯಲ್ಲಿ ರೈಲ್ವೆ ಇಲಾಖೆಯ ಅಧಿಕಾರಿಗಳು ಸಂಸದ ಸಾಗರ್ ಖಂಡ್ರೆ ಅವರಿಗೆ ಮಾಹಿತಿ ನೀಡಿದ್ದಾರೆ. ಇನ್ನು ಅಲ್ಪ ಸ್ವಲ್ಪ ಕೆಲಸ ಉಳಿದಿದ್ದು, ಭರದ ಕಾಮಗಾರಿ ನಡೆಯುತ್ತಿದೆ.

**ಸಾಂಪ್ರದಾಯಿಕ ಕಮಾನು ನಿರ್ಮಾಣ:** ಬೀದರ್ ರೈಲ್ವೆ ನಿಲ್ದಾಣದ ಪ್ರವೇಶ ದ್ವಾರದಲ್ಲಿ ಬೃಹತ್ ಗಾತ್ರದ ಸಾಂಪ್ರದಾಯಿಕ ಕಮಾನು ನಿರ್ಮಿಸಲಾಗುತ್ತಿದ್ದು, ಎಲ್ಲರ ಗಮನಸೆಳೆಯಲಿದೆ. ಇದರ ಕೆಲಸ ನಡೆಯುತ್ತಿದ್ದು, ಕಬ್ಬಿಣದ ಪ್ರವೇಶದ್ವಾರ ಸಿದ್ಧವಾಗುತ್ತಿದೆ. ಜತೆಗೆ, ರೈಲ್ವೆ ನಿಲ್ದಾಣವು ಸಂಪೂರ್ಣ ಹೊಸತಾಗಿ ಬದಲಾಗುತ್ತಿದ್ದು, ಪ್ರಯಾಣಿಕರಿಗೆ ಮೂಲಸೌಕರ್ಯ ಲಭಿಸುವ ನಿರೀಕ್ಷೆಯಿದೆ.

### ವರದಿ ಕೇಳಿದ ಸಂಸದ ಖಂಡ್ರೆ:

ಬೀದರ್ ರೈಲ್ವೆ ನಿಲ್ದಾಣ ಕಾಮಗಾರಿಗೆ 25 ಕೋಟಿ ರೂ. ಅನುದಾನ ಮಂಜೂರಾಗಿ, ಬಿಡುಗಡೆಯಾಗಿದೆ. ಆದರೆ, 15 ಕೋಟಿ ರೂ. ಯೋಜನಾ ವೆಚ್ಚ ಏರಿಕೆ ಮಾಡಿ 40 ಕೋಟಿಗೆ ಪರಿಷ್ಕರಿಸಲು ಸಿಕಂದ್ರಾಬಾದ್ ರೈಲ್ವೆ ವಿಭಾಗವು ನಿರ್ಧರಿಸಿದೆ. ಯಾರ ಅನುಮತಿ ಪಡೆದು ಹಾಗೂ ಯಾತಕ್ಕಾಗಿ ಪರಿಷ್ಕರಿಸಲಾಗಿದೆ. ಯೋಜನೆಯ ವಿನ್ಯಾಸ ಬದಲಾವಣೆ ಮಾಡಿದ್ದು, ಯಾರು ಎಂಬ ವರದಿ ಕಾಲಮಿತಿಯೊಳಗೆ ತಮಗೆ ಸಲ್ಲಿಸಬೇಕೆಂದು ಸಂಸದ ಸಾಗರ ಖಂಡ್ರೆ ರೈಲ್ವೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.




"ಬಸವ ಜಯಂತಿ ಮಹೋತ್ಸವ"ದ ಪ್ರಯುಕ್ತ ಭಾನುವಾರ ಬೆಳಗಾವಿಯ ರಾಣಿ ಚನ್ನಮ್ಮ ವೃತ್ತದಿಂದ ಭವ್ಯ ಮೆರವಣಿಗೆ ನಡೆಸಲಾಯಿತು. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಸಂಸದ ಜಗದೀಶ್ ಶೆಟ್ಟರ್ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

# ಬಸವನ ದೃಷ್ಟಿಯಲ್ಲಿ ಕಾಯಕ, ದಾಸೋಹವೇ ಭಕ್ತಿ

**ಬೀದರ್, ಏ. 26:** ಬಸವಣ್ಣನವರ ದೃಷ್ಟಿಯಲ್ಲಿ ಕಾಯಕ ಮತ್ತು ದಾಸೋಹವೇ ನಿಜವಾದ ಭಕ್ತಿ. ಕಾಯಕದ ಕಲ್ಪನೆಯ ಮೂಲಕ ಬಸವಣ್ಣನವರು ಪ;ರತಿಯೊಬ್ಬರೂ ದುಡಿದು ತಿನ್ನಬೇಕು ಮತ್ತು ಎಲ್ಲರೂ ಕೆಲಸ ಮಾಡಬೇಕೆಂಬುದನ್ನು ವಚನಗಳ ಮೂಲಕ ಕಾಯಕವೇ ಕೈಲಾಸ ಎಂದು ಹೇಳಿದರು ಎಂದು ಸಾಹಿತಿ ಪ್ರೊ. ವೆಂಕಣ್ಣ ದೊಣ್ಣೇಗೌಡ ತಿಳಿಸಿದರು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಬಸವಣ್ಣನವರು ಯಾವುದೇ ಜಾತಿ ಧರ್ಮ ಲಿಂಗ ಬೇಧವಿಲ್ಲದೆ ಪ್ರತಿಯೊಬ್ಬರ ಕರಸ್ಥಲಕ್ಕೂ ಲಿಂಗವನ್ನು ನೀಡಿ ಶರಣರಾಗಿ ಮಾಡಿದರು ಬಸವ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಡಾ.ರಜನೀಶ ವಾಲಿ ಬಸವಣ್ಣನವರು ಕರ್ನಾಟಕದ ಸಾಂಸ್ಕೃತಿಕ ನಾಯಕರು. ಜಯಂತಿ ಮೂಲಕ ಹೊಸ ಪೀಳಿಗೆಗೆ ಅವರ ಆದರ್ಶಗಳನ್ನು ಪರಿಚಯಿಸಬೇಕಿದೆ ಎಂದರು.

## ವಾಸವಿ ಜಯಂತಿಯಲ್ಲಿ ಡೊಳ್ಳು ಬಾರಿಸಿದ ಮಾಜಿ ಶಾಸಕ ಸೋಮಶೇಖರ ರೆಡ್ಡಿ



**ಬಳ್ಳಾರಿ, ಏ.26:** ನಗರದಲ್ಲಿ ನಡೆದ ವಾಸವಿ ಜಯಂತಿಯ ಮೆರವಣಿಗೆಯಲ್ಲಿ ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ಪಾಲ್ಗೊಂಡು ಡೊಳ್ಳು ಬಾರಿಸುವ ಮೂಲಕ ನೆರೆದವರ ಗಮನ ಸೆಳೆದರು.

ಜೊತೆಗೆ ಡೊಳ್ಳಿನ ನಾದಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಉಳಿದವರನ್ನು ಹುರಿದುಂಬಿಸಿದರು.

## ನಿಯಂತ್ರಣ ತಪ್ಪಿ ಪಲ್ಟಿಯಾದ ಖಾಸಗಿ ಬಸ್, 20 ಜನರಿಗೆ ಗಾಯ

**ಬೆಳ್ತಂಗಡಿ, ಏ.26:** ಚಾಲಕನ ನಿಯಂತ್ರಣ ತಪ್ಪಿ ಖಾಸಗಿವೊಂದು ಬಸ್ ಪಲ್ಟಿಯಾಗಿ ಸುಮಾರು 20 ಜನರಿಗೆ ಗಾಯಗಳಾದ ಘಟನೆ ಚಾರ್ಮಾಡಿ ಘಾಟ್‌ನ 4ನೇ ತಿರುವಿನಲ್ಲಿ ಭಾನುವಾರ ನಡೆದಿದೆ. ಖಾಸಗಿ ಬಸ್ ಉಜಿರೆ ಕಡೆಯಿಂದ ಕೊಟ್ಟಿಗೆ ಹಾರದ ಕಡೆಗೆ ತೆರಳುತ್ತಿತ್ತು.

ಘಟನೆಯ ಪರಿಣಾಮ 20ಕ್ಕೂ ಅಧಿಕ ಮಂದಿಗೆ ಗಾಯವಾಗಿದ್ದು, ಇತರ ವಾಹನ ಸವಾರರ ನೆರವಿನೊಂದಿಗೆ ಗಾಯಗೊಂಡವರನ್ನು ಸ್ಥಳೀಯ ಹಾಗೂ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಆಂದ್ರ ಹಾಗೂ ತುಮಕೂರಿನ ಪಾವಗಡ ಮೂಲದವರು ಮದುವೆ ಕಾರ್ಯಕ್ರಮ ಮುಗಿಸಿ ಕೊಟ್ಟಿಗೆಹಾರ ಕಡೆಗೆ ತೆರಳುತ್ತಿದ್ದರು ಎನ್ನಲಾಗಿದೆ.

### ರಾಜ್ ಸ್ಮಾರಕ ಭೂಮಿ ಬಗ್ಗೆ ನಟ ಚೇತನ್ ವಿವಾದಾಸ್ಪದ ಹೇಳಿಕೆಗೆ ಖಂಡನೆ

# ಪ್ರಣವಾನಂದ ಶ್ರೀ ರಾಜಕುಮಾರ ಅಭಿಮಾನಿ ಬಳಗ ತೀವ್ರ ಆಕ್ರೋಶ, ದೂರು



**ಕಲಬುರಗಿ, ಏ.26** ವರನಟ ಡಾ. ರಾಜಕುಮಾರ್ ಅವರ ಸ್ಮಾರಕಕ್ಕೆ ಸರಕಾರ ನೀಡಿರುವ ಎರಡುವರೆ ಎಕರೆ ಭೂಮಿ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ ನಟ ಚೇತನ ಹಿಂಸಾ ವಿರುದ್ಧ ಈಡಿಗ ಗುರುಗಳಾದ ಡಾ. ಪ್ರಣವಾನಂದ ಶ್ರೀಗಳು ಮತ್ತು ಕಲಬುರಗಿ ರಾಜ ಕುಮಾರ್ ಅಭಿಮಾನಿಗಳ ಸಂಘ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ದೂರು ಸಲ್ಲಿಸಿ ಕೇಸು ದಾಖಲಿಸುವಂತೆ ಒತ್ತಾಯಿಸಿದೆ.

ಕಲಬುರ್ಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಎಸ್ಪಿ ಅಡ್ಡರು ಶ್ರೀನಿವಾಸಲು ಅವರಿಗೆ ಕಲಬುರಗಿ ಜಿಲ್ಲಾ ಚಿತ್ತಾಪುರ ಕರದಾಳ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಪ್ರಣವಾನಂದ ಶ್ರೀಗಳು ಮತ್ತು ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಾದ ರಾಘವೇಂದ್ರ ಕುಲಕರ್ಣಿ ನೇತೃತ್ವದ ನಿಯೋಗ ತೆರಳಿ ರಾಜಕುಮಾರ ಅವರ ಹುಟ್ಟು ಹಬ್ಬದ ದಿನ ನಟ ಚೇತನ್ ತಮ್ಮ ಎಕ್ಸ್ ಖಾತೆಯಲ್ಲಿ ವಿವಾದಾತ್ಮಕ ಹೇಳಿಕೆ ನೀಡಿ ಕನ್ನಡ ನಾಡಿನ ರಾಜ್ಯ ಅಭಿಮಾನಿಗಳ ಮನಸ್ಸಿಗೆ ನೋವುಂಟು ಮಾಡಿದ್ದಾರೆ ಅದಕ್ಕಾಗಿ ಶೀಘ್ರದಲ್ಲೇ ಅವರು ರಾಜಕುಮಾರ್ ಸಮಾಧಿ ಮುಂದೆ ನಿಂತು ಕ್ಷಮೆ ಕೇಳಬೇಕು ಇಲ್ಲವಾದಲ್ಲಿ ಅವರ ವಿರುದ್ಧ ಕೇಸು ದಾಖಲಿಸಿ ರಾಜ್ಯದಿಂದ ಗಡಿಪಾರು ಮಾಡಬೇಕು. ಚೇತನ ಅವರು ಕ್ಷಮೆ ಕೇಳದಿದ್ದರೆ ರಾಜ್ಯಾದ್ಯಂತ ರಾಜ್ ಅಭಿಮಾನಿಗಳು ಬೀದಿಗಿಳಿದು ಹೋರಾಟ ಮಾಡಲು ಹಿಂಜರಿಯುವುದಿಲ್ಲ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಡಾ ರಾಜಕುಮಾರ್ ಅವರು ಕನ್ನಡ ರತ್ನ ಮತ್ತು ದೇಶದ ಆಸ್ತಿ ಅಂತರ ವಿರುದ್ಧ ಚೇತನ್ ಪುಕ್ಕಟ್ಟೆ ಪ್ರಚಾರಕ್ಕಾಗಿ ಹೇಳಿಕೆ ನೀಡಿ ಕನ್ನಡಿಗರ ಮನ ನೋಯಿಸಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಈಡಿಗ ಸಮುದಾಯ ಸೇರಿದಂತೆ ಸಮಸ್ತ ಕನ್ನಡಿಗರು ಹೋರಾಟ ಮಾಡೋದು ಖಚಿತ ಎಂದು ಡಾ. ಪ್ರಣವಾನಂದ ಶ್ರೀಗಳು ಹೇಳಿದರು. ಡಾ ರಾಜ್ ವಿರುದ್ಧ ವಿವಾದಾ ತ್ಮಕ ಹೇಳಿಕೆ ನೀಡಿದ ಚೇತನ್ ವಿರುದ್ಧ ಕಲಬುರಗಿಯ ಸಮಸ್ತ ರಾಜ್ಯ ಅಭಿಮಾನಿಗಳು ಬೆಂಗಳೂರಿಗೆ ಧಾವಿಸಿ ಹೋರಾಟ ನಡೆಸಲು ಬೀದಿಗೆ ಇಳಿಯುದಾಗಿ ರಾಜಕುಮಾರ ಅಭಿಮಾನಿಗಳ ಸಂಘದ ಅಧ್ಯಕ್ಷರಾದ ರಾಘವೇಂದ್ರ ಕುಲಕರ್ಣಿ ಆಕ್ರೋಶ ವ್ಯಕ್ತಪಡಿಸಿದರು. ಎಸ್ ಪಿ ಅವರಿಗೆ ದೂರು ಸಲ್ಲಿಸಲು ತೆರಳಿದ ನಿಯೋಗದಲ್ಲಿ ಡಾಕ್ಟರ್ ರಾಜ ಅಭಿಮಾನಿಗಳ ಸಂಘದ ಗೌರವಾಧ್ಯಕ್ಷರು ಹಾಗೂ ಬ್ರಹ್ಮ ಶ್ರೀ ನಾರಾಯಣ ಗುರು ಶಕ್ತಿ ಪೀಠದ ಮಾಧ್ಯಮ ಸಂಚಾಲಕ ಡಾ. ಸದಾನಂದ ಪೆರ್ಲ, ಉದ್ಯಮಿ ಹಾಗೂ ಬಿಲ್ಲವ ಸಂಘದ ಕಲ್ಬುರ್ಗಿ ಜಿಲ್ಲಾ ಘಟಕದ ಮುಖಂಡರಾದ ಪ್ರವೀಣ್ ಜತ್ತನ್, ಈಡಿಗ ಸಮಾಜದ ಮುಂದಾಳು ಶಿವರಾಜ್ ಗುತ್ತೇದಾರ್ ಜೇವರ್ಗಿ, ಜುಬೇರ್ ಅನ್ಸಾರಿ ಕಿಶೋರ್ ಘಂಟಿ, ಚಂದಯ್ಯ ಮುಂತಾದವರು ಜೊತೆಗಿದ್ದರು.

**ಕಾನೂನು ತಜ್ಞರ ಜೊತೆ ಚರ್ಚಿಸಿ ಮುಖದ್ದಮೆ**

ಕಲಬುರಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅಡ್ಡರು ಶ್ರೀನಿವಾಸಲು ಅವರು ಮನವಿಯನ್ನು ಸ್ವೀಕರಿಸಿ ಕಾನೂನು ತಜ್ಞರ ಜೊತೆ ಕೂಡಲೇ ಚರ್ಚಿಸಿ ಮೊಕದ್ದಮೆ ದಾಖಲಿಸುವ ಕುರಿತು ನಿರ್ಧರಿಸುವುದಾಗಿ ಭರವಸೆ ನೀಡಿದರು

### ಮನ್‌ಕೀ ಬಾತ್‌ನಲ್ಲಿ ಪ್ರಧಾನಿ ಮೋದಿ ಉಲ್ಲೇಖ

# ಪ್ರಕೃತಿ ರಕ್ಷಣೆಯಲ್ಲಿ ಬೈಲುಕುಪ್ಪೆ ಟಿಬೆಟಿಯನ್ ಕ್ಯಾಂಪ್ ಪ್ರಯತ್ನ ಗಮನಾರ್ಹ



**ಮೈಸೂರು, ಏ.26:** ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು ಬೈಲುಕುಪ್ಪೆಯಲ್ಲಿರುವ ಟಿಬೆಟಿಯನ್ ಕ್ಯಾಂಪ್ (ವಸಾಹತು ಪ್ರದೇಶ) ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆದ 'ಮನ್ ಕೀ ಬಾತ್' ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿದ್ದಾರೆ.

'ಅಲ್ಲಿ ಪ್ರಕೃತಿ ಸಂರಕ್ಷಣೆ ನಿಟ್ಟಿನಲ್ಲಿ ನಡೆದಿರುವ ಪ್ರಯತ್ನಗಳು ಗಮನಾರ್ಹ ವಾಗಿವೆ' ಎಂದು ಶ್ಲಾಘಿಸಿದ್ದಾರೆ. ಬೌದ್ಧ ಸಂಪ್ರದಾಯವು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧವನ್ನು ಈ ಮಾಂಟೆಸರಿಯು (ಬೌದ್ಧವಿಹಾರ) ತೋರಿಸುತ್ತಿದೆ. ಭಗವಾನ್ ಬುದ್ಧನು ಮರದ ಕೆಳಗೆ ಜ್ಞಾನೋದಯ ಪಡೆದನು. ಪ್ರಕೃತಿ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಇದಕ್ಕೆ ಬೈಲುಕುಪ್ಪೆ ಯಲ್ಲಿರುವ ಟಿಬೆಟಿಯನ್ ಕ್ಯಾಂಪ್ ಉದಾಹರಣೆಯಾಗಿದೆ ಎಂದರು.

ಕರ್ನಾಟಕದ ಈ ಪ್ರದೇಶವು 100 ಎಕರೆಗಳಲ್ಲಿ ಹರಡಿದೆ. ಇದನ್ನು 700ಕ್ಕೂ ಹೆಚ್ಚು ಸ್ಥಳೀಯ ಪ್ರಭೇದದ ಮರಗಳನ್ನು ಸಂರಕ್ಷಿಸಿ, ನಳನಳಿಸುವ ಅರಣ್ಯವನ್ನಾಗಿ ಪರಿವರ್ತಿಸಲಾಗಿದೆ. ಧರ್ಮಗುರು ಸಮ್ಡೆನ್ಲಿಂಗ್ಪಾ ರಿನ್‌ಪೋಚೆ ಅವರ ಮಾರ್ಗದರ್ಶನದಲ್ಲಿ, ಬರಡಾಗಿದ್ದ ಭೂಮಿಯನ್ನು 100 ಎಕರೆ ಅರಣ್ಯ ಸಂರಕ್ಷಣಾ ವಲಯವಾಗಿ ನಿರ್ಮಾಣಗೊಂಡಿದೆ' ಎಂದು ಉಲ್ಲೇಖಿಸಿದ್ದಾರೆ.

ಇದು 1995ರಲ್ಲಿ ರಿನ್‌ಪೋಚೆ ಅವರು ಪರಿಸರ ಸಂರಕ್ಷಣೆ ಮತ್ತು ಪ್ರಕೃತಿ ಪುನರುಜ್ಜೀವನದ ಧ್ಯೇಯದೊಂದಿಗೆ ಸ್ಥಾಪಿಸಿದ ಬೋಧಿಸತ್ವ ಟ್ರಸ್ಟ್ ಅಡಿ ಕಾರ್ಯನಿರ್ವಹಿಸುತ್ತಿದೆ. ಈ ಟ್ರಸ್ಟ್ ನಳಂದ ಶಾಲೆಯನ್ನೂ ನಡೆಸುತ್ತಿದೆ.

ಇದು ಸನ್ಯಾಸಿಗಳಿಗೆ ಸುಸ್ಥಿರ ಜೀವನ ಪದ್ಧತಿಗಳಲ್ಲಿ ತರಬೇತಿಯ ಜೊತೆಗೆ ಶಿಕ್ಷಣವನ್ನೂ ಪಡೆಯುವ ಗುರುಕುಲ ಪದ್ಧತಿಯ ಸಂಸ್ಥೆಯಾಗಿದೆ. ಬುದ್ಧ ಪೂರ್ಣಿಮೆಯ ಶುಭಾಶಯಗಳನ್ನು ಸಲ್ಲಿಸಿರುವ ಪ್ರಧಾನಿ, 'ಭಗವಾನ್ ಗೌತಮ ಬುದ್ಧ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಸ್ತುತವಾಗಿದ್ದಾರೆ. ಇಂದು ಜಗತ್ತು ಕಾಣುತ್ತಿರುವ ಉದ್ವಿಗ್ನತೆ ಮತ್ತು ಸಂಘರ್ಷಗಳ ನಡುವೆ, ಬುದ್ಧನ ಶಾಂತಿ ಹಾಗೂ ಕರುಣೆಯ ಸಂದೇಶವು ಇನ್ನಷ್ಟು ಮಹತ್ವದ್ದಾಗಿದೆ' ಎಂದು ಹೇಳಿದ್ದಾರೆ.

**ಪ್ರವಾಸಿ ತಾಣ:** ಬೈಲುಕುಪ್ಪೆಯು ವಿಶ್ವದ ಅತಿದೊಡ್ಡ ಟಿಬೆಟಿಯನ್ ವಸಾಹತುಗಳಲ್ಲಿ ಒಂದಾಗಿದೆ. ಇದು ಆಕರ್ಷಕ ಬೌದ್ಧವಿಹಾರಗಳು, ಪ್ರಸಿದ್ಧ 'ಗೋಲ್ಡನ್ ಟೆಂಪಲ್' (ನಮ್ರೋಲಿಂಗ್ ವಿಹಾರ) ಹೊಂದಿದೆ. ಟಿಬೆಟಿಯನ್ ಸಂಸ್ಕೃತಿಯನ್ನು ಪರಿಚಯಿಸುವ ಕೇಂದ್ರವೂ ಹೌದು.

ಪ್ರಮುಖ ಪ್ರವಾಸಿ ತಾಣವೂ ಆಗಿದೆ. ಸ್ವಚ್ಛತೆ, ಶಿಸ್ತು ಮೊದಲಾದ ಕಾರಣಗಳಿಂದಲೂ ಈ ಪ್ರದೇಶ ಗಮನಸೆಳೆಯುತ್ತದೆ. ನಮ್ರೋಲಿಂಗ್ ವಿಹಾರದಲ್ಲಿ ಬುದ್ಧನ ಬೃಹತ್ ಬಂಗಾರದ ಪ್ರತಿಮೆಗಳು, ಸುಂದರವಾದ ವರ್ಣಚಿತ್ರಗಳು ಮತ್ತು ಪ್ರಾರ್ಥನಾ ಮಂದಿರಗಳಿವೆ. ಅಲ್ಲಿನ ಜನರು, ಅವರ ಸಾಂಪ್ರದಾಯಿಕ ಉಡುಪುಗಳು, ಆಹಾರ ಮತ್ತು ಶಾಪಿಂಗ್ ಕೇಂದ್ರಗಳು ಟಿಬೆಟ್ ದೇಶದ ವಾತಾವರಣದ ಅನುಭವ ನೀಡುತ್ತವೆ.

# ಚಿನ್ನದ ನಿಕ್ಷೇಪ ಪತ್ತೆಗೆ ಹೆಲಿಕಾಪ್ಟರ್ ಸಮೀಕ್ಷೆ ಹೊಸ ಕಾರ್ಖಾನೆ ಬರಬಹುದೆಂದು ಹೆದರಿದ ಜನ!



**ರಾಯಚೂರು, ಏ. 26:** ಭೂಗರ್ಭದ ಆಳದಲ್ಲಿರುವ ಖನಿಜ ಸಂಪತ್ತನ್ನು ವೈಜ್ಞಾನಿಕವಾಗಿ ಪತ್ತೆಹಚ್ಚುವ ಉದ್ದೇಶದಿಂದ ಕೇಂದ್ರ ಸರಕಾರ ಜಿಲ್ಲೆಯಲ್ಲಿ ಹೆಲಿಬೋರ್ನ್ ಜಿಯೋಫಿಸಿಕಲ್ ಸಮೀಕ್ಷೆ ಆರಂಭಿಸಿದೆ. ಭಾರತ ಸರಕಾರದ ಗಣಿ ಸಚಿವಾಲಯದ ಅಧೀನದಲ್ಲಿರುವ ಭಾರತೀಯ ಭೂವೈಜ್ಞಾನಿಕ ಸಮೀಕ್ಷೆ ನೇತೃತ್ವದಲ್ಲಿ ರಾಷ್ಟ್ರೀಯ ಮಟ್ಟದ ಪೈಲಟ್ ಯೋಜನೆ ನಡೆಯುತ್ತಿದೆ. ಆದರೆ ಹತ್ತಿರದಲ್ಲಿ ಹೆಲಿಕಾಪ್ಟರ್ ಹಾರಾಟ ಕಂಡ ಜನ, ಇಲ್ಲಿ ಹೊಸ ಕಾರ್ಖಾನೆ ಆರಂಭಕ್ಕೆ ಸ್ಥಳ ಪರಿಶೀಲನೆ ನಡೆಸುತ್ತಿರಬಹುದೆಂದು ಆತಂಕ ಪಟ್ಟಿದ್ದರು.

ಖನಿಜ ನಿಕ್ಷೇಪದ ಸಮೀಕ್ಷೆ ಭಾಗವಾಗಿ ಕಳೆದ ಹಲವು ದಿನಗಳಿಂದ ತಾಲೂಕಿನ ಮಲಿಯಾಬಾದ್ ಸುತ್ತಲಿನ ಪ್ರದೇಶದಲ್ಲಿ ಕಡಿಮೆ ಎತ್ತರದಲ್ಲಿ ಹೆಲಿಕಾಪ್ಟರ್ ಹಾರಾಟದ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ಭೂಗರ್ಭದ ಅಡಿಪಾಯದಲ್ಲಿರುವ ಖನಿಜಗಳ ಸಂಭಾವ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ. ಎ–125 ಮಾದರಿಯ ಹೆಲಿಕಾಪ್ಟರ್‌ನ್ನು ಸಮೀಕ್ಷೆಗೆ ಬಳಸಲಾಗುತ್ತಿದೆ. ಜಿಲ್ಲೆಯ ಕೆಲವು ಭಾಗಗಳನ್ನು 'ಬ್ಲಾಕ್ ಎಚ್2–3' ಎಂದು ಗುರುತಿಸಿ ಸರ್ವೆ ಮಾಡಲಾಗುತ್ತಿದೆ. ಹೆಲಿಕಾಪ್ಟರ್ ಟೇಕ್ ಆಫ್, ಲ್ಯಾಂಡಿಂಗ್‌ಗೆ ಎರಡು ಪ್ರಮುಖ ಸ್ಥಳಗಳನ್ನು ಗುರುತಿಸಿಕೊಂಡು ರಾಯಚೂರು ನಗರ ಬಳಿಯ ಮಲಿಯಾಬಾದ್ ಸುತ್ತಲಿನ ಪ್ರದೇಶದಲ್ಲಿ ಸರ್ವೆ ನಡೆಸಲಾಗುತ್ತಿದೆ.

**ಅಧಿಕಾರಿಗಳ ಸ್ಪಷ್ಟನೆ:** ಸಮೀಕ್ಷೆ ಭಾಗವಾಗಿ ಫೆ.10 ರಿಂದ ಏ.30 ರವರೆಗೆ ಬೆಳಗ್ಗೆ 6 ರಿಂದ ಸಂಜೆ 5ರವರೆಗೆ ಹೆಲಿಕಾಪ್ಟರ್ ಹಾರಾಟ ನಡೆಯುತ್ತಿದೆ. ಹವಾಮಾನ ಅನುಕೂಲಿಸಿದ ದಿನಗಳಲ್ಲಿ ಬೆಳಗ್ಗೆ 6 ರಿಂದ ಸಂಜೆ 5 ಗಂಟೆಯವರೆಗೆ ಹಾರಾಟ ನಡೆಯಲಿದೆ. ಪ್ರತಿ ಹಾರಾಟ ಅಂದಾಜು 3 ಗಂಟೆಗಳಿರಲಿದ್ದು, ಹೆಲಿಕಾಪ್ಟರ್ ನೆಲದಿಂದ 200 ರಿಂದ 1000 ಅಡಿ ಎತ್ತರದಲ್ಲಿ 40–50 ನಾಟ್ ವೇಗದಲ್ಲಿ ಸಂಚರಿಸಲಿದೆ. ಕಳೆದ ಹಲವು ದಿನಗಳಿಂದ ಹೆಲಿಕಾಪ್ಟರ್ ಹಾರಾಟ ಗಮನಿಸಿ ಸಾರ್ವಜನಿಕರಲ್ಲಿ ನಾನಾ ಚರ್ಚೆಗಳು ಶುರುವಾಗಿವೆ. ಕಡಿಮೆ ಎತ್ತರದಲ್ಲಿ ಹಾರಾಟ ನಡೆಯುತ್ತಿರುವುದರಿಂದ ಆತಂಕವೂ ಸೃಷ್ಟಿಯಾಗಿದೆ. ಇದು ಸಂಪೂರ್ಣ ವೈಜ್ಞಾನಿಕ ಸಮೀಕ್ಷೆಯಾಗಿದ್ದು, ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ. ಮತ್ತೊಂದು ಚಿನ್ನದ ಕಾರ್ಖಾನೆಯೂ ಬರುವದಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

**ಹಲವು ರಾಜ್ಯಗಳಲ್ಲಿ ಸಮೀಕ್ಷೆ:** ಇದೇ ಮಾದರಿಯ ಸಮೀಕ್ಷೆ ರಾಜಸ್ಥಾನದ ಸಿರೋಹಿ ಹಾಗೂ ಒಡಿಶಾದ ಸಂಬಲ್‌ಪುರ, ದಿಯೋಗಢ, ಧೆಂಕನಲ್ ಮತ್ತು ಜೈಪುರ ಜಿಲ್ಲೆಗಳಲ್ಲಿ ನವೆಂಬರ್ 2024ರಿಂದ ಫೆಬ್ರವರಿ 2025ರವರೆಗೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಪ್ರಸ್ತುತ ಆಂಧ್ರಪ್ರದೇಶದ ಸತ್ಯಸಾಯಿ (ಪುಟ್ಟಪರ್ತಿ) ಜಿಲ್ಲೆ ಹಾಗೂ ರಾಜ್ಯದ ತುಮಕೂರು, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲೂ ಕಾರ್ಯಾಚರಣೆ ಮುಂದುವರಿದಿದೆ. ಯೋಜನೆ ಸಂಪೂರ್ಣ ವಾಗಿ ಕೇಂದ್ರ ಗಣಿ ಸಚಿವಾಲಯ ಮತ್ತು ಜಿಎಸ್ಐ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದೆ.

**ಸಹಕಾರಕ್ಕೆ ಮನವಿ:** ಹೆಲಿಕಾಪ್ಟರ್ ಲ್ಯಾಂಡಿಂಗ್, ಪಾರ್ಕಿಂಗ್, ಇಂಧನ ತುಂಬುವಿಕೆ ಹಾಗೂ ಎಟಿಸಿ ವ್ಯವಸ್ಥೆಗಳಿಗೆ ಸಂಬಂಧಿಸಿದ ಅನುಮತಿಗಳು ಮತ್ತು ಸಹಕಾರವನ್ನು ಸ್ಥಳೀಯ ಆಡಳಿತದಿಂದ ನೀಡುವಂತೆ ಯೋಜನಾ ಅನುಷ್ಠಾನ ಸಂಸ್ಥೆ ಮನವಿ ಮಾಡಿದೆ.

**ಜನರ ಕುತೂಹಲ, ನಾನಾ ಚರ್ಚೆ:** 2–3 ದಿನಗಳ ಹಿಂದೆ 500 ಅಡಿ ಎತ್ತರದಲ್ಲಿ ಸಮೀಕ್ಷೆ ನಿಮಿತ್ತ ಹಾರಾಡುತ್ತಿದ್ದ ಹೆಲಿಕಾಪ್ಟರ್ ಭಾನುವಾರ ಬೆಳಗ್ಗೆಯಿಂದಲೇ 300 ಅಡಿ ಎತ್ತರದಲ್ಲಿ ಹಾರಾಡಿ ಕುತೂಹಲ ಮೂಡಿಸಿತು. ಸಾಯಿಪ್ರಿಯ ಕಾಲೊನಿ, ಬಾಲಾಜಿ ನಗರ, ರಮೇಶ್ ನಗರ, ಕೃಷ್ಣಗಿರಿ ಹಿಲ್ಸ್, ಸ್ಟೇಷನ್ ಏರಿಯಾ, ಟೀಚರ್ಸ್ ಕಾಲೊನಿ ಮುಂತಾದ ನಗರ ವ್ಯಾಪ್ತಿಯ ಹಲವಾರು ಬಡಾವಣೆ ಸೇರಿ ಆಶಾಪುರ, ಅರಳಿಬೆಂಚಿ ಗ್ರಾಮಗಳ ಮೇಲೆಯೇ ಕ್ಯಾಮರಾ ಹೊತ್ತು ಹೆಲಿಕಾಪ್ಟರ್ ಹಾರಾಡಿದ್ದನ್ನು ಗಮನಿಸಿದವರು ರಸ್ತೆ ಸಮೀಕ್ಷೆ, ನೀರು ಪತ್ತೆ, ಹೊಸ ಕಾರ್ಖಾನೆ ಆಗಮನ ಇತ್ಯಾದಿ ಚರ್ಚೆ ಮಾಡಿದರು. ಮೊಬೈಲ್‌ನಲ್ಲಿ ಹಾರಾಟದ ದೃಶ್ಯ ಸೆರೆಹಿಡಿದರು.

### ಟಿಲ್ಲು, ರತ್ನಬಾಬು, ರವಿ ಇತರೆ 8 ಜನರ ವಿರುದ್ಧ ಕೌಲ್ ಬಜಾರ್ ಠಾಣೆಯಲ್ಲಿ ಪ್ರಕರಣ

# ಅಕ್ರಮವಾಗಿ ಮರಗಳ ಕಟಾವು ಶಾಸಕ ಭರತ್ ರೆಡ್ಡಿ ಆಪ್ತರ ಮೇಲೆ ಕೇಸು ದಾಖಲು

**ಅರಣ್ಯ ಇಲಾಖೆ ಅಧಿಕಾರಿಗಳ ಮೇಲೆ ಹಲ್ಲೆ,ಮೊಬೈಲ್ ಜಪ್ತಿ**

**ಬಳ್ಳಾರಿ,ಏ.26.** ನಗರದ ವಿದ್ಯಾನಗರ ಸರ್ಕಲ್ ನಿಂದ ಕೊಳಗಲ್ ರಸ್ತೆಯವರೆಗೆ ರಸ್ತೆ ಅಗಲೀಕರಣ ಕಾಮಗಾರಿಯ ನೆಪದಲ್ಲಿ ಯಾವುದೇ ಅನುಮತಿ ಇಲ್ಲದೆ ಅಕ್ರಮವಾಗಿ ಮರಗಳನ್ನು ಕಟಾವು ಮಾಡುತ್ತಿದ್ದುದನ್ನು ತಡೆಯಲು ಹೋದ ಅರಣ್ಯ ಇಲಾಖೆಯ ಅಧಿಕಾರಿಗಳ ಮೇಲೆ ಹಲ್ಲೆ, ಸಾಕ್ಷಿ ನಾಶ ಪಡಿಸಲು ಮಾಡಿದಕ್ಕೆ ನಗರ ಶಾಸಕ ಭರತ್ ರೆಡ್ಡಿ ಅವರ ಆಪ್ತರಾದ ಟಿಲ್ಲು, ರತ್ನಬಾಬು, ರವಿ ಮೋಕಾ ಮತ್ತು ಎಂಟು ಜನರ ಮೇಲೆ ಕೌಲ್ ಬಜಾರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏ.23 ರಂದು ರಾತ್ರಿ 10:30 ಸಮಯದಲ್ಲಿ ಬಳ್ಳಾರಿ ಪ್ರಾದೇಶಿಕ ಅರಣ್ಯ ವಿಭಾಗದ ವಿದ್ಯಾನಗರ ಸರ್ಕಲ್ ನ8ರಿಂದ ಕೊಳಗಲ್ ರಸ್ತೆಗೆ ಹೋಗುವ 1.10 ಕಿ.ಮೀ ರಿಂದ 1.60 ಕಿ.ಮೀ ವರೆಗೆ ರಸ್ತೆ ಅಗಲೀಕರಣ ಕಾಮಗಾರಿಗೆ ಅಡ್ಡಿ ಬರುವ ರಸ್ತೆ ಬದಿಯ ಮರಗಳನ್ನು ಅಕ್ರಮವಾಗಿ ಕಡಿಯಲಾಗುತ್ತಿತ್ತು.

ಈ ವಿಷಯ ತಿಳಿದ ಉಪ ವಲಯ ಅರಣ್ಯಾಧಿಕಾರಿ ಸುನೀಲಕುಮಾರ ಆರ್. ಚೌವ್ಹಾಣ್ ಹಾಗೂ ಸಿಬ್ಬಂದಿಯೊಂದಿಗೆ ತೆರಳಿ ಈ ಮರಗಳನ್ನು ಕಡಿಯಲು ಯಾರು ನಿಮಗೆ ಅನುಮತಿ ನೀಡಿದ್ದು ಎಂದು ವಿಚಾರಿಸಿದಾಗ. ಕಾಮಗಾರಿ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಮರಗಳನ್ನು ಕಡಿಯಲಾಗುತ್ತಿದೆ ಎಂದಿದ್ದಾರೆ.

ಆಗ ಅರಣ್ಯ ಇಲಾಖೆ ಅಧಿಕಾರಿಗಳು ಅನುಮತಿ ಇಲ್ಲದೇ ಮರಗಳನ್ನು ಕಡಿಯುವುದು. ಅರಣ್ಯ ಕಾನೂನು ವಿರುದ್ಧವಾಗಿದ್ದು. ಅನುಮತಿ ಪಡೆದ ನಂತರವೇ ಕಡಿಯಬೇಕು ಸೂಚಿಸಿದರೂ, ಕಡಿಯುವುದನ್ನು ಮುಂದುವರೆಸಿದ್ದಾರೆ.

ಇದನ್ನು ಸಿಬ್ಬಂದಿಗಳೊಂದಿಗೆ ತಡೆಯಲು ಪ್ರಯತ್ನಿಸಿದಾಗ ವಾಗ್ವಾದ ನಡೆದಿದೆ. ಈ ಕೃತ್ಯವನ್ನು ಮೊಬೈಲ್ ನಲ್ಲಿ ಚಿತ್ರಿಕರಿಸುವಾಗ ಶಾಸಕ ಭರತ್ ರೆಡ್ಡಿ ಆಪ್ತರಾದ ಟಿಲ್ಲು, ರತ್ನಬಾಬು, ರವಿ ಮೋಕಾ ಅವರು. ಅರಣ್ಯ ಇಲಾಖೆಯ ಸುನೀಲಕುಮಾರ ಆರ್. ಚೌವ್ಹಾಣ ಅವರ ಮೊಬೈಲ್ ಫೋನ್ ಕಿತ್ತುಕೊಂಡು ನೆಲಕ್ಕೆ ಎಸೆದು ಹಾನಿಮಾಡಿದ್ದಾರೆ.

ಆಗ ಮರಗಳ ಕಡಿಯುವುದನ್ನು ತಡೆಯಲು ಬಳ್ಳಾರಿ ವಲಯದ ಸಿಬ್ಬಂದಿಗಳನ್ನು ಮತ್ತು ಸ್ಥಳೀಯ ಪೋಲಿಸ್ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಘಟನಾ ಸ್ಥಳಕ್ಕೆ ಕರೆದು ಎಲ್ಲರ ಸಹಕಾರದೊಂದಿಗೆ ಮರ ಕಡಿಯುವುದನ್ನು ತಡೆದಿದ್ದಾರೆ. 21 ತಪಸಿ, 2 ಬೇವು, 2 ಅರಳಿ ಸೇರಿ 25 ಮರಗಳನ್ನು ಕಡಿಯಲಾಗಿದೆ. ಈ ಕೃತ್ಯವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976 ರ ಸ್ಪಷ್ಟ ಉಲ್ಲಂಘನೆಯಾಗಿದೆ.

ಜೊತೆಗೆ ಈ ಕಾಮಗಾರಿಯ ಗುತ್ತಿಗೆ ಪಡೆದಿದ್ದ ಶ್ರೀನಿವಾಸ್ ಇನ್ಫ್ರಾ ಪ್ರಾಜೆಕ್ಟ್ ಪ್ರೈ.ಲಿ ಶ್ರೀನಿವಾಸರ ಮತ್ತು ನಾಲ್ವರ ವಿರುದ್ಧ ಅರಣ್ಯ ಇಲಾಖೆಯಲ್ಲಿ ಎಫ್ ಓಸಿ ಕೇಸು ದಾಖಲಿಸಲಾಗಿದೆ. 1.8 ಕಿಮೀ ರಸ್ತೆ ಅಗಲೀಕರಣ, ಚರಂಡಿ ಮತ್ತು ಫುಟ್‌ಪಾತ್ ನಿರ್ಮಾಣಕ್ಕಾಗಿ 233 ಮರಗಳ ಕಡಿಯಲು ಲೋಕೋಪಯೋಗಿ ಇಲಾಖೆಯ ಎಇಇ ಅವರು ಅನುಮತಿ ಕೋರಿದ್ದರು. ಇದರಲ್ಲಿ 139 ಮರಗಳು ಫುಟ್ ಪಾಥ್ ನಲ್ಲಿ ನಲ್ಲಿ ಬರುತ್ತಿರುವುದರಿಂದ ಅವುಗಳನ್ನು ಹಾಗೆಯೇ ಉಳಿಸಿಕೊಂಡು ಫುಟ್ ಪಾಥ ನಿರ್ಮಾಣ ಮಾಡಲು ಫುಟ್ ಪಾಥ್ ಮರುವಿನ್ಯಾಸ ಮಾಡಿ, ಸಾಧ್ಯವಾದಷ್ಟು ಕಡಿಮೆ ಮರಗಳನ್ನು ಕಡಿಯಲು ಅರಣ್ಯ ಇಲಾಖೆ ಪಿಡ್ಲ್ಯೂಡಿ ಅಧಿಕಾರಿಗಳಿಗೆ ಸೂಚಿಸಿತ್ತು.

ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡದೇ ಏಕಾಏಕಿ ಮರ ಕಡಿಯಲಾಗಿದೆಂದು, 50ಕ್ಕೂ ಹೆಚ್ಚು ಮರಗಳಿರುವುದರಿಂದ ಸಾರ್ವಜನಿಕ ಆಕ್ಷೇಪಣೆ ಸ್ವೀಕರಿಸಿ, ಯಾವುದೇ ಆಕ್ಷೇಪಣೆ ಇಲ್ಲದಿದ್ದಲ್ಲಿ ರಸ್ತೆ ಅಗಲೀಕರಣದ ನಂತರ ಗಿಡಗಳನ್ನೂ ನೆಡಲು ಅನ್ವಯಿಸುವ ಶುಲ್ಕಗಳನ್ನು ಪಾವತಿಸಿಕೊಂಡು ಅನುಮತಿ ನೀಡಲಾಗುತ್ತಿತ್ತು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಬಸವರಾಜ ಕೆ.ಎನ್ ತಿಳಿಸಿದ್ದಾರೆ.

# ಯಾವುದೇ ಕಾರಣಕ್ಕೂ ಸಂಧಾನ ಅಥವಾ ಶರಣಾಗತಿ ಇಲ್ಲ: ಅಮೆರಿಕಕ್ಕೆ ಇರಾನ್ ಎಚ್ಚರಿಕೆ

**ಟೆಹರಾನ್, ಏ.26:** ಅಮೆರಿಕ ಮತ್ತು ಇಸ್ರೇಲ್ ಜೊತೆಗಿನ ಉದ್ವಿಗ್ನತೆಯ ನಡುವೆ, ಇರಾನ್‌ನ ಹಿರಿಯ ಅಧಿಕಾರಿಗಳು ಸರಣಿ ಎಚ್ಚರಿಕೆಗಳನ್ನು ನೀಡುವ ಮೂಲಕ ಟೆಹರಾನ್ ತನ್ನ ನಿಲುವನ್ನು ಯಾವುದೇ ರೀತಿಯಲ್ಲಿ ಸಡಿಲಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಖಾತಮ್ ಅಲ್-ಅನ್ಬಿಯಾ ಜಂಟಿ ಮಿಲಿಟರಿ ಕಮಾಂಡ್‌ನ ಹಿರಿಯ ಅಧಿಕಾರಿ ಮೊಹಮ್ಮದ್ ಜಾಫರ್ ಅಸಾದಿ ಮಾತನಾಡಿ, ವಾಷಿಂಗ್ಟನ್ ಅಥವಾ ಇಸ್ರೇಲ್‌ನಿಂದ ಯಾವುದೇ ಹೊಸ ದಾಳಿಗಳು ನಡೆದರೆ ಅದಕ್ಕೆ ಪ್ರಬಲ ಪ್ರತಿಕ್ರಿಯೆ ನೀಡಲಾಗುವುದು ಎಂದು ಎಚ್ಚರಿಸಿದ್ದಾರೆ. ಹಾರ್ಮುಜ್ ಜಲಸಂಧಿಯ ಮೇಲೆ ಬಾಹ್ಯ ಮೇಲ್ವಿಚಾರಣೆಯ ಯಾವುದೇ ಪ್ರಸ್ತಾಪವನ್ನು ಇರಾನ್ ತಿರಸ್ಕರಿಸಿದ್ದು, ಈ ನಿರ್ಣಾಯಕ ಜಲಮಾರ್ಗವು ಅಮೆರಿಕದ ವ್ಯಾಪ್ತಿಯಿಂದ ಹೊರಗಿದೆ ಎಂದಿದ್ದಾರೆ.

ಪರ್ಷಿಯನ್ ಕೊಲ್ಲಿ ಮತ್ತು ಹಾರ್ಮುಜ್ ಜಲಸಂಧಿಯು ಇರಾನ್ ಮತ್ತು ಅದರ ನೆರೆಯ ರಾಷ್ಟ್ರಗಳಿಗೆ ಸಂಬಂಧಿಸಿದ ಪ್ರದೇಶಗಳಾಗಿವೆ. ಈ ಪ್ರದೇಶದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲು ಅಮೆರಿಕಕ್ಕೆ ಯಾವುದೇ ಹಕ್ಕಿಲ್ಲ ಎಂದು ತಿಳಿಸಿದ್ದಾರೆ.

ಇದೇ ನಿಲುವನ್ನು ಉಪ ಸಂಸತ್



ಸ್ಪೀಕರ್ ಅಲಿ ನಿಕಜಾದ್ ಪುನರುಚ್ಚರಿಸಿದ್ದು, ಜಲಸಂಧಿಯಲ್ಲಿ ಹಡಗು ಸಂಚಾರದ ಪರಿಸ್ಥಿತಿಯನ್ನು ಯುದ್ಧಪೂರ್ವ ಮಟ್ಟಕ್ಕೆ ಇರಾನ್ ಪುನಃಸ್ಥಾಪಿಸುವುದಿಲ್ಲ ಎಂದು ಹೇಳಿದ್ದಾರೆ.

"ನಾವು ಹಾರ್ಮುಜ್ ಜಲಸಂಧಿಯನ್ನು ಅದರ ಹಿಂದಿನ ಸ್ಥಿತಿಗೆ ತರುವುದಿಲ್ಲ, ಇದು ನಮ್ಮ ನಾಯಕತ್ವದ ಆದೇಶವಾಗಿದೆ," ಎಂದು ಅವರು ತಿಳಿಸಿದರು.


ಇತರ ಸಂಸದರು ಇನ್ನೂ ಕಠಿಣ ಧೋರಣೆಯನ್ನು ತಳೆದಿದ್ದು, ಸಂಸತ್ತಿನ ರಾಷ್ಟ್ರೀಯ ಭದ್ರತೆ ಮತ್ತು ವಿದೇಶಾಂಗ ನೀತಿ ಸಮಿತಿಯ ಸದಸ್ಯ ಫದಾಹೊಸೇನ್ ಮಾಲೇಖಿ ಮಾತನಾಡಿ, ಇರಾನ್ನ ಮಿಲಿಟರಿ ಘಟಕಗಳಾದ 'ಅರ್ತೇಶ್' ಮತ್ತು 'ಸೆಪಾ' ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧವಾಗಿದ್ದು, ಅಗತ್ಯಬಿದ್ದರೆ ಮುನ್ನೆಚ್ಚರಿಕಾ ಕ್ರಮವಾಗಿ ದಾಳಿ ನಡೆಸಲು ಹಿಂಜರಿಯುವುದಿಲ್ಲ ಎಂದಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕದನ ವಿರಾಮ ಅಥವಾ ಶಾಂತಿ ಮಾತುಕತೆಗಳಿಗೆ ಟೆಹ್ರಾನ್ ದೃಷ್ಟಿಯಲ್ಲಿ ಯಾವುದೇ ಅರ್ಥವಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಹಿರಿಯ ಸಂಸದ ಮಹಮೂದ್ ನಬಾವಿಯಾನ್ ಅವರು ಹಾರ್ಮುಜ್ ಜಲಸಂಧಿಯ ಅಂತರಾಷ್ಟ್ರೀಯ ನಿರ್ವಹಣೆ, ಯುರೇನಿಯಂ ಪುಷ್ಟೀಕರಣವನ್ನು ದೀರ್ಘಕಾಲದವರೆಗೆ ಸ್ಥಗಿತಗೊಳಿಸುವುದು ಮತ್ತು ಇರಾನ್‌ನ ಯುರೇನಿಯಂ ದಾಸ್ತಾನು ವರ್ಗಾವಣೆ ಮಾಡುವ ವಾಷಿಂಗ್ಟನ್‌ನ ಎಲ್ಲ ಪ್ರಸ್ತಾಪಗಳನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

"ನಾವು ರಾಜಿ ಮಾಡಿಕೊಳ್ಳುವ ಅಥವಾ ಶರಣಾಗುವ ಜನರಲ್ಲ. ನಾವು ಅಂತಿಮ ವಿಜಯದವರೆಗೂ ಹೋರಾಡುವವರು," ಎಂದು ನಬಾವಿಯಾನ್ ಹೇಳಿದ್ದಾರೆ. ಅಲ್ಲದೆ, ಇರಾನ್ ಮೇಲೆ ದಾಳಿ ಮಾಡಲು ತಮ್ಮ ಭೂಪ್ರದೇಶವನ್ನು ಬಳಸಿಕೊಳ್ಳಲು ಅವಕಾಶ ನೀಡದಂತೆ ಪ್ರಾದೇಶಿಕ ರಾಷ್ಟ್ರಗಳಿಗೆ ಅವರು ಎಚ್ಚರಿಕೆ ನೀಡಿದ್ದಾರೆ. ಇರಾನ್‌ನ ಭದ್ರತೆಗೆ ಧಕ್ಕೆಯಾದರೆ, "ಪ್ರದೇಶದ ಯಾವುದೇ ದೇಶಕ್ಕೂ ಭದ್ರತೆ ಇರುವುದಿಲ್ಲ," ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಇರಾನ್‌ನ ನೀರು ಅಥವಾ ವಿದ್ಯುತ್ ವ್ಯವಸ್ಥೆಗಳನ್ನು ಗುರಿಯಾಗಿಸಿಕೊಂಡರೆ, ಅದು ಇಡೀ ಪ್ರದೇಶದಾದ್ಯಂತ ದೊಡ್ಡ ಮಟ್ಟದ ಅಸ್ತವ್ಯಸ್ತತೆಗೆ ಕಾರಣವಾಗಬಹುದು ಎಂದು ನಬಾವಿಯಾನ್ ಬೆದರಿಕೆ ಹಾಕಿದ್ದಾರೆ.

# ಶೂಟೌಟ್ ಘಟನೆ: ಇರಾನ್ ಯುದ್ಧ ಗೆಲ್ಲುವುದಕ್ಕೆ ತಡೆಯಲ್ಲ–ಟ್ರಂಪ್



**ವಾಷಿಂಗ್ಟನ್, ಏ.26:** ಗುಂಡಿನ ದಾಳಿಗೂ ಇರಾನ್ ಮೇಲಿನ ಯುದ್ಧಕ್ಕೂ ಯಾವುದೇ ಸಂಬಂಧವಿದೆ ಎನ್ನುವುದು ನನಗೆ ತಿಳಿದಿಲ್ಲ. ಆದರೆ, ನನಗೆ ತಿಳಿದಿರುವುದಂತೆ ಹಾಗಿಲ್ಲ ಎಂದು ಭಾವಿಸಿದ್ದೇನೆ ಎಂದು ವೈಟ್ ಹೌಸ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಟ್ರಂಪ್ ತಿಳಿಸಿದ್ದಾರೆ. ಅಮೆರಿಕ ವೈಟ್ ಹೌಸ್ ವರದಿಗಾರರ ಸಂಘದ ಔತಣಕೂಟದಲ್ಲಿ ನಡೆದ ಗುಂಡಿನ ದಾಳಿ ತನ್ನನ್ನು ಇರಾನ್ ಮೇಲಿನ ಯುದ್ಧದಿಂದ ತಡೆಯುವುದಿಲ್ಲ, ಈ ಘಟನೆ ಯುದ್ಧಕ್ಕೆ ಸಂಬಂಧಿಸಿದೆ ಎಂದು ನನಗೆ ಅನಿಸುತ್ತಿಲ್ಲ ಎಂದಿದ್ದಾರೆ.

ಟ್ರಂಪ್ ಅವರು ಟ್ರೂತ್ ಸೋಶಿಯಲ್ ಮೀಡಿಯಾದಲ್ಲಿ ಘಟನೆಯ ಒಂದು ವಿಡಿಯೊ ಹಂಚಿಕೊಂಡಿದ್ದು, ಅದರಲ್ಲಿ ಶಂಕಿತ ವ್ಯಕ್ತಿ ಭದ್ರತಾ ತಪಾಸಣಾ ಕೇಂದ್ರದ ಮೂಲಕ ಓಡುತ್ತಿರುವುದು ಹಾಗೂ ನಂತರ ಬಂಧಿಸಲ್ಪಡುವುದು ಕಾಣುತ್ತದೆ. ಒಬ್ಬ ವ್ಯಕ್ತಿ ಹಲವಾರು ಶಸ್ತ್ರಾಸ್ತ್ರಗಳೊಂದಿಗೆ ಭದ್ರತಾ ತಪಾಸಣಾ ಕೇಂದ್ರದತ್ತ ದೌಡಾಯಿಸಿದ್ದಾನೆ. ಧೈರ್ಯಶಾಲಿ ಸೀಕ್ರೆಟ್ ಸರ್ವಿಸ್ ಸಿಬ್ಬಂದಿ ಅವನನ್ನು ಕಟ್ಟಿ ಹಾಕಿದರು, ಒಬ್ಬ ಅಧಿಕಾರಿ ಮೇಲೆ ಗುಂಡು ತಾಗಿದರೂ ಕೂಡ ಜೀವರಕ್ಷಕ ಜಾಕೆಟ್ ಜೀವ ಉಳಿಸಿದೆ. ನಾನು ಅವರೊಂದಿಗೆ ಮಾತನಾಡಿದ್ದೇನೆ, ಅವರು ಚೆನ್ನಾಗಿದ್ದಾರೆ ಎಂದು ಟ್ರಂಪ್ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಬಂಧಿತನ ಚಿತ್ರಗಳನ್ನೂ ಹಂಚಿಕೊಂಡಿದ್ದು, ಅವನನ್ನು ನೆಲಕ್ಕೆ ಬೀಳಿಸಿ ಕಾನೂನು ಜಾರಿಗೆ ಸಂಬಂಧಿಸಿದ ಅಧಿಕಾರಿಗಳು ಹಿಡಿದಿರುವುದು ಕಾಣುತ್ತದೆ. ಶಂಕಿತನನ್ನು ಕ್ಯಾಲಿಫೋರ್ನಿಯಾದ ಟೋರನ್ಸ್‌ನ 31 ವರ್ಷದ ಕೋಲ್ ಟೋಮಾಸ್ ಆಲೆನ್ ಎಂದು ಗುರುತಿಸಲಾಗಿದೆ.

# ಭಾರತ–ಉಜ್ಬೇಕಿಸ್ತಾನ್ ಜಂಟಿ ಮಿಲಿಟರಿ ಸಮರಾಭ್ಯಾಸಕ್ಕೆ ತೆರೆ

**ನವದೆಹಲಿ, ಏ.26:** ಭಾರತ ಮತ್ತು ಉಜ್ಬೇಕಿಸ್ತಾನ್ ನಡುವಿನ 7ನೇ ಆವೃತ್ತಿಯ ಜಂಟಿ ಮಿಲಿಟರಿ ಅಭ್ಯಾಸ ಡಸ್ಟ್‌ಲಿಕ್ ಉಜ್ಬೆಕಿಸ್ಥಾನದ ನಮಂಗನ್‌ನ ಗುರುಮಸರಾಯ್ ತರಬೇತಿ ಕೇಂದ್ರದಲ್ಲಿ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಕಳೆದ ಎರಡು ವಾರಗಳಿಂದ ನಡೆದ ಈ ತರಬೇತಿಯಲ್ಲಿ ಎರಡೂ ದೇಶಗಳ ಸೈನಿಕರು ಅರೆ–ಪರ್ವತ ಪ್ರದೇಶಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸುವ ಬಗ್ಗೆ ಅನುಭವ ಪಡೆದರು. ಅಂತಿಮ ಹಂತದಲ್ಲಿ ಆರು ಪ್ರಮುಖ ಹಂತಗಳಲ್ಲಿ ಕಾರ್ಯಾಚರಣೆಗಳನ್ನು ನಡೆಸಲಾಯಿತು. ಇದರಲ್ಲಿ ವಿಶೇಷವಾಗಿ ಹೆಲಿಕಾಪ್ಟರ್ ಫೈರಿಂಗ್, ಡ್ರೋನ್ ಆಧಾರಿತ ಕಣ್ಗಾವಲು ಮತ್ತು ಮನೆಗಳ ಒಳಗೆ ನುಗ್ಗಿ ಕಾರ್ಯಾಚರಣೆ ನಡೆಸುವ ತಂತ್ರಗಳ ಬಗ್ಗೆ ಅಭ್ಯಾಸ ನಡೆಸಲಾಯಿತು. ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯಲ್ಲಿ ಏಕರೂಪತೆ ತರಲು 'ಜಂಟಿ ಕಾರ್ಯಾಚರಣೆ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್' ಸ್ಥಾಪಿಸಲಾಗಿತ್ತು. ಸಮಾರೋಪ ಸಮಾರಂಭದಲ್ಲಿ ಎರಡೂ ದೇಶಗಳ ಅತ್ಯುತ್ತಮ ಪ್ರದರ್ಶನ ನೀಡಿದ ಸೈನಿಕರನ್ನು ಗೌರವಿಸಲಾಯಿತು. ಎರಡೂ ದೇಶಗಳ ನಡುವೆ 2025ರ ಏಪ್ರಿಲ್‌ನಲ್ಲಿ ಜಂಟಿ ಸೇನಾ ಅಭ್ಯಾಸ ಸರಣಿಯ 6ನೇ ಆವೃತ್ತಿಯು ಭಾರತದಲ್ಲಿ ನಡೆದಿತ್ತು. 2019ರಲ್ಲಿ ಉಜ್ಬೇಕಿಸ್ತಾನದಲ್ಲಿ ಮೊದಲ ಬಾರಿಗೆ ಈ ಜಂಟಿ ಸೇನಾ ಅಭ್ಯಾಸ ಆರಂಭವಾಗಿತ್ತು. ಅಂದಿನಿಂದ ಪ್ರತಿವರ್ಷ ಭಾರತ ಮತ್ತು ಉಜ್ಬೇಕಿಸ್ತಾನದಲ್ಲಿ ಪರ್ಯಾಯವಾಗಿ ಇದು ನಡೆಯುತ್ತಿದೆ. ಇದು ಉಭಯ ದೇಶಗಳ ನಡುವಿನ ಬೆಳೆಯುತ್ತಿರುವ ರಕ್ಷಣಾ ಸಹಕಾರಕ್ಕೆ ಸಾಕ್ಷಿಯಾಗಿದೆ.

# ಪಾಕಿಸ್ತಾನ ಪ್ರವಾಸ ರದ್ದುಗೊಳಿಸಿದ ಅಮೆರಿಕ

ವಾಷಿಂಗ್ಟನ್, ಏ.26: ಇರಾನ್ ಪ್ರತಿನಿಧಿಗಳೊಂದಿಗೆ ಮಾತುಕತೆ ನಡೆಸಲು ಪಾಕಿಸ್ತಾನಕ್ಕೆ ತೆರಳಬೇಕಿದ್ದ ತನ್ನ ಪ್ರತಿನಿಧಿಗಳ ಭೇಟಿಯನ್ನು ಅಮೆರಿಕ ಕೊನೆಯ ಕ್ಷಣದಲ್ಲಿ ರದ್ದುಗೊಳಿಸಿದೆ. ಇರಾನಿಯನ್ನರನ್ನು ಭೇಟಿ ಮಾಡಲು ಇಸ್ಲಾಮಾಬಾದ್‌ಗೆ ತೆರಳಬೇಕಿದ್ದ ನನ್ನ ಪ್ರತಿನಿಧಿಗಳ ಪ್ರವಾಸವನ್ನು ರದ್ದುಗೊಳಿಸಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶನಿವಾರ ತಡರಾತ್ರಿ ಘೋಷಿಸಿದ್ದಾರೆ. ಪ್ರಯಾಣಕ್ಕಾಗಿ ಸಾಕಷ್ಟು ಸಮಯ ವ್ಯರ್ಥವಾಗುತ್ತಿದೆ ಮತ್ತು ಸ್ಥಳೀಯವಾಗಿಯೇ ಕೆಲಸಗಳು ಬಹಳಷ್ಟಿವೆ ಎಂದು ತಿಳಿಸಿದ್ದಾರೆ.

ಇದಕ್ಕೂ ಮೊದಲು, ಇಸ್ಲಾಮಾಬಾದ್‌ನಲ್ಲಿ ಅಮೆರಿಕದೊಂದಿಗೆ ಯಾವುದೇ ಸಭೆ ನಿಗದಿಯಾಗಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿತ್ತು. ಇರಾನ್ ಮತ್ತು ಅಮೆರಿಕ ನಡುವೆ ಯಾವುದೇ ಸಭೆ ನಡೆಯುವ ಯೋಜನೆ ಇಲ್ಲ. ಇರಾನ್ ತನ್ನ ಅಭಿಪ್ರಾಯಗಳನ್ನು ಪಾಕಿಸ್ತಾನಕ್ಕೆ ರವಾನಿಸಲಿದೆ," ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘೇಯ್ ಶನಿವಾರ ತಿಳಿಸಿದ್ದರು.

# ತವರಿನಲ್ಲೇ ಮಂಕಾದ ಸಿಎಸ್‌ಕೆ: ಗುಜರಾತ್‌ಗೆ 8 ವಿಕೆಟ್ ಜಯ

**ಚೆನ್ನೈ,ಏ.26:** ಐಪಿಎಲ್37 ನೇ ಪಂದ್ಯದಲ್ಲಿ, ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಚಿದಂಬರಂ ಕ್ರೀಡಾಂಗಣದಲ್ಲಿ ಮುಖಾಮುಖಿಯಾಗಿದ್ದವು. ಸಿಎಸ್‌ಕೆ ತನ್ನ ತವರು ಮೈದಾನದಲ್ಲಿ ಈ ಪಂದ್ಯವನ್ನು ಆಡುತ್ತಿದ್ದರಿಂದ ತವರಿನ ಲಾಭ ಪಡೆದು ಈ ಪಂದ್ಯವನ್ನು ಗೆಲ್ಲಬಹುದು ಎಂಬ ನಿರೀಕ್ಷೆ ಇತ್ತು. ಆದರೆ ಸಿಎಸ್‌ಕೆ ಲೆಕ್ಕಾಚಾರವನ್ನು ಪಂದ್ಯದ ಆರಂಭದಲ್ಲೇ ಗುಜರಾತ್ ತಂಡ ಬುಡಮೇಲು ಮಾಡಿತು. ಈ ಪಂದ್ಯದಲ್ಲಿ ಟಾಸ್ ಸೋತ ಸಿಎಸ್‌ಕೆ ಮೊದಲು ಬ್ಯಾಟಿಂಗ್ ಮಾಡಬೇಕಾಯಿತು. ಆದರೆ ತಂಡದ ಕಳಪೆ ಬ್ಯಾಟಿಂಗ್‌ನಿಂದಾಗಿ ಕೇವಲ 158 ರನ್ ಕಲೆಹಾಕಲಷ್ಟೇ ಶಕ್ತವಾಯಿತು. ಈ ಗುರಿ ಬೆನ್ನಟ್ಟಿದ ಗುಜರಾತ್ ಕೇವಲ 2 ವಿಕೆಟ್ ಕಳೆದುಕೊಂಡು ಗೆಲುವಿನ ದಡ ಮುಟ್ಟಿತು. ಈ ಗೆಲುವಿನೊಂದಿಗೆ ಗುಜರಾತ್ ಪಾಯಿಂಟ್ ಪಟ್ಟಿಯಲ್ಲಿ 5ನೇ ಸ್ಥಾನಕ್ಕೇರಿದರೆ, ಸಿಎಸ್‌ಕೆ 6ನೇ ಸ್ಥಾನಕ್ಕೆ ಜಾರಿದೆ.




### ಸಿಎಸ್‌ಕೆ ಬ್ಯಾಟಿಂಗ್ ವೈಫಲ್ಯ

ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಇನ್ನಿಂಗ್ಸ್ ಪವರ್‌ಪ್ಲೇನಲ್ಲಿ ಎಡವಿ ಕೇವಲ 28 ರನ್ ಗಳಿಸಿ 3 ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತು. ಇದು ತಂಡದ ಮೇಲೆ ಒತ್ತಡವನ್ನು ಹೆಚ್ಚಿಸಿತು. ಸಂಜು ಸ್ಯಾಮ್ಸನ್, ಉರ್ವಿಲ್ ಪಟೇಲ್, ಸರ್ಫರಾಜ್ ಖಾನ್ ಮತ್ತು ಡೆವೋಲ್ಡ್ ಬ್ರೆವಿಸ್ ಬೇಗನೇ ಔಟಾದರು. ತಂಡ ಸಂಕಷ್ಟದಲ್ಲಿದ್ದಾಗ, ನಾಯಕ ರುತುರಾಜ್ ಗಾಯಕ್ವಾಡ್ ಮತ್ತು ಶಿವಂ ದುಬೆ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿ ಐದನೇ ವಿಕೆಟ್‌ಗೆ 43 ಎಸೆತಗಳಲ್ಲಿ 59 ರನ್‌ಗಳ ಜೊತೆಯಾಟ ನಡೆಸಿದರು.

ಆದರೆ ಶಿವಂ ದುಬೆ 17 ಎಸೆತಗಳಲ್ಲಿ 22 ರನ್ ಗಳಿಸಿ ಔಟಾಗುವ ಮೂಲಕ ಈ ಜೊತೆಯಾಟ ಮುರಿದುಬಿತ್ತು. ಕಾರ್ತಿಕ್ ಶರ್ಮಾ 9 ಎಸೆತಗಳಲ್ಲಿ 15 ರನ್‌ಗಳಿಗೆ ಸುಸ್ತಾದರೆ, ಜೇಮಿ ಓವರ್ಟನ್ 6 ಎಸೆತಗಳಲ್ಲಿ 18 ರನ್ ಗಳಿಸಿ ಔಟಾದರು. ನಾಯಕ ರುತುರಾಜ್ ಗಾಯಕ್ವಾಡ್ ಕೊನೆಯವರೆಗೂ ಹೋರಾಡಿ 60 ಎಸೆತಗಳಲ್ಲಿ 6 ಬೌಂಡರಿ ಮತ್ತು 4 ಸಿಕ್ಸರ್‌ಗಳೊಂದಿಗೆ ಅಜೇಯ 74 ರನ್ ಗಳಿಸಿದರು.

### ಗುಜರಾತ್‌ಗೆ ಸುಲಭ ಜಯ

ಈ ಗುರಿಯ ಬೆನ್ನುಹತ್ತಿದ ಗುಜರಾತ್ ಪರ ಸಾಯಿ ಸುದರ್ಶನ್ ಮತ್ತು ಶುಭಮನ್ ಗಿಲ್ ಪವರ್ ಪ್ಲೇನಲ್ಲಿ ಉತ್ತಮ ಪ್ರದರ್ಶನ ನೀಡಿದರು. ಇವರಿಬ್ಬರು ಮೊದಲ ವಿಕೆಟ್‌ಗೆ 58 ರನ್‌ಗಳ ಜೊತೆಯಾಟವಾಡಿದರು. 23 ಎಸೆತಗಳಲ್ಲಿ 33 ರನ್ ಗಳಿಸಿ ಶುಭ್‌ಮನ್ ಗಿಲ್ ಔಟಾಗುವ ಮೂಲಕ ಈ ಜೊತೆಯಾಟ ಮುರಿದುಬಿತ್ತು. ಆ ಬಳಿಕ ಜೊತೆಯಾದ ಜೋಸ್ ಬಟ್ಲರ್ ಹಾಗೂ ಸಾಯಿ ಸುದರ್ಶನ್ ತಂಡದ ಗೆಲುವನ್ನು ಖಚಿತಪಡಿಸಿದರು. ಸಾಯಿ ಸುದರ್ಶನ್ 33 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅಂತಿಮವಾಗಿ ಅವರು 46 ಎಸೆತಗಳಲ್ಲಿ 4 ಬೌಂಡರಿ ಮತ್ತು 7 ಸಿಕ್ಸರ್‌ಗಳೊಂದಿಗೆ 87 ರನ್ ಗಳಿಸಿದರೆ, ಜೋಸ್ ಬಟ್ಲರ್ 39 ರನ್ ಗಳಿಸಿ ಅಜೇಯರಾಗಿ ಉಳಿದರು.

# ಕನ್ನಡತಿ ನಾಗಿಣಿ ಬಂಗಾರದ ಬೇಟೆ

**ತುಮಕೂರು: ಏ.26:** ತುಮಕೂರಿನಲ್ಲಿ ನಡೆಯುತ್ತಿರುವ 24ನೇ ರಾಷ್ಟ್ರೀಯ ಕಿರಿಯರ (20 ವಯೋಮಿತಿ) ಅಥ್ಲೆಟಿಕ್ಸ್ ಕ್ರೀಡಾಕೂಟದ 3ನೇ ಹಾಗೂ ಕೊನೆ ದಿನವಾದ ಭಾನುವಾರ ಕರ್ನಾಟಕ ನಾಲ್ವರು ಅಥ್ಲೀಟ್‌ಗಳು ಪದಕಗಳ ಬೇಟೆಯಾಡಿದರು. ಈ ಮೂಲಕ ಈ ಕ್ರೀಡಾಕೂಟದಲ್ಲಿ ಕರ್ನಾಟಕ ಐದು ಪದಕ ಗೆದ್ದ ಸಾಧನೆ ಮಾಡಿತು. ಐದರಲ್ಲಿ ನಾಲ್ಕು ಪದಕ ಮಹಿಳೆಯರು ಗೆದ್ದಿದ್ದಾರೆ.

ತುಮಕೂರು ಜಿಲ್ಲಾಡಳಿತ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆ ಸಹಯೋಗದೊಂದಿಗೆ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕ್ರೀಡಾಕೂಟದ ಜೂನಿಯರ್ ಮಹಿಳೆಯರ 800 ಮೀಟರ್ ಓಟದಲ್ಲಿ ಕರ್ನಾಟಕದ ನಾಗಿಣಿ ಸ್ವರ್ಣ ಪದಕ ಗೆದ್ದಿದ್ದಾರೆ. 2:12.06 ಸೆಕೆಂಡ್‌ನಲ್ಲಿ ಕ್ರಮಿಸಿದ ನಾಗಿಣಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಮಹಿಳೆಯರ 400 ಮೀಟರ್ ಹರ್ಡಲ್ಸ್ ವಿಭಾಗದಲ್ಲಿ ಕರ್ನಾಟಕ ಅಪೂರ್ವ ಆನಂದ್ ನಾಯಕ್ ಬೆಳ್ಳಿ, ಮಹಿಳೆಯರ ಜಾವಲಿನ್ ಥ್ರೋನಲ್ಲಿ ಕರ್ನಾಟಕದ ಭವ್ಯ ಸಿ.ಜೆ. ಕಂಚು, ಮತ್ತು ಪುರುಷರ 3000 ಮೀಟರ್ ಸ್ಟೀಪಲ್ ಚೇಸ್‌ನಲ್ಲಿ ನಿಖಿನ್ ಸಿ. ಕಂಚಿನ ಪದಕ ಗೆದ್ದಿದ್ದಾರೆ. ಮಹಿಳೆಯ 100 ಮೀಟರ್ ಹರ್ಡಲ್ಸ್ ವಿಭಾಗದಲ್ಲಿ ನುಪುರ ಹೊಳ್ಳ ಕಂಚಿನ ಪದಕ ಗೆದ್ದಿದ್ದರು. 100 ಮೀ.ಓಟದಲ್ಲಿ ಸ್ವರ್ಣ ಗೆದ್ದಿದ್ದ ಅಭಯ್ ಸಿಂಗ್, 200 ಮೀ.ಓಟದಲ್ಲೂ ಚಿನ್ನದ ಬೇಟೆಯಾಡಿದರು. ಈ ಮೂಲಕ ಚಿನ್ನದ ಡಬಲ್ ಸಾಧನೆ ಮಾಡಿ ಸಂಭ್ರಮಿಸಿದರು.

**ಫಲಿತಾಂಶ: ಪುರುಷರ ವಿಭಾಗ**

200 ಮೀ. ಓಟ: 1. ಅಭಯ್ ಸಿಂಗ್ (20.82 ಸೆ.) –ರಿಲಯನ್ಸ್ 2. ರುಶಿರಾಜ್ ಸಿಂಗ್ ಫೋಯಲ್ (21.25 ಸೆ.)– ಗುಜರಾತ್ 3. ರುದ್ರ ಶಿಂಧೆ (21.26 ಸೆ.)– ಮಹಾರಾಷ್ಟ್ರ

**800 ಮೀ. ಓಟ:** 1. ಮೋಗಲಿ ವೆಂಕಟರಾಮ್ ರೇ (1:49.02 ಸೆ.)– ಆಂಧ್ರಪ್ರದೇಶ 2. ಮಯಾಂಕ್ ಯಾದವ್ (1:50.27 ಸೆ.) –ರಾಜಸ್ಥಾನ 3. ಹರ್ಷಲ್ ಜೋಗೆ (1:50.69 ಸೆ.) –ಮಹಾರಾಷ್ಟ್ರ, **400 ಮೀ. ಹರ್ಡಲ್ಸ್:** 1. ಜಶನ್ಪ್ರೀತ್ ಸಿಂಗ್ (51.80 ಸೆ.)– ಪಂಜಾಬ್ 2. ಅಮಿತ್ ಕುಮಾರ್ (51.98 ಸೆ.)– ಉತ್ತರ ಪ್ರದೇಶ 3. ಸಾಹಿಲ್ ರಾಜ್ (52.96 ಸೆ.) –ಉತ್ತರ ಪ್ರದೇಶ, **3000 ಮೀ. ಸ್ಟೀಪಲ್ ಚೇಸ್:** 1. ಸುಮಿತ್ ರಾಠಿ (9:28.04 ಸೆ.)– ಹರ್ಯಾಣ 2. ವೇದಾಂತ್ ಸಂಜಯ್ ಟಿಕೋನೆ (9:31.48 ಸೆ.)– ಮಹಾರಾಷ್ಟ್ರ 3. ನಿಖಿನ್ ಸಿ. (9:35.25 ಸೆ.)– ಕರ್ನಾಟಕ, **ಜಾವಲಿನ್ ಥ್ರೋ:** 1. ರೋಹನ್ ಯಾದವ್ (73.37 ಮೀ.) –ಎನ್ ಸಿಒಇ ಪಾಟಿಯಾಲ 2. ಆಶೀಶ್ ಯಾದವ್ (73.12 ಮೀ.) –ಉತ್ತರ ಪ್ರದೇಶ 3. ರಿಷಬ್ ಗಿರಿ (72.96 ಮೀ.) –ರಿಲಯನ್ಸ್., **ಟ್ರಿಪಲ್ ಜಂಪ್:** 1. ರಾಯ್ಯಾನ್ ಪಿ. (15.75 ಮೀ.) –ತಮಿಳುನಾಡು 2. ಭೂಷಣ್ ಶಿಂಧೆ (15.67 ಮೀ.) –ಮಹಾರಾಷ್ಟ್ರ 3. ಧನುಶ್ ರಾಜ್ ಎಂ (15.60 ಮೀ.)– ಕೇರಳ, **ಡಿಸ್ಕಸ್ ಥ್ರೋ:** 1. ನಿಶ್ಚಯ್ (57.02 ಮೀ.) –ಹರ್ಯಾಣ 2. ವೈಭವ್ (56.09 ಮೀ.)– ಹಿಮಾಚಲ ಪ್ರದೇಶ 3. ರವಿ (54.34 ಮೀ.)–ರಾಜಸ್ಥಾನ, **ಹೈಜಂಪ್:** 1. ಬಸಂತ್ (2.21 ಮೀ.) –ನೇವಿ 2. ಅಫ್ರೋಜ್ ಅಹ್ಮದ್ (2.09 ಮೀ.)– ಜಾರ್ಖಂಡ್ 3. ಆಕಾಶ್ ಕುಮಾರ್ ವರ್ಮಾ (2.06 ಮೀ.) –ದೆಹಲಿ

**ಮಹಿಳೆಯರ ವಿಭಾಗ:**

**200 ಮೀ. ಓಟ:** 1. ಭೂಮಿಕಾ ನೆಹಾತೆ (24.21 ಸೆ.)– ಮಹಾರಾಷ್ಟ್ರ 2. ಆರತಿ (24.46 ಸೆ.) –ಹರ್ಯಾಣ 3. ನೀರು ಪಾಠಕ್ (24.50ಸೆ.) –ಎನ್ ಸಿಒಇ ತಿರುವನಂತಪುರ.

**800 ಮೀ. ಓಟ:** 1 . ನಾಗಿಣಿ (2:12.06 ಸೆ.)– ಕರ್ನಾಟಕ 2. ವಂಶಿಕಾ (2:13.13 ಸೆ.) –ಉತ್ತರ ಪ್ರದೇಶ 3. ಗೀತಿಕಾ ದಹಿಯಾ (2:13.49 ಸೆ.)– ಹರ್ಯಾಣ.

**400 ಮೀ. ಹರ್ಡಲ್ಸ್:** 1. ತನು ಚೌಧರಿ (59.38 ಸೆ.) –ಉತ್ತರ ಪ್ರದೇಶ 2. ಅಪೂರ್ವ ಆನಂದ್ ನಾಯಕ್ (1:01 42 ಸೆ.) –ಕರ್ನಾಟಕ 3. ಲತಿಕಾ ಧರನ್ (1:01:43 ಸೆ.) –ತಮಿಳುನಾಡು., **3000 ಮೀ. ಓಟ:** 1. ಸಾಕ್ಷಿ ಬಂಡಾರಿ (9:45.43 ಸೆ.)–ಮಹಾರಾಷ್ಟ್ರ 2. ಶ್ರದ್ಧಾ ಯಾದವ್ (9:45.49 ಸೆ.) –ಉತ್ತರ ಪ್ರದೇಶ 3. ದೀಪಿಕಾ ಶರ್ಮಾ (9:45.57 ಸೆ.) ಮಧ್ಯ ಪ್ರದೇಶ, **3000 ಮೀ. ಸ್ಟೀಪಲ್ ಚೇಸ್:** 1. ಮಾನ್ಸಿ ಯಾದವ್ (11:10.59 ಸೆ.)– ಮಹಾರಾಷ್ಟ್ರ 2. ಐಶ ವರ್ಮಾ (11:13.70 ಸೆ.) ಉತ್ತರ ಪ್ರದೇಶ 3. ಅನ್ನು (11:25.23 ಸೆ.) ಮಧ್ಯಪ್ರದೇಶ., **ಜಾವಲಿನ್ ಥ್ರೋ:** 1. ಪೂನಮ್ (51.64 ಮೀ.)–ಜೆಎಸ್ ಡಬ್ಲ್ಯು 2. ಭವ್ಯ ಪೈಲಾನಿಯಾ (48.87 ಮೀ.)–ಜೆಎಸ್ ಡಬ್ಲ್ಯು 3. ಭವ್ಯ ಸಿಜೆ (47.23 ಮೀ.)–ಕರ್ನಾಟಕ, **ಹೈ ಜಂಪ್:** 1. ಪೂಜಾ (1.80 ಮೀ.)–ಹರ್ಯಾಣ 2. ಜುಯಾನ್ ಮಂತುಶಾ (1.69 ಮೀ.)–ಪ.ಬಂಗಾಳ 3. ಸೋಲಂಕಿ ರಮಿಲಾ ಭೀಮ (1.63 ಮೀ.)– ಗುಜರಾತ್, **ಟ್ರಿಪಲ್ ಜಂಪ್:** 1. ಸಾಧನ ರವಿ (12.97 ಮೀ.) –ತಮಿಳುನಾಡು 2. ಜಸ್ಲಿನ್ ಕುಮಾರ್ (12.72 ಮೀ.) –ಪಂಜಾಬ್ 3. ಶಶಿ (12.12 ಮೀ.) –ಹರ್ಯಾಣ.,**ಹ್ಯಾಮರ್ ಥ್ರೋ:** 1. ನಂದಿನಿ (58.78 ಮೀ.) –ಉ.ಪ್ರದೇಶ 2. ಅನುಷ್ಕಾ ಯಾದವ್ (58.02 ಮೀ.) –ಉ.ಪ್ರದೇಶ 3. ಗುಲ್ಷಾನ್ ಸಿಂಗ್ (50.52 ಮೀ.) –ಉ.ಪ್ರದೇಶ **ಹೆಪ್ಟಾಥ್ಲಾನ್:** 1. ಜಾಸ್ ಕಿರಣ್ ಕೌರ್ (4367 ಅಂಕ) –ಉ.ಖಂಡ 2. ಅಲ್ಫಜ್ ಕೌರ್ ಗ್ರೆವಾಲ್ (4194 ಅಂಕ) –ಪಂಜಾಬ್ 3. ಖುಷಿ (4157 ಅಂಕ)–ಎನ್ ಸಿಒಇ ಪಾಟಿಯಾಲ.

# 18ನೇ ಆವೃತ್ತಿಯ ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್ ಹೊಸ ದಾಖಲೆ

## ಬುರುಂಡಿಯ ರೊಡ್ರಿಗಸ್ ಕ್ವಿಜೆರಾ, ರುವಾಂಡಾದ ಫ್ಲಾರೆನ್ಸ್ ನಿಯೋನ್ಕುರು ಚಾಂಪಿಯನ್ಸ್ | ಭಾರತೀಯರ ವಿಭಾಗದಲ್ಲಿ ಸಂಜೀವಿನಿ ಜಾಧವ್‌ಗೆ ಹ್ಯಾಟ್ರಿಕ್ ಚಿನ್ನ

**ಬೆಂಗಳೂರು, ಏ.26:** ನಗರದಲ್ಲಿ ಭಾನುವಾರ ನಡೆದ 18ನೇ ಆವೃತ್ತಿಯ ಟಿಸಿಎಸ್ ವರ್ಲ್ಡ್ 10ಕೆ ಮ್ಯಾರಥಾನ್‌ನಲ್ಲಿ ಹೊಸ ದಾಖಲೆಗಳು ನಿರ್ಮಾಣವಾಗಿವೆ. ಅಂತಾರಾಷ್ಟ್ರೀಯ ಎಲೈಟ್ ವಿಭಾಗದಲ್ಲಿ ಬುರುಂಡಿಯ ರೋಡ್ರಿಗ್ರಸ್ ಕ್ವಿಜೆರಾ ಪುರುಷರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಮಹಿಳೆಯರ ವಿಭಾಗದಲ್ಲಿ ರುವಾಂಡಾದ ಫ್ಲಾರೆನ್ಸ್ ನಿಯೋನ್ಕುರು ಚೊಚ್ಚಲ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ.

ಭಾರತೀಯರ ವಿಭಾಗದಲ್ಲಿ ಸಂಜೀವನಿ ಜಾಧವ್ ಸತತ ಮೂರನೇ ಬಾರಿಗೆ ಚಿನ್ನ ಗೆದ್ದು ಹ್ಯಾಟ್ರಿಕ್ ಸಾಧನೆಗೈದರೆ, ಪುರುಷರ ವಿಭಾಗದಲ್ಲಿ ಹರ್ಮನ್‌ಜೋತ್ ಸಿಂಗ್ ಅಗ್ರಸ್ಥಾನ ಪಡೆದಿದ್ದಾರೆ. ಮೂರು ವರ್ಷಗಳ ಹಿಂದೆ ಫೋಟೋ ಫಿನಿಶ್‌ನಲ್ಲಿ ಪ್ರಶಸ್ತಿ ಕೈತಪ್ಪಿಸಿಕೊಂಡಿದ್ದ ಬುರುಂಡಿಯ ರೋಡ್ರಿಗ್ರಸ್ ಕ್ವಿಜೆರಾ ಈ ಬಾರಿ ಪ್ರಶಸ್ತಿ ಗೆದ್ದರು. ಅವರು 27:31 ಸೆಕೆಂಡುಗಳಲ್ಲಿ ಗುರಿ ತಲುಪಿ, ನಾಲ್ಕು ವರ್ಷಗಳ ಹಿಂದೆ ಕೀನ್ಯಾದ ನಿಕೋಲಸ್ ಕಿಪ್ಕೊರಿರ್ ನಿರ್ಮಿಸಿದ್ದ ದಾಖಲೆಯನ್ನು ಮುರಿದರು. ಈ ಜಯದೊಂದಿಗೆ ಕ್ವಿಜೆರಾ ಒಟ್ಟು 34,000 ಅಮೆರಿಕನ್ ಡಾಲರ್ (ದಾಖಲೆಯ ಬೋನಸ್ ಸೇರಿ) ಬಹುಮಾನ ಪಡೆದರು.

**ಪ್ರಥಮ:** ರೋಡ್ರಿಗ್ರಸ್ ಕ್ವಿಜೆರಾ (ಬುರುಂಡಿ) – 27:31 (ಹೊಸ ದಾಖಲೆ)ದ್ವಿತೀಯ : ಹರ್ಬರ್ಟ್ ಕಿಬೆಟ್ (ಉಗಾಂಡಾ) – 27:39ತೃತೀಯ : ಗಿಲ್ಬರ್ಟ್ ಕಿಪ್ಕೊಸ್ಗೆಯ್ ಕಿಪ್ರೊಟಿಚ್ (ಕೀನ್ಯಾ) – 27:43ಅಂತಾರಾಷ್ಟ್ರೀಯ ಮಹಿಳಾ ವಿಭಾಗ

**: ಫ್ಲಾರೆನ್ಸ್‌ಗೆ ಚೊಚ್ಚಲ ಗೆಲುವು :** ತಮ್ಮ ಮೊದಲ 10ಕಿ ಓಟದಲ್ಲೇ ಅದ್ಭುತ ಪ್ರದರ್ಶನ ನೀಡಿದ ರವಾಂಡಾದ ಫ್ಲಾರೆನ್ಸ್ ನಿಯೋನ್ಕುರು 30:45 ನಿಮಿಷಗಳಲ್ಲಿ ರೇಸ್ ಮುಗಿಸಿ ಪ್ರಥಮ ಸ್ಥಾನ ಪಡೆದರು. ಕೀನ್ಯಾದ ಬ್ರೆಂಡಾ ಜೆಪ್ಚಿರ್ಚಿರ್ ತೀವ್ರ ಪೈಪೋಟಿ ನೀಡಿದರಾದರೂ ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು.

**ಪ್ರಥಮ:** ಫ್ಲಾರೆನ್ಸ್ ನಿಯೋನ್ಕುರು (ರುವಾಂಡಾ) – 30:45 ನಿಮಿಷದ್ವಿತೀಯ : ಬ್ರೆಂಡಾ ಜೆಪ್ಚಿರ್ಚಿರ್ (ಕೀನ್ಯಾ) – 30:59 ನಿಮಿಷತೃತೀಯ : ಚಾಲ್ತು ಡಿಡಾ ಡಿರಿಬಾ (ಇಥಿಯೋಪಿಯಾ) – 31:03 ನಿಮಿಷ: ಭಾರತೀಯ ಮಹಿಳೆಯರ ವಿಭಾಗದಲ್ಲಿ ಮಹಾರಾಷ್ಟ್ರದ ಸಂಜೀವನಿ ಜಾಧವ್ 35:01 ಸೆಕೆಂಡುಗಳಲ್ಲಿ ಗುರಿ ತಲುಪಿ ತಮ್ಮ ಐದನೇ ಹಾಗೂ ಸತತ ಮೂರನೇ ಟಿಸಿಎಸ್ 10ಕಿ ಪ್ರಶಸ್ತಿಯನ್ನು ಗೆದ್ದರು. ಅವರಿಗೆ 2,75,000 ರೂ. ಬಹುಮಾನ ಲಭಿಸಿತು.




ಪುರುಷರ ವಿಭಾಗದಲ್ಲಿ ಹರ್ಮನ್‌ಜೋತ್ ಸಿಂಗ್ (29:13 ಸೆಕೆಂಡ್) ಕೇವಲ ಒಂದು ಸೆಕೆಂಡ್‌ನಿಂದ ಕೂಟದ ದಾಖಲೆ ಮಿಸ್ ಮಾಡಿಕೊಂಡರೂ ಪ್ರಥಮ ಸ್ಥಾನ ಗಳಿಸಿದರು. ಅವರಿಗೆ 3,00,000 ರೂ. ಬಹುಮಾನ ಸಂದಿತು. ಕರ್ನಾಟಕದ ಶೈಲೇಶ್ ಕುಶ್ವಾಹ (29:21) ಎರಡನೇ ಸ್ಥಾನ ಪಡೆದು ಗಮನ ಸೆಳೆದರು. **ಭಾರತೀಯ ಪುರುಷರ ಫಲಿತಾಂಶ :**ಹರ್ಮನ್‌ಜೋತ್ ಸಿಂಗ್ – 29:13

ಶೈಲೇಶ್ ಕುಶ್ವಾಹ – 29:21 ದೀಪಕ್ ಭಟ್ – 29:52

ಭಾರತೀಯ ಮಹಿಳೆಯರ ಫಲಿತಾಂಶ:– ಸಂಜೀವನಿ ಜಾಧವ್ – 35:01 ಸೋನಿಯಾ – 35:31

ಭಾಗೀರಥಿ – 35:32

ಗ್ರೇಟರ್ ಬೆಂಗಳೂರು ಅಥಾರಿಟಿಯ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ್ ರಾವ್, ಶಾಸಕ ಎನ್. ಎ. ಹ್ಯಾರಿಸ್, ಅಥ್ಲೆಟಿಕ್ಸ್ ದಿಗ್ಗಜ ಆಟಗಾರ್ತಿ ಅಂಜು ಬಾಬಿ ಜಾರ್ಜ್ ಮತ್ತು ಅಂತಾರಾಷ್ಟ್ರೀಯ ರಾಯಭಾರಿ ಬ್ಲಾಂಕಾ ವ್ಲಾಸಿಕ್ ವಿಜೇತರಿಗೆ ಪ್ರಶಸ್ತಿ ವಿತರಿಸಿದರು.

## ಪ್ರವಾಸೋದ್ಯಕ್ಕೆ ಅನುಕೂಲ: ಡಿ.ಕೆ.ಶಿವಕುಮಾರ್

ಬೆಂಗಳೂರಿನಲ್ಲಿಂದು ಟಿಸಿಎಸ್ ವಿಶ್ವ 10ಕೆ ಮ್ಯಾರಥಾನ್ ಆಯೋಜಿಸಲಾಗಿತ್ತು. ವಿಧಾನಸೌಧದ ಮುಂದೆ ಆರಂಭವಾದ ಓಟಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋತ್ ಹಸಿರು ನಿಶಾನೆ ತೋರಿದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಂಸದ ತೇಜಸ್ವಿ ಸೂರ್ಯ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಸುಮಾರು 30 ಸಾವಿರಕ್ಕೂ ಹೆಚ್ಚು ಮಂದಿ ಮ್ಯಾರಥಾನ್ ನಲ್ಲಿ ಪಾಲ್ಗೊಂಡಿದ್ದರು. ಕಬ್ಬನ್ ರಸ್ತೆ, ಕಾಮರಾಜ ರಸ್ತೆ, ಅಂಬೇಡ್ಕರ್ ವೀಧಿ, ಹಲಸೂರು, ಫ್ರೇಜರ್ ಟೌನ್, ಶಿವಾಜಿನಗರ ಮೊದಲಾದ ಪ್ರದೇಶಗಳಲ್ಲಿ ಮ್ಯಾರಥಾನ್ ನಡೆಯಿತು.

ಮ್ಯಾರಥಾನ್ ಅಂಗವಾಗಿ ಎಲ್ಲ ಪ್ರಮುಖ ರಸ್ತೆಗಳಲ್ಲಿ ಪೊಲೀಸರು ಬೆಳಗ್ಗೆ 11 ಗಂಟೆಯವರೆಗೆ ಸಂಚಾರವನ್ನು ಸಂಪೂರ್ಣ ನಿರ್ಬಂಧಿಸಿದ್ದು, ಪರ್ಯಾಯ ಮಾರ್ಗಗಳನ್ನು ಸೂಚಿಸಿದ್ದರು.

ಈ ವೇಳೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, ಬೆಂಗಳೂರಿನಲ್ಲಿ ಮ್ಯಾರಥಾನ್ ಆಯೋಜಿಸಲಾಗಿದ್ದ ಎಲ್ಲ ಮಾರ್ಗಗಳು ಅದ್ಭುತವಾಗಿವೆ. ವಿದೇಶಗಳಿಂದ ಬಂದವರು ಸಹ ಮ್ಯಾರಥಾನ್ ಟ್ರಾಕ್ ಅನ್ನು ಪರಿಶೀಲಿಸಿ, ಅಭಿನಂದಿಸಿದ್ದಾರೆ. ಬೆಂಗಳೂರಿನಲ್ಲಿ ಮ್ಯಾರಥಾನ್ ಆಯೋಜನೆ ಮಾಡುವುದರಿಂದ, ಪ್ರವಾಸೋದ್ಯಮಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರು.

## 36 ಸಾವಿರಕ್ಕೂ ಹೆಚ್ಚು ಮಂದಿ ಭಾಗಿ, ಇತಿಹಾಸ ಬರೆದ ಓಟ
## ಉಮರ್ ಅಬ್ದುಲ್ಲಾ, ತೇಜಸ್ವಿಸೂರ್ಯ ಮತ್ತಿತರರ ಗಣ್ಯರು ಭಾಗಿ

ನಗರದಲ್ಲಿ ಭಾನುವಾರ ನಡೆದ ಟಿಸಿಎಸ್ ವರ್ಲ್ಡ್ 10ಕೆ 18ನೇ ಆವೃತ್ತಿ ಹೊಸ ಇತಿಹಾಸ ಬರೆದಿದೆ. ಬೇಸಿಗೆಯ ಬಿಸಿಲನ್ನೂ ಲೆಕ್ಕಿಸದೆ ನಗರದ 36,000ಕ್ಕೂ ಹೆಚ್ಚು ಕ್ರೀಡಾಸಕ್ತರು ಅತ್ಯಂತ ಉತ್ಸಾಹದಿಂದ ಈ ಓಟದಲ್ಲಿ ಭಾಗವಹಿಸಿದ್ದರು.ಈ ಬಾರಿಯ ಓಟದಲ್ಲಿ ರಾಜಕೀಯ ಮತ್ತು ರಾಜಮನೆತನದ ಗಣ್ಯರು ಭಾಗವಹಿಸಿದ್ದು ವಿಶೇಷವಾಗಿತ್ತು. ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಉಮರ್ ಅಬ್ದುಲ್ಲಾ ಅವರು ತಮ್ಮ ಪುತ್ರರಾದ ಝೂಹಿದ್ ಮತ್ತು ಜಮೀರ್ ಅವರೊಂದಿಗೆ ಸ್ಪರ್ಧಿಸಿದರು. ವಿಶೇಷವೆಂದರೆ, ಉಮರ್ ಅಬ್ದುಲ್ಲಾ ಅವರು ಕೇವಲ 50 ನಿಮಿಷಗಳಲ್ಲಿ ಗುರಿ ತಲುಪಿ ತಮ್ಮ ಪುತ್ರರಿಗಿಂತ ಆರು ನಿಮಿಷ ಮುಂಚಿತವಾಗಿ ಓಟ ಪೂರೈಸಿದರು.

ಬೆಂಗಳೂರಿನ ಹವಾಮಾನ ಮತ್ತು ಇಲ್ಲಿನ ಜನರ ಪ್ರೋತ್ಸಾಹ ಅದ್ಭುತವಾಗಿದೆ. ಜನರ ಬೆಂಬಲ ನಮಗೆ ಹೆಚ್ಚಿನ ಶಕ್ತಿಯನ್ನು ನೀಡುತ್ತದೆ" ಎಂದು ಓಮರ್ ಅಬ್ದುಲ್ಲಾ ಸಂತಸ ವ್ಯಕ್ತಪಡಿಸಿದರು. ಮೈಸೂರು ಸಂಸ್ಥಾನದ ಮಹಾರಾಜರು ಹಾಗೂ ಸಂಸದರಾದ ಯದುವೀರ್ ಅವರು ಓಪನ್ ಕೆಟಗರಿಯಲ್ಲಿ ಭಾಗವಹಿಸಿದ್ದರು. ಬೆಂಗಳೂರಿನ ಓಟದ ಸಮುದಾಯದೊಂದಿಗೆ ಬೆರೆಯಲು ಇದು ಉತ್ತಮ ಅವಕಾಶ. ಮುಂದಿನ ದಿನಗಳಲ್ಲಿ ದೆಹಲಿ, ಕೋಲ್ಕತ್ತಾ ಮತ್ತು ಮುಂಬೈ ಓಟಗಳನ್ನೂ ಪೂರ್ಣಗೊಳಿಸಿ 'ಪ್ರೋಕ್ಯಾಮ್ ಸ್ಲ್ಯಾಮ್' ಮುಗಿಸುವ ಗುರಿ ಹೊಂದಿದ್ದೇನೆ" ಎಂದು ತಿಳಿಸಿದರು. ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಅವರು ತಮ್ಮ ಪತ್ನಿ ಶಿವಶ್ರೀ ಜೊತೆ ಭಾಗವಹಿಸಿದ್ದರು. ಶಿವಶ್ರೀ ಅವರು ಮೊದಲ ಬಾರಿಗೆ 10ಕೆ ವಿಭಾಗದಲ್ಲಿ ಭಾಗವಹಿಸಿದ್ದು, ತೇಜಸ್ವಿ ಸೂರ್ಯ ಅವರು 61 ನಿಮಿಷಗಳಲ್ಲಿ ಓಟ ಮುಗಿಸಿ ತಮ್ಮ ಪತ್ನಿಗಾಗಿ ಗುರಿಯ ಬಳಿ ಕಾಯುತ್ತಾ, ಅವರನ್ನು ಪ್ರೋತ್ಸಾಹಿಸಿದರು.